ಬುಧವಾರ, ಆಗಸ್ಟ್ 16, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 227 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮನುಷ್ಯರಂತೆ ಸುಲಭವಾಗಿ ಚಲಿಸಲು ಸಹಾಯವಾಗುವಂತೆ ರೋಬಾಟ್‌ಗಳಿಗೆ ಕೃತಕ ಸ್ನಾಯುವನ್ನು ಸೃಷ್ಟಿಸಲಾಗಿದೆ



77ನೇ ಸ್ವಾತಂತ್ರ್ಯ ಸಂಭ್ರಮ • ಕುಟುಂಬ ರಾಜಕಾರಣ ವಿರುದ್ಧ ವಾಗ್ದಾಳಿ


ಚುನಾವಣೆ: ಪ್ರಧಾನಿ ಓಂಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: 77 ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕೆಂಪುಕೋಟೆಯಿಂದ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಗೆ ದೇಶದ ಜನರ ಮನೋಭೂಮಿಕೆ ಅಣಿಗೊಳಿಸಲು ತಮ್ಮ ಸರ್ಕಾರದ ಸಾಧನೆಗಳನ್ನು ವಿವರಿಸಿದರು.

‘ಬದಲಾವಣೆ ತರುವ ಭರವಸೆಯೊಂದಿಗೆ ನಾನು 2014ರಲ್ಲಿ ಅಧಿಕಾರಕ್ಕೆ ಬಂದೆ. ನನ್ನ ಸಾಧನೆಯ ಆಧಾರದ ಮೇಲೆ 2019ರಲ್ಲಿ ಮತ್ತೊಮ್ಮೆ ನನಗೆ ಆಶೀರ್ವದಿಸಿದ್ದೀರಿ. ಬದಲಾವಣೆ ತರುವ ಭರವಸೆಯೇ ಮತ್ತೊಮ್ಮೆ ನನ್ನನ್ನು ಇಲ್ಲಿ ತಂದು ನಿಲ್ಲಿಸಿತು’ ಎಂದ ಅವರು, ‘ಮುಂದಿನ ವರ್ಷ ಆಗಸ್ಟ್ 15ರಂದು ಇದೇ ಕೆಂಪುಕೋಟೆಯಿಂದ ಮಾತನಾಡಿ, ದೇಶದ ಸಾಧನೆಗಳನ್ನು, ನಿಮ್ಮ ಸಾಮರ್ಥ್ಯಗಳನ್ನು ಜನರ ಮುಂದಿಡುವೆ’ ಎಂದರು.

ಭ್ರಷ್ಟಾಚಾರ ಕುರಿತು ಪ್ರಸ್ತಾಪಿಸಿದ ಅವರು, ‘2047ರ ವೇಳೆಗೆ ಭಾರತವು ಅಭಿವೃದ್ಧಿ ಹೊಂದಿದ ದೇಶವಾಗಿ ಹೊರಹೊಮ್ಮಬೇಕಾದರೆ ಯಾವುದೇ ಪರಿಸ್ಥಿತಿಯಲ್ಲಿಯೂ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ ಎಂಬ ದೃಢನಿರ್ಧಾರ ಅಗತ್ಯ. ಜೊತೆಗೆ, ಪ್ರಾಮಾಣಿಕತೆ, ಪಾರದರ್ಶಕತೆ ಹಾಗೂ ವಸ್ತುನಿಷ್ಠತೆಯೂ ಬೇಕು’ ಎಂದು ಪ್ರತಿಪಾದಿಸಿದರು.



ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ನವದೆಹಲಿಯ ಕೆಂಪು ಕೋಟೆಯಲ್ಲಿ ಭಾಷಣ ಮಾಡಿದರು –ಪಿಟಿಐ ಚಿತ್ರ

> **ದೇಶದ ಪ್ರಜೆಗಳಿಗಾಗಿಯೇ ನಾನು ಉಸಿರಾಡುತ್ತಿರುವೆ. ನಿಮ್ಮನ್ನು ನನ್ನ ಕುಟುಂಬದ ಸದಸ್ಯರೆಂದೇ ಪರಿಗಣಿಸುತ್ತೇನೆ**
> **ನರೇಂದ್ರ ಮೋದಿ,** ಪ್ರಧಾನಿ

‘ಭ್ರಷ್ಟಾಚಾರ, ತುಷ್ಟೀಕರಣ ಹಾಗೂ ಸ್ವಜನಪಕ್ಷಪಾತ ಎಂಬ ಅನಿಷ್ಟಗಳು ದೇಶವನ್ನು ಬಾಧಿಸುತ್ತಿವೆ. ಈ ಮೂರು ಅನಿಷ್ಟಗಳ ನಿರ್ಮೂಲನೆಯಲ್ಲಿಯೇ ಒಬಿಸಿಗಳು, ಪರಿಶಿಷ್ಟರು, ಪಸಮಂದಾ ಸಮುದಾಯದವರು, ಬುಡಕಟ್ಟು ಜನರು, ಮಹಿಳೆಯರು ಹಾಗೂ ಬಡವರ ಅಭ್ಯುದಯ ಅಡಗಿದೆ’ ಎಂದರು.

‘ಈ ಎಲ್ಲ ಸಮುದಾಯಗಳ ಹಕ್ಕುಗಳನ್ನು ಕಸಿದುಕೊಂಡಿರುವ ಕುಟುಂಬ ರಾಜಕಾರಣವನ್ನು ಸೋಲಿಸುವ ಮೂಲಕ ಮುಂದಿನ ವರ್ಷ ಇದೇ ವೇದಿಕೆಯಿಂದ ದೇಶವನ್ನು ಉದ್ದೇಶಿಸಿ ಭಾಷಣ ಮಾಡುವೆ’ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದರು.

90 ನಿಮಿಷಗಳ ತಮ್ಮ ಭಾಷಣದ ಮೂಲಕ ಅವರು, ವಿರೋಧ ಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ ವಿರುದ್ಧದ ಹೋರಾಟದ ವಿಷಯ ಏನಾಗಿರಲಿದೆ ಎಂಬುದನ್ನು ಸೂಚ್ಯವಾಗಿ ದೇಶದ ಮುಂದಿಟ್ಟರು.

‘ಕುಟುಂಬಕ್ಕಾಗಿ, ಕುಟುಂಬದಿಂದ ಮತ್ತು ಕುಟುಂಬಕ್ಕೋಸ್ಕರ ಎಂಬ ಮಂತ್ರ ಜಪಿಸುವ ಪಕ್ಷಗಳು ಸ್ವಜನ ಪಕ್ಷಪಾತ ಅನುಸರಿಸುತ್ತಿವೆ. ಈ ಅನಿಷ್ಟದಿಂದಾಗಿ ನಮ್ಮ ಪ್ರಜಾಪ್ರಭುತ್ವ ಭಾರಿ ಸಂಕಷ್ಟ ಎದುರಿಸಿದೆ. ಸ್ವಜನ ಪಕ್ಷಪಾತ, ತುಷ್ಟೀಕರಣ ಹಾಗೂ ಭ್ರಷ್ಟಾಚಾರದ ವಿರುದ್ಧ ಸಾಮೂಹಿಕ ಹೋರಾಟ ಅಗತ್ಯ’ ಎಂದರು.

9ನೇ ಪುಟ ನೋಡಿ

ಕಾರ್ಯಕ್ರಮಕ್ಕೆ ಖರ್ಗೆ ಗೈರು

ನವದೆಹಲಿ (ಪಿಟಿಐ): ರಾಜ್ಯಸಭೆ ವಿರೋಧ ಪಕ್ಷದ ನಾಯಕರೂ ಆದ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೆಂಪು ಕೋಟೆಯಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿರಲಿಲ್ಲ. ಇಲ್ಲಿ, ಪ್ರಧಾನಿ ನರೇಂದ್ರ ಮೋದಿ ಧ್ವಜಾರೋಹಣ ಮಾಡಿದರು.



ಖರ್ಗೆ ಅವರಿಗಾಗಿ ಮೀಸಲಿಟ್ಟಿದ್ದ ಆಸನ ಕಾರ್ಯಕ್ರಮದ ಕಡೆಯವರೆಗೂ ಖಾಲಿ ಉಳಿದಿತ್ತು. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸೇರಿದಂತೆ ಹಲವು ಪ್ರಮುಖರು, ರಾಜತಾಂತ್ರಿಕರು, ಸಚಿವರು ಭಾಗವಹಿಸಿದ್ದರು.

9ನೇ ಪುಟ ನೋಡಿ

‘ದುಷ್ಟರ ಆಟ ನಡೆಯದು’

ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಬಿಜೆಪಿ ವಿರುದ್ಧ ಸಿದ್ದರಾಮಯ್ಯ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದ ಜನರು ಒಡೆದಾಳುವವರ ವಿರುದ್ಧ ನಿಂತಿದ್ದಾರೆ. ಶಾಂತಿಯುತ ಸಮಾಜವಿದ್ದರೆ ಮಾತ್ರ ಅಭಿವೃದ್ಧಿ ಸಾಧ್ಯ ಎಂಬುದು ನಮ್ಮ ಜನರಿಗೆ ಅರ್ಥವಾಗಿದೆ. ದುಷ್ಟರ ಆಟಗಳು ಬಹುಕಾಲ ನಡೆಯುವುದಿಲ್ಲ ಎಂಬುದನ್ನು ಕರ್ನಾಟಕದ ಜನರೇ ಸಾಬೀತು ಮಾಡಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಮಂಗಳವಾರ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಭಾಷಣ ಮಾಡಿದ ಅವರು, ಬಿಜೆಪಿ ಮತ್ತು ಕೇಂದ್ರ ಸರ್ಕಾರದ ಧೋರಣೆಗಳ ವಿರುದ್ಧ ಕಿಡಿಕಾರಿದರು.

‘ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರ ಉದ್ದೇಶಪೂರ್ವಕವಾಗಿಯೇ ಸಹಕಾರ ನೀಡುತ್ತಿಲ್ಲ’ ಎಂದು ಟೀಕಿಸಿದರು.

‘ಇವನಾರವನೆನ್ನದೆ ಒಳಗೊಳ್ಳುವ ಆಡಳಿತ ನಡೆಸಲು ನಮ್ಮನ್ನು ಆರಿಸಿದ್ದಾರೆ. ಈ ಒಳಗೊಂಡು ಬಾಳುವ, ಎಲ್ಲರ ಅಭಿವೃದ್ಧಿಯನ್ನು ಬಯಸುವ ಕರ್ನಾಟಕದ ಹೊಸ ಮಾದರಿಗಳನ್ನು ಇನ್ನಷ್ಟು ಪ್ರಬಲಗೊಳಿಸಲಾಗುವುದು’ ಎಂದು ಭರವಸೆ ನೀಡಿದರು.

‘ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ನಮ್ಮ ಮೊದಲ ಆದ್ಯತೆ. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳುಸುದ್ದಿ ಹರಡುವ, ಸಾಮರಸ್ಯ ಕದಡುವ ಯತ್ನ ಮತ್ತು ಮತೀಯ ಗೂಂಡಾಗಿರಿ ಹೆಸರಿನಲ್ಲಿ ನಡೆಯುವ ಅನೈತಿಕ ದಬ್ಬಾಳಿಕೆಯನ್ನು ಖಂಡಿತ ಸಹಿಸುವುದಿಲ್ಲ’ ಎಂದರು.

‘ಸರ್ವಜನಾಂಗದ ಶಾಂತಿಯ ತೋಟ ಎಂಬ ಕುವೆಂಪು ಅವರ ಆಶಯವನ್ನು ಈಡೇರಿಸುವುದೇ ಸರ್ಕಾರದ ಪ್ರಧಾನ ಧ್ಯೇಯ. ಹೀಗಾಗಿ, ನಾಗರಿಕರು ವಿಚ್ಛಿದ್ರಕಾರಿ ಶಕ್ತಿಗಳ ಪ್ರಚೋದನೆಗೆ ಒಳಗಾಗದೆ ಸಾಮರಸ್ಯ, ಸಹಬಾಳ್ವೆಯ ಮಹತ್ವ ಎತ್ತಿ ಹಿಡಿಯಬೇಕು’ ಎಂದು ಕೋರಿದರು.



ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು –ಪ್ರಜಾವಾಣಿ ಚಿತ್ರ

’ದೇಶದಲ್ಲಿಯೇ ಅತಿ ಹೆಚ್ಚು ತೆರಿಗೆ ಪಾವತಿಸುವ ರಾಜ್ಯಗಳಲ್ಲಿ ಕರ್ನಾಟಕ ಎರಡನೆಯ ಸ್ಥಾನದಲ್ಲಿದ್ದು, ಸುಮಾರು ₹4 ಲಕ್ಷ ಕೋಟಿಗೂ ಹೆಚ್ಚು ಮೊತ್ತವನ್ನು ಕೇಂದ್ರಕ್ಕೆ ಪಾವತಿಸುತ್ತಿದೆ. ಆದರೆ, ನಮಗೆ ವಾಪಸ್ ದೊರೆಯುತ್ತಿರುವುದು ₹50 ಸಾವಿರ ಕೋಟಿ ಮಾತ್ರ. ನ್ಯಾಯಯುತವಾಗಿ ದೊರೆಯುವ ಸಂಪನ್ಮೂಲಗಳು ಕೇಂದ್ರದಿಂದ ಮರಳಿ ಬಂದರೆ ನಮ್ಮದು ಅತ್ಯಂತ ಶ್ರೀಮಂತ ರಾಜ್ಯವಾಗಲಿದೆ’ ಎಂದು ವಿವರಿಸಿದರು.

ಗ್ಯಾರಂಟಿ ಯೋಜನೆಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಿದ ಅವರು, ’ಬೆಲೆ ಏರಿಕೆ, ನಿರುದ್ಯೋಗ, ಭ್ರಷ್ಟಾಚಾರ ಮುಂತಾದ ಕಾರಣಗಳಿಗಾಗಿ ನಾಡಿನ ಜನರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರು. ಹೀಗಾಗಿಯೇ, ಜನರ ಆರ್ಥಿಕ, ಸಾಮಾಜಿಕ ಚೈತನ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಸಾರ್ವತ್ರಿಕ ಮೂಲ ಆದಾಯ ಎನ್ನುವ ಹೊಸ ಆರ್ಥಿಕ ಪ್ರಮೇಯವನ್ನು ಅಳವಡಿಸಿಕೊಂಡು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ’ ಎಂದು ಪ್ರತಿಪಾದಿಸಿದರು.

ಮುಖ್ಯಮಂತ್ರಿ ಭರವಸೆಗಳು

- ನಗರ ಪ್ರದೇಶದ ಕೆರೆಗಳು ಸಂರಕ್ಷಣೆ ಸೇರಿದಂತೆ ಜನರಿಗೆ ಸ್ವಚ್ಛ ಕುಡಿಯುವ ನೀರು ಒದಗಿಸಲು ₹3400 ಕೋಟಿ ಯೋಜನೆಯನ್ನು ರೂಪಿಸಲಿದೆ
- ಆ.27ಕ್ಕೆ ‘ಗೃಹಲಕ್ಷ್ಮಿ’ ಯೋಜನೆ ಜಾರಿ
- ಸ್ಥಗಿತಗೊಂಡಿರುವ ಕೃಷಿಭಾಗ್ಯ, ಅನುಗ್ರಹ ಯೋಜನೆ, ವಿದ್ಯಾಸಿರಿ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸೇರಿದಂತೆ ಹಲವು ಯೋಜನೆಗಳ ಮರುಜಾರಿ
- ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ವಾರಕ್ಕೆ ಎರಡು ದಿನ ಮೊಟ್ಟೆ
- ಸರ್ಕಾರಿ ಬಸ್‌ಗಳಲ್ಲಿ ಟ್ರ್ಯಾಕಿಂಗ್ ಮತ್ತು ಪ್ಯಾನಿಕ್ ಬಟನ್ ವ್ಯವಸ್ಥೆ
- ಇಂದಿರಾ ಕ್ಯಾಂಟೀನ್‌ಗಳ ಮರು ಪ್ರಾರಂಭ. ಇದಕ್ಕಾಗಿ ₹100 ಕೋಟಿ ಮೀಸಲು. ಪ್ರತಿ ಪ್ಲೇಟ್‌ಗೆ ₹5 ರಿಂದ ₹10 ಹೆಚ್ಚುವರಿ ಮೊತ್ತ ನೀಡಿ, ಜನರಿಗೆ ಹಿಂದಿನ ದರದಲ್ಲಿಯೇ ಉತ್ತಮ ಆಹಾರ
- ದೇವನಹಳ್ಳಿ, ನೆಲಮಂಗಲ, ಹೊಸಕೋಟೆ, ದೊಡ್ಡಬಳ್ಳಾಪುರ, ಮಾಗಡಿಯಲ್ಲಿ ಉಪನಗರ ಟೌನ್‌ಶಿಪ್‌ಗಳ ಅಭಿವೃದ್ಧಿ
- ಹುಮನಾಬಾದ್ - ಕಲಬುರಗಿ ಮತ್ತು ಚಳ್ಳಕೆರೆ ರಾಷ್ಟ್ರೀಯ ಹೆದ್ದಾರಿ ನಡುವೆ ಖಾಸಗಿ ಸಹಭಾಗಿತ್ವದಲ್ಲಿ ಎಕ್ಸ್‌ಪ್ರೆಸ್-ವೇ ನಿರ್ಮಿಸಿ ಕಲ್ಯಾಣ ಕರ್ನಾಟಕ ಮತ್ತು ಬೆಂಗಳೂರು ನಡುವೆ ರಸ್ತೆ ಸಂಪರ್ಕ ಇನ್ನಷ್ಟು ಉತ್ತಮ ಪಡಿಸಲಾಗುವುದು

ಹೊಸ ಅಂಕಣ


ನುಡಿ ಬೆಳಗು 7

ಪರಿವರ್ತನಾ ಸಂಸ್ಥೆ: ರಾಜೀವ್ ಗೌಡ ಉಪಾಧ್ಯಕ್ಷ

ಬೆಂಗಳೂರು: ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯ (ಯೋಜನಾ ಮಂಡಳಿ) ಉಪಾಧ್ಯಕ್ಷರಾಗಿ ರಾಜ್ಯ ಸಭೆಯ ಮಾಜಿ ಸದಸ್ಯ ಎಂ.ವಿ. ರಾಜೀವ್ ಗೌಡ ಅವರನ್ನು ನೇಮಿಸಲಾಗಿದೆ.



ರಾಜೀವ್ ಗೌಡ



ಪ್ರಕಾಶ ಹುಕ್ಕೇರಿ

ಅವರಿಗೆ ಸಂಪುಟ ದರ್ಜೆಯ ಸಚಿವ ಸ್ಥಾನ ನೀಡಲಾಗಿದೆ. ಆರ್ಥಿಕ ಮತ್ತು ಶಿಕ್ಷಣ ತಜ್ಞರಾದ ರಾಜೀವ್ ಗೌಡ ಅವರು ಬೆಂಗಳೂರಿನ ಐಐಎಂ ಪ್ರಾಧ್ಯಾಪಕರಾಗಿ, ಸಾರ್ವಜನಿಕ ನೀತಿ ಕೇಂದ್ರದ ಮುಖ್ಯಸ್ಥರಾಗಿ, ಆರ್‌ಬಿಐ ಕೇಂದ್ರ ಮಂಡಳಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯ ಸಂಚಾಲಕರಾಗಿದ್ದರು.

ಪ್ರಕಾಶ ಹುಕ್ಕೇರಿ ದೆಹಲಿ ಪ್ರತಿನಿಧಿ: ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿಯಾಗಿ ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಅವರನ್ನು ನೇಮಿಸಲಾಗಿದೆ. ಅವರಿಗೂ ಸಂಪುಟ ದರ್ಜೆಯ ಸ್ಥಾನ ನೀಡಲಾಗಿದೆ. ಹುಕ್ಕೇರಿ ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೆಎಎಸ್: ವರ್ಗಾವಣೆ, ನೇಮಕದಲ್ಲಿ ರಾಜಕೀಯ ಪ್ರಭಾವ, ಪಕ್ಷಪಾತ –ವರದಿ

ಭರ್ತಿಯಾಗದ 200ಕ್ಕೂ ಹೆಚ್ಚು ಹುದ್ದೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯದಲ್ಲಿ ನಿಯಮಿತವಾಗಿ ನೇಮಕಾತಿ ನಡೆಯದ ಕಾರಣ ಕೆಎಎಸ್ ಅಧಿಕಾರಿಗಳ 200ಕ್ಕೂ ಹೆಚ್ಚು ಹುದ್ದೆಗಳು ದಶಕದಿಂದ ಖಾಲಿ ಉಳಿದಿವೆ. ವರ್ಗಾವಣೆ ರಾಜಕೀಯ, ಪ್ರಭಾವಿಗಳಲ್ಲದ ಶೇ 50ಕ್ಕೂ ಹೆಚ್ಚು ಅಧಿಕಾರಿಗಳು ‘ನಾನ್ ಎಕ್ಸಿಕ್ಯೂಟಿವ್’ ಸ್ಥಾನದಲ್ಲೇ ನಿವೃತ್ತರಾಗುತ್ತಿದ್ದಾರೆ.

‘ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ’ ನಡೆಸಿದ ಅಧ್ಯಯನ ವರದಿ ರಾಜ್ಯದ ಕೆಎಎಸ್ ಅಧಿಕಾರಿಗಳ ಬವಣೆ, ಸಮಸ್ಯೆಗಳನ್ನು ಅನಾವರಣಗೊಳಿಸಿದೆ.

590 ಮಂಜೂರಾದ ಕೆಎಎಸ್ ಹುದ್ದೆಗಳಿವೆ. 2011ರಿಂದ ಇಲ್ಲಿಯವರೆಗೂ ಸರಾಸರಿ 200 ಹುದ್ದೆಗಳು ಖಾಲಿ ಉಳಿದಿವೆ. ಪ್ರಸ್ತುತ 393 ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಆಡಳಿತಾತ್ಮಕ ಪರೀಕ್ಷೆಗಳಲ್ಲಿ ರಾಜಕೀಯ, ಸಂದರ್ಶನಗಳ ದುರುಪಯೋಗ, ಭ್ರಷ್ಟಾಚಾರ ಪ್ರಕರಣಗಳು ಪಾರದರ್ಶಕತೆಯ ಕೊರತೆ ದಕ್ಷ ಅಧಿಕಾರಿಗಳ ಆಯ್ಕೆಗೆ ತೊಡಕಾಗಿವೆ.

ಹಲವರ ಕೈಗೆಟುಕದ ‘ಐಎಎಸ್’

ನಿಯಮಗಳ ಪ್ರಕಾರ ರಾಜ್ಯದಲ್ಲಿರುವ ಒಟ್ಟು ಐಎಎಸ್ ಹುದ್ದೆಗಳಲ್ಲಿ ಶೇ 30ರಷ್ಟು ಕೆಎಎಸ್ ವೃಂದ ಅಧಿಕಾರಿಗಳಿಗೆ ಬಡ್ತಿ ನೀಡುವ ಮೂಲಕ ಭರ್ತಿ ಮಾಡಲಾಗುತ್ತಿದೆ. ಶೇ 50ರಷ್ಟು ಹುದ್ದೆಗಳನ್ನು ಮೀಸಲಿಡಬೇಕು ಎಂದು ಕೇಂದ್ರಕ್ಕೆ ಶಿಫಾರಸು ಮಾಡುವಂತೆ ವಿವಿಧ ರಾಜ್ಯಗಳ ಆಡಳಿತ ಸೇವಾ ಅಧಿಕಾರಿಗಳ ಸಂಘ ಸಲ್ಲಿಸಿದ ಬೇಡಿಕೆಯನ್ನು ಕರ್ನಾಟಕ ಸೇರಿದಂತೆ ಬಹುತೇಕ ರಾಜ್ಯಗಳು ಪರಿಗಣಿಸಿಲ್ಲ.

ಕೆಲ ಬ್ಯಾಚ್‌ನ ಅಧಿಕಾರಿಗಳಿಗೆ 12 ವರ್ಷ ಪೂರೈಸಿದ ತಕ್ಷಣ ಐಎಎಸ್‌ಗೆ ಬಡ್ತಿ ದೊರೆತಿದೆ. ಕೆಲವರಿಗೆ 15 ವರ್ಷಗಳಾದರೂ ಬಡ್ತಿ ದೊರೆತಿಲ್ಲ. ಹೆಚ್ಚಿನ ಅಧಿಕಾರಿಗಳು ಐಎಎಸ್‌ಗೆ ಬಡ್ತಿಗಾಗಿ 2035ರವರೆಗೂ ಕಾಯಬೇಕಿದೆ. ಅಲ್ಲದೇ, ಬೇರೆ ರಾಜ್ಯಗಳ ಕೆಎಎಸ್ ಅಧಿಕಾರಿಗಳಿಗೆ ಹೋಲಿಸಿದರೆ ಕರ್ನಾಟಕದ ಅಧಿಕಾರಿಗಳ ವೇತನ ಕಡಿಮೆ ಇರುವುದನ್ನು ವರದಿ ಬಹಿರಂಗ ಮಾಡಿದೆ.

ಸಿಗದ ಗ್ರಾಮೀಣಾಭಿವೃದ್ಧಿ ಇಲಾಖೆಯ 130 ಹುದ್ದೆ

ಕಾರ್ಯಭಾರದ ಒತ್ತಡಗಳಿಂದ ಈಚಿನ ದಿನಗಳಲ್ಲಿ ವಿವಿಧ ಶ್ರೇಣಿಯ ಹುದ್ದೆಗಳು ಸೃಷ್ಟಿಯಾದರೂ ಕೆಎಎಸ್ ಅಧಿಕಾರಿಗಳಿಗೆ ಅಗತ್ಯ ಹುದ್ದೆಗಳನ್ನು ನೀಡಿಲ್ಲ. ಹಿಂದೆ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಕೆಎಎಸ್ ವೃಂದ ಅಧಿಕಾರಿಗಳಿಗೆ ಮೀಸಲಿದ್ದ 130 ಹುದ್ದೆಗಳನ್ನು ಇತರೆ ವೃಂದದ ಅಧಿಕಾರಿಗಳಿಗೆ ನೀಡಲು ನಿರ್ಧಾರ ತೆಗೆದುಕೊಳ್ಳಲಾಗಿತ್ತು. ಅವುಗಳಲ್ಲಿ ತಾಲ್ಲೂಕು ಪಂಚಾಯಿತಿಯ 70 ಇಒಗಳ ಹುದ್ದೆಗಳೂ ಸೇರಿವೆ. ಇಂದಿಗೂ ಈ ಹುದ್ದೆಗಳಿಗೆ ಅನ್ಯ ಇಲಾಖೆಯ ಅಧಿಕಾರಿಗಳನ್ನೇ ನಿಯೋಜನೆ ಮಾಡಲಾಗುತ್ತಿದೆ. ಕೆಎಎಸ್ ಅಧಿಕಾರಿಗಳಿಗೆ ಆ ಹುದ್ದೆಗಳನ್ನು ನೀಡಬೇಕು ಎಂಬ ಬೇಡಿಕೆ ಈಡೇರಿಲ್ಲ.

ಕೆಪಿಎಸ್‌ಸಿ ಅಧ್ಯಕ್ಷ ಹಾಗೂ ಸದಸ್ಯರ ನೇಮಕಾತಿಗೆ ನಿರ್ದಿಷ್ಟ ನಿಯಮಗಳನ್ನು ರೂಪಿಸಿಲ್ಲ. ಕೇಂದ್ರ ಲೋಕಸೇವಾ ಆಯೋಗದ ನಿವೃತ್ತ ಅಧ್ಯಕ್ಷ ಪಿ.ಸಿ.ಹೋಟಾ ನೇತೃತ್ವದ ಸಮಿತಿ ಶಿಫಾರಸು ಮಾಡಿರುವ ಮಾಗಸೂರ್ಚಿಗಳನ್ನೂ ಪಾಲಿಸಿಲ್ಲ. ಇದರಿಂದಾಗಿ ಕೆಎಎಸ್ ನೇಮಕಾತಿ ಮಾಡುವಾಗ ದಕ್ಷ, ಪ್ರತಿಭಾವಂತರ ಆಯ್ಕೆಗೆ ಅಡ್ಡಿಯಾಗಿದೆ ಎನ್ನುವ ಅಂಶವನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ದಂಡಾಧಿಕಾರಿಯಾಗಿದ್ದರೂ ಗ್ರೂಪ್ ‘ಬಿ’ : ಕೆಎಎಸ್ ಜೂನಿಯರ್ ಹುದ್ದೆಗೆ ಆಯ್ಕೆಯಾಗುವ ತಹಶೀಲ್ದಾರ್‌ಗಳು ಗ್ರೂಪ್ ’ಬಿ’ ಅಧಿಕಾರಿಗಳಾಗಿದ್ದಾರೆ. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೇರಿದಂತೆ ಹಲವು ಅಧಿಕಾರಿಗಳು ಗ್ರೂಪ್ ‘ಎ’ನಲ್ಲಿದ್ದಾರೆ. ಇತರ ರಾಜ್ಯಗಳಲ್ಲಿ ಅಲ್ಲಿನ ಆಡಳಿತ ಸೇವೆಯ ಅಧಿಕಾರಿಗಳನ್ನು ಗ್ರೂಪ್ ‘ಎ’ ಶ್ರೇಣಿಯಲ್ಲೇ ನೇಮಕ ಮಾಡಿಕೊಳ್ಳಲಾಗುತ್ತಿದೆ.

8ನೇ ಪುಟ ನೋಡಿ

ಕೃಷ್ಣಾರೆಡ್ಡಿಗಾಗಿ ಪ್ರತ್ಯೇಕ ಪ್ರಾಧಿಕಾರ



ಕೃಷ್ಣಾರೆಡ್ಡಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಸ್ತೆಗಳ ನಿರ್ಮಾಣ, ಅಭಿವೃದ್ಧಿ, ನಿರ್ವಹಣೆಗಾಗಿ ಲೋಕೋಪಯೋಗಿ ಇಲಾಖೆ ಸೇರಿ ನಾಲ್ಕು ಸಾಂಸ್ಥಿಕ ವ್ಯವಸ್ಥೆಗಳಿದ್ದರೂ ಒಬ್ಬ ನಿವೃತ್ತ ಕಾರ್ಯದರ್ಶಿಯ ಹಿತಕ್ಕಾಗಿ ಪ್ರಾಧಿಕಾರ ರಚಿಸಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

‘ಗ್ಯಾರಂಟಿ’ ಯೋಜನೆಗಳಿಗಾಗಿ ಹೆಚ್ಚಿನ ಅನುದಾನ ಬೇಕಾಗಿರುವುದರಿಂದ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡುವುದು ಕಷ್ಟ’ ಎಂದು ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಆರ್ಥಿಕ ಪರಿಸ್ಥಿತಿ ಸಂಕಷ್ಟದಲ್ಲಿರುವಾಗ, ಇರುವ ನಿಗಮ, ಸಂಸ್ಥೆಗಳ ಕೆಲಸವನ್ನೇ ತಾತ್ಕಾಲಿಕವಾಗಿಯಾದರೂ ಸ್ಥಗಿತಗೊಳಿಸಬೇಕು.

8ನೇ ಪುಟ ನೋಡಿ

ಶಾಲೆಗಳಲ್ಲಿ ಸ್ಥಗಿತಗೊಂಡಿದ್ದ ‘ಶುಚಿ’ ಯೋಜನೆಗೆ ಮತ್ತೆ ಚಾಲನೆ, ವಿಭಾಗವಾರು ಟೆಂಡರ್

ತಿಂಗಳಲ್ಲೇ ‘ಸ್ಯಾನಿಟರಿ ನ್ಯಾಪ್‌ಕಿನ್’

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯದ ಸರ್ಕಾರಿ, ಅನುದಾನಿತ ಶಾಲೆಗಳ 17.99 ಲಕ್ಷ ವಿದ್ಯಾರ್ಥಿನಿಯರಿಗೆ ಮುಂದಿನ ತಿಂಗಳು (ಸೆಪ್ಟೆಂಬರ್) ಉಚಿತ ಸ್ಯಾನಿಟರಿ ನ್ಯಾಪ್‌ಕಿನ್ ವಿತರಣೆಯಾಗಲಿದೆ.

ಸರ್ಕಾರಿ, ಅನುದಾನಿತ ಮತ್ತು ಸರ್ಕಾರಿ ವಸತಿ ಶಾಲಾ–ಕಾಲೇಜುಗಳ (ಪದವಿಪೂರ್ವ ಶಿಕ್ಷಣದವರೆಗಿನ) ಹದಿಹರೆಯದ ಹೆಣ್ಣುಮಕ್ಕಳಿಗೆ ಸ್ಯಾನಿಟರಿ ನ್ಯಾಪ್‌ಕಿನ್ ವಿತರಿಸುವುದು ‘ಶುಚಿ’ ಯೋಜನೆಯ ಉದ್ದೇಶ. ಸಾಮಾನ್ಯವಾಗಿ 10ರಿಂದ 19ರ ವಯೋಮಾನದ ವಿದ್ಯಾರ್ಥಿನಿಯರ ಸಂಖ್ಯೆಯ ಆಧಾರದಲ್ಲಿ ನ್ಯಾಪ್‌ಕಿನ್‌ಗಳನ್ನು ಪೂರೈಸಲಾಗುತ್ತದೆ. ಪ್ರತಿ ವಿದ್ಯಾರ್ಥಿನಿಯರಿಗೆ ತಿಂಗಳಿಗೆ ಒಂದು ಯೂನಿಟ್‌ನಂತೆ ಪ್ರತಿ ವರ್ಷ 11 ತಿಂಗಳು ಪೂರೈಸಲಾಗುತ್ತದೆ. ಒಂದು ಯೂನಿಟ್‌ನಲ್ಲಿ 10 ನ್ಯಾಪ್‌ಕಿನ್‌ಗಳಿರುತ್ತದೆ. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಈಗಾಗಲೇ ಮೂರು ತಿಂಗಳು ವಿಳಂಬವಾಗಿರುವುದರಿಂದ 8 ತಿಂಗಳಿಗೆ 80 ನ್ಯಾಪ್‌ಕಿನ್ ನೀಡಲಾಗುತ್ತಿದೆ.

> **‘ಶುಚಿ’ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಇದ್ದ ಅಡೆತಡೆಗಳನ್ನು ನಿವಾರಿಸಲಾಗಿದೆ. ಸೆಪ್ಟೆಂಬರ್‌ನಲ್ಲಿ ಎಲ್ಲ ಬಾಲಕಿಯರಿಗೂ ನ್ಯಾಪ್‌ಕಿನ್‌ಗಳು ದೊರಕಲಿವೆ**
> **ದಿನೇಶ್ ಗುಂಡೂರಾವ್**
> ಆರೋಗ್ಯ ಸಚಿವ

> **ಮಕ್ಕಳ ಪಾಲನಾ ಸಂಸ್ಥೆಗಳೂ ಸೇರಿದಂತೆ ಸರ್ಕಾರದ ಅಧೀನದ ಬಾಲಕಿಯರ ಎಲ್ಲ ವಸತಿನಿಲಯಗಳಿಗೂ ಯೋಜನೆಯನ್ನು ವಿಸ್ತರಿಸಬೇಕು**
> **ಜಿ.ಎಂ. ರೇಖಾ**
> ಅಧ್ಯಕ್ಷೆ, ಮಕ್ಕಳ ಕಲ್ಯಾಣ ಸಮಿತಿ

2020–21ರ ನಂತರ ಸ್ಥಗಿತಗೊಂಡಿದ್ದ ‘ಶುಚಿ’ ಯೋಜನೆಗೆ ಹೊಸ ಸರ್ಕಾರ ಮತ್ತೆ ಚಾಲನೆ ನೀಡಿದ್ದು, ನಿಂತು ಹೋಗಿದ್ದ ಟೆಂಡರ್ ಪ್ರಕ್ರಿಯೆಗಳನ್ನು ಪುನರಾರಂಭಿಸಿದೆ. ಆರೋಗ್ಯ ಇಲಾಖೆ ನಿರ್ವಹಿಸುವ ‘ಶುಚಿ’ ಯೋಜನೆ ಟೆಂಡರ್ ಪ್ರಕ್ರಿಯೆಗಳ ಗೊಂದಲಗಳೇ ಅಡ್ಡಿಯಾಗಿದ್ದವು. 2020-2022ರ ಅವಧಿಯಲ್ಲಿ ಮೂರು ಬಾರಿ ಟೆಂಡರ್ ಕರೆಯಲಾಗಿತ್ತು. ವಿವಿಧ ಕಾರಣ ನೀಡಿ ಮೂರು ಟೆಂಡರ್‌ಗಳನ್ನು ರದ್ದು ಮಾಡಲಾಗಿತ್ತು. ಅತಿ ಕಡಿಮೆ ದರ (ಪ್ರತಿಪ್ಯಾಡ್‌ಗೆ ₹2.55) ನಮೂದಿಸಿದ ಬಿಡ್ಡುದಾರರನ್ನೇ ಆಯ್ಕೆ ಮಾಡಿದ್ದರೂ, ಕಾರ್ಯಾದೇಶ ನೀಡದೆ ವಿಳಂಬ ಮಾಡಲಾಗಿತ್ತು. ಇದರಿಂದ ಶುಚಿ ಯೋಜನೆ ನನೆಗುದಿಗೆ ಬಿದ್ದಿತ್ತು.

ಟೆಂಡರ್ ಪ್ರಕ್ರಿಯೆಗಳಲ್ಲಿನ ರಾಜಕೀಯ, ಭ್ರಷ್ಟಾಚಾರ, ಅಧಿಕಾರಿಗಳ ವಿಳಂಬ ಧೋರಣೆ ನೀತಿ ತಪ್ಪಿಸಲು ಇದೇ ಮೊದಲ ಬಾರಿ ವಿಭಾಗವಾರು ಟೆಂಡರ್‌ಗಳಿಗೆ ಅವಕಾಶ ಕಲ್ಪಿಸಲಾಗಿದೆ. ಬೆಂಗಳೂರು, ಮೈಸೂರು, ಕಲಬುರಗಿ ಹಾಗೂ ಬೆಳಗಾವಿ ವಿಭಾಗಗಳಿಗೆ ಪ್ರತೇಕ ಟೆಂಡರ್ ಕರೆಯಲಾಗಿದೆ.

ಸ್ಥಗಿತಗೊಳಿಸಲಾಗಿದ್ದ ಈ ಯೋಜನೆಗೆ ಮರುಚಾಲನೆ ನೀಡಲು ಸರ್ಕಾರ ₹45.50 ಕೋಟಿ ನೀಡಿದೆ. ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ಟೆಂಡರ್ ಪ್ರಕ್ರಿಯೆ ನಡೆಸುವ, ಶಾಲಾ-ಕಾಲೇಜು, ಹಾಸ್ಟೆಲ್‌ಗಳಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಪೂರೈಸುವ ಹೊಣೆ ಹೊತ್ತಿದೆ. ಎರಡು, ಮೂರು ವಾರಗಳಲ್ಲಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದು. ಸೆಪ್ಟೆಂಬರ್‌ನಲ್ಲಿ ಕಿಟ್‌ಗಳು ಎಲ್ಲ ಸರ್ಕಾರಿ, ಅನುದಾನಿತ ಶಾಲೆಗಳು, ಪದವಿಪೂರ್ವ ಕಾಲೇಜುಗಳು ಹಾಗೂ ಹಾಸ್ಟೆಲ್‌ಗಳನ್ನು ತಲುಪಲಿವೆ ಎನ್ನುತ್ತಾರೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಚಿದಾನಂದ ವಟಾರೆ.

ಅಂಕಿ ಅಂಶ...

34,369
ಗುರುತಿಸಿದ ಶಾಲೆ, ಹಾಸ್ಟೆಲ್‌ಗಳು

17.99 ಲಕ್ಷ
ಪ್ರಸಕ್ತ ವರ್ಷದ ‘ಶುಚಿ’ ಫಲಾನುಭವಿಗಳು

15.12 ಕೋಟಿ
2023–24ನೇ ಸಾಲಿಗೆ ಪೂರೈಸುವ ನ್ಯಾಪ್‌ಕಿನ್

ಗೃಹ ಲಕ್ಷ್ಮಿ: 1.09 ಕೋಟಿ ನೋಂದಣಿ

ಪ್ರಜಾವಾಣಿ ವಾರ್ತೆ

ಉಡುಪಿ: ರಾಜ್ಯದ ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬುವ ಗೃಹ ಲಕ್ಷ್ಮಿ ಯೋಜನೆಗೆ 1.28 ಕೋಟಿ ಕುಟುಂಬಗಳನ್ನು ಫಲಾನುಭವಿಗಳಾಗಿ ಗುರುತಿಸಲಾಗಿದ್ದು ಇದುವರೆಗೂ 1.09 ಕೋಟಿ ಕುಟುಂಬಗಳು ನೋಂದಣಿ ಮಾಡಿಸಿಕೊಂಡಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.



ಪಡಿತರ ಕಾರ್ಡ್‌ನಲ್ಲಿ ಯಜಮಾನಿ ಹೆಸರಿಲ್ಲದಿದ್ದರೆ, ನಿಧನರಾಗಿದ್ದರೆ, ಯಜಮಾನನ ಹೆಸರಿದ್ದರೆ ಅಂಥಹ ಪಡಿತರ ಕಾರ್ಡ್‌ಗಳಿಗೂ ತಿಂಗಳೊಳಗೆ ಗೃಹಲಕ್ಷ್ಮಿ ಯೋಜನೆಯಡಿ ನೋಂದಣಿಗೆ ಅವಕಾಶ ನೀಡಲಾಗುವುದು ಎಂದರು.

ಶಾಲಾ ಮಕ್ಕಳಿಗೆ ಮೊಟ್ಟೆ ವಿತರಣೆ ಸಂಬಂಧ ರಾಜ್ಯದಲ್ಲಿ ನಾಲ್ಕು ವಿಭಾಗಗಳನ್ನು ರಚಿಸಿ ಶೀಘ್ರ ಟೆಂಡರ್ ಆಹ್ವಾನಿಸಲಾಗುವುದು. ಮೊಟ್ಟೆಗಳು ಕೆಡದಂತೆ ವಿಭಾಗವಾರು ಅಥವಾ ಜಿಲ್ಲಾವಾರು ಶೀಥಲೀಕರಣ ಘಟಕ ಸ್ಥಾಪನೆಯ ಚಿಂತನೆ ಇದ್ದು ಮುಖ್ಯಮಂತ್ರಿ ಜತೆ ಚರ್ಚಿಸಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಹೊಸ ವ್ಯವಸ್ಥೆ: ವಿಜ್ಞಾನಿಗಳಿಗೆ ತಪ್ಪದ ಕಿರಿಕಿರಿ

ಖಜಾನೆಗೆ ಮರಳಿದ ಸಂಶೋಧನಾ ಹಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಅನುದಾನ ಬಿಡುಗಡೆಯ ಕಾರ್ಯವಿಧಾನದಲ್ಲಿನ ಲೋಪ
- 2022ರ ಏಪ್ರಿಲ್‌ನಲ್ಲಿ ಹೊಸ ಪದ್ಧತಿ ಪರಿಚಯಿಸಿದ್ದ ಸರ್ಕಾರ

ನವದೆಹಲಿ: ಕೇಂದ್ರ ಸರ್ಕಾರವು ಕಳೆದ ವರ್ಷದಿಂದ ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಅಳವಡಿಸಿರುವ ಹೊಸ ಮಾನದಂಡದಿಂದ ದೇಶದ ವಿವಿಧ ಪ್ರಯೋಗಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಜ್ಞಾನಿಗಳು ಸಂಶೋಧನೆ ನಡೆಸಲು ತೊಡಕಾಗಿದೆ.

ಅನುದಾನ ಬಿಡುಗಡೆಯ ಕಾರ್ಯವಿಧಾನದಲ್ಲಿನ ಲೋಪದಿಂದ ತೊಂದರೆಗೆ ಸಿಲುಕುವಂತಾಗಿದೆ.

ಜೀವ ವಿಜ್ಞಾನ ವಿಭಾಗ, ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಪರಿಷತ್, ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್‌ಗೆ ಅನುದಾನವು ಸಕಾಲದಲ್ಲಿ ಬಿಡುಗಡೆಯಾಗುತ್ತಿಲ್ಲ. ಸಾಕಷ್ಟು ಸಂಖ್ಯೆಯ ಸಂಶೋಧಕರಿಗೆ ಕಳೆದ ಸಾಲಿನ ಅನುದಾನ ಇನ್ನೂ ಲಭಿಸಿಲ್ಲ.

ಮಾರ್ಚ್ ಅಂತ್ಯಕ್ಕೆ ಕೆಲವೇ ದಿನಗಳಿದ್ದಾಗ ಸಂಶೋಧಕರಿಗೆ ನಿಗದಿತ ಅನುದಾನ ಬಿಡುಗಡೆಯಾಗಿತ್ತು. ಹಾಗಾಗಿ, ಬಹಳಷ್ಟು ಸಂಶೋಧಕರು ಈ ಹಣವನ್ನು ಬಳಕೆ ಮಾಡಲು ಸಾಧ್ಯವಾಗಿಲ್ಲ. ಹಾಗಾಗಿ, ಮಾರ್ಚ್ 31ರಂದು ಸರ್ಕಾರದ ಖಜಾನೆಗೆ ಹಣ ವಾಪಸ್ ಹೋಗಿದೆ. ಇದನ್ನು ಬಳಕೆಯಾಗದ ಠೇವಣಿಯೆಂದು ಸರ್ಕಾರ ಪರಿಗಣಿಸಿದೆ.

‘2022ರ ಏಪ್ರಿಲ್‌ನಲ್ಲಿ ಸರ್ಕಾರವು ಈ ಹೊಸ ಪದ್ಧತಿಯನ್ನು ಪರಿಚಯಿಸಿತು. ಆಗಸ್ಟ್ ಮಧ್ಯದವರೆಗೂ ಇದರ ಬಗ್ಗೆ ನಮಗೆ ಯಾವುದೇ ಕಲ್ಪನೆ ಇರಲಿಲ್ಲ. ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆಯ (ಪಿಎಫ್‌ಎಂಎಸ್) ಖಾತೆಗಳನ್ನು ವಿಶ್ವವಿದ್ಯಾಲಯವು ನಿರ್ವಹಿಸುತ್ತದೆ. ಎಲ್ಲಾ ಸಂಶೋಧನೆಗಳಿಗೂ ಈ ಖಾತೆ ಮೂಲಕವೇ ಹಣ ಪಾವತಿಯಾಗುತ್ತದೆ. ಸದ್ಯ ಈ ನಿಧಿ ಬಳಕೆಗೆ ನಿರ್ಬಂಧ ಹೇರಿ ಮೊಹರು ಹಾಕಲಾಗಿದೆ. ಈಗ ನಮಗೆ ಸರ್ಕಾರದ ಹೊಸ ವ್ಯವಸ್ಥೆಯ ನಿಜವಾದ ಸ್ವರೂಪ ಅರ್ಥವಾಗಿದೆ’ ಎಂದು ಬನಾರಸ್ ಹಿಂದು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎಸ್‌.ಸಿ. ಲಖೋಟಿಯಾ ‘ಪ್ರಜಾವಾಣಿ’ಗೆ ತಿಳಿಸಿದರು.

ಅನುದಾನ ವಾಪಸ್ ಹೋದ ಬಗ್ಗೆ ಇ-ಮೇಲ್ ಮತ್ತು ದೂರವಾಣಿ ಮೂಲಕ ಸಾಕಷ್ಟು ಬಾರಿ ಮನವಿ ಮಾಡಿದ ಬಳಿಕ ಈ ಹಣವು ವಿಜ್ಞಾನಿಗಳ ಬಳಕೆಗೆ ಲಭ್ಯವಾಗಿತ್ತು.

‘2023ರ ಮಾರ್ಚ್ 31ರೊಳಗೆ ಸಂಶೋಧನೆಗಳಿಗೆ ನಿಗದಿಪಡಿಸಿದ ನಿಧಿಯನ್ನು ಬಳಸಿರಬೇಕು. ಏಪ್ರಿಲ್ 1ರಿಂದ ಅದು ಬಳಕೆಗೆ ಸಿಗುವುದಿಲ್ಲ. ಹಿಂದಿನ ವರ್ಷ ಖಜಾನೆಗೆ ಮರಳಿದ್ದ ಅನುದಾನವು ಈ ವರ್ಷದ ಜೂನ್‌ನಲ್ಲಿ ಲಭಿಸಿದೆ. ಇದಕ್ಕೂ ಸರ್ಕಾರದ ಮಟ್ಟದಲ್ಲಿ ಸಾಕಷ್ಟು ಸಂವಹನ ನಡೆಸಬೇಕಾಯಿತು’ ಎಂದು ತಿಳಿಸಿದರು.

‘ಸಂಶೋಧನೆಗೆ ಮೀಸಲಿಟ್ಟ ಅನುದಾನದ ಬಿಡುಗಡೆ ಸಂಬಂಧ ಎದುರಾಗಿರುವ ತಾಂತ್ರಿಕ ಸಮಸ್ಯೆಯ ಬಗ್ಗೆ ಇಲಾಖೆಗೂ ಅರಿವಿದೆ. ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ನಿರ್ವಹಣೆಯಲ್ಲಿ ಕೆಲವು ಬದಲಾವಣೆಯಾಗಬೇಕಿದೆ. ಆದರೆ, ಇಡೀ ದೇಶಕ್ಕೆ ಈ ಆರ್ಥಿಕ ಮಾದರಿಯನ್ನು ಅಳವಡಿಸಲಾಗಿದೆ. ಶೀಘ್ರವೇ, ಈ ಸಮಸ್ಯೆ ಪರಿಹರಿಸಲು ಕ್ರಮವಹಿಸಲಾಗುವುದು’ ಎಂದು ಕೇಂದ್ರ ವಿಜ್ಞಾನ ಸಚಿವಾಲಯದ ಮೂಲಗಳು ತಿಳಿಸಿವೆ.

₹100ರ ಗಡಿ ದಾಟಿದ ಏಲಕ್ಕಿ ಬಾಳೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಯ ಕೊರತೆಯಿಂದ ಇಳುವರಿ ಕುಂಠಿತವಾಗಿರುವ ಪರಿಣಾಮ ಒಂದು ಕೆ.ಜಿ. ಏಲಕ್ಕಿ ಬಾಳೆ ಹಣ್ಣು ₹ 100 ರಂತೆ ಮಾರಾಟವಾಗುತ್ತಿದೆ. ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಪೂರೈಕೆಯಾಗದ ಹಿನ್ನೆಲೆಯಲ್ಲಿ ಬೆಲೆ ಹೆಚ್ಚಳವಾಗಿದೆ.

‘ಬೆಂಗಳೂರು ನಗರಕ್ಕೆ ಹೆಚ್ಚಾಗಿ ತಮಿಳುನಾಡಿನಿಂದ ಬಾಳೆ ಹಣ್ಣು ಪೂರೈಕೆಯಾಗುತ್ತದೆ. ಜತೆಗೆ ತುಮಕೂರು, ರಾಮನಗರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶದಿಂದಲೂ ಬಾಳೆ ಹಣ್ಣು ಪೂರೈಕೆಯಾಗುತ್ತದೆ. ಆದರೆ, ಕಳೆದ ಒಂದು ವಾರದಲ್ಲಿ ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಪೂರೈಕೆಯಾಗದ ಕಾರಣ ದರ ಹೆಚ್ಚಾಗಿದೆ. ನಗರದಲ್ಲಿ ಪಚ್ಚೆ ಮತ್ತು ಏಲಕ್ಕಿ ಬಾಳೆಗೆ ಹೆಚ್ಚು ಬೇಡಿಕೆ ಇದೆ’ ಎಂದು ಎಪಿಎಂಸಿ ಅಧಿಕಾರಿಗಳು ಮಾಹಿತಿ ನೀಡಿದರು.

ಲಾಲ್‌ಬಾಗ್ ಹತ್ತಿರವಿರುವ ಹಾಪ್‌ಕಾಮ್ಸ್ ಕೇಂದ್ರ ಕಚೇರಿಯ ಮಳಿಗೆಯಲ್ಲಿ ಒಂದು ಕೆ.ಜಿ. ಏಲಕ್ಕಿ ಬಾಳೆಗೆ ₹ 90 ಇದ್ದರೆ. ಪಚ್ಚೆ ಬಾಳೆ ₹38ರಂತೆ ಮಂಗಳವಾರ ಮಾರಾಟ ಮಾಡಲಾಯಿತು. ನಗರದ ವಿವಿಧ ಚಿಲ್ಲರೆ ಮಾರುಕಟ್ಟೆಗಳಲ್ಲಿ ₹ 100–₹110ರಂತೆ ಮಾರಾಟವಾಗುತ್ತಿದೆ.



ಏಲಕ್ಕಿ ಬಾಳೆ

‘ಕಳೆದ ಹದಿನೈದು ದಿನಗಳಿಂದ ಏಲಕ್ಕಿ ಬಾಳೆ ಹಣ್ಣಿನ ಬೆಲೆ ಏರಿಕೆಯತ್ತ ಮುಖ ಮಾಡಿದೆ. ನಿಧಾನವಾಗಿ ದರ ಹೆಚ್ಚುತ್ತಿದ್ದು, ಹಬ್ಬದ ವೇಳೆಗೆ ಮತ್ತಷ್ಟು ದುಬಾರಿಯಾಗಬಹುದು. ಶ್ರಾವಣ ಮಾಸ ಮುಗಿಯುವವರೆಗೂ ಬಾಳೆ ಹಣ್ಣಿನ ಬೆಲೆ ಕಡಿಮೆಯಾಗುವಂತೆ ಕಾಣುತ್ತಿಲ್ಲ. ಉತ್ತಮ ಗುಣಮಟ್ಟದ ಏಲಕ್ಕಿ ಬಾಳೆ ₹80 ರಿಂದ ₹90ರವರೆಗೂ ಇದ್ದು, ಪಚ್ಚೆ ₹40 ರಂತೆ ಮಾರಾಟವಾಗುತ್ತಿದೆ’ ಎಂದು ಕೆ.ಆರ್. ಮಾರುಕಟ್ಟೆ ಹಣ್ಣಿನ ವ್ಯಾಪಾರಿ ಇಮ್ರಾನ್ ಪಾಷಾ ಹೇಳಿದರು.

ಬಿಬಿಎಂಪಿ ಬೆಂಕಿ ಅವಘಡ ಮೂವರಿಗೆ ಚರ್ಮ ಕಸಿ

ಬೆಂಗಳೂರು: ಬಿಬಿಎಂಪಿ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಬೆಂಕಿ ಅವಘಡದಿಂದ ಗಾಯಗೊಂಡಿದ್ದ ಮೂವರ ಕೈಗಳಿಗೆ ಫ್ಯಾಸಿಯೊಟಮಿ (ಚರ್ಮ ಕಸಿ) ಪ್ರಕ್ರಿಯೆ ಮಂಗಳವಾರ ನಡೆಸಲಾಗಿದೆ.

ಮುಖ್ಯ ಎಂಜಿನಿಯರ್ ಶಿವಕುಮಾರ್, ಕಾರ್ಯಪಾಲಕ ಎಂಜಿನಿಯರ್ ಕಿರಣ್, ಆಪರೇಟರ್ ಜ್ಯೋತಿ ಅವರ ಕೈಗಳು ಹೆಚ್ಚು ಸುಟ್ಟುಹೋಗಿದ್ದ ಕಾರಣ ಫ್ಯಾಸಿಯೊಟಮಿ ಪ್ರಕ್ರಿಯೆ ನಡೆಸಲಾಗಿದೆ.

ಶಿವಕುಮಾರ್ ಹಾಗೂ ಜ್ಯೋತಿ ಅವರ ಸ್ಥಿತಿ ಇನ್ನೂ ಗಂಭೀರವಾಗಿದ್ದು, ಉಳಿದ ಏಳು ಜನರ ಆರೋಗ್ಯ ಸ್ಥಿರವಾಗಿದೆ. ಇನ್ನೂ ಕೆಲವು ದಿನ ನಿಗಾವಹಿಸಲಾಗುತ್ತದೆ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಪ್ರಕಟಣೆ ತಿಳಿಸಿದೆ.

ಡೂಡಲ್‌ನಲ್ಲಿ ಇಳಕಲ್ ಸೀರೆ

ಇಳಕಲ್ (ಬಾಗಲಕೋಟೆ ಜಿಲ್ಲೆ): ಭಾರತದ ವೈವಿಧ್ಯಮಯ ಜವಳಿ ಪರಂಪರೆಯನ್ನು ಬಿಂಬಿಸುವ ಡೂಡಲ್ ಮೂಲಕ ಸ್ವಾತಂತ್ರ್ಯೋತ್ಸವಕ್ಕೆ ‘ಗೂಗಲ್’ ಶುಭಾಶಯ ಕೋರಿದ್ದು, ಈ ವಿಶೇಷ ಡೂಡಲ್‌ನಲ್ಲಿ ದೇಶದ ಪ್ರಮುಖ 20 ಪ್ರಕಾರದ ಸೀರೆಗಳಲ್ಲಿ ಇಳಕಲ್ ಸೀರೆಯೂ ಸ್ಥಾನ ಪಡೆದಿದೆ.

ದೆಹಲಿ ಕಲಾವಿದೆ ನಮ್ರತಾ ಕುಮಾರ್ ಅವರು ಈ ಡಿಜಿಟಲ್ ಕಲಾಕೃತಿ ರಚಿಸಿದ್ದು, ವಿವಿಧ ರಾಜ್ಯಗಳಲ್ಲಿ ಸಿದ್ಧಗೊಳ್ಳುವ ವಿಶೇಷ ಸೀರೆಗಳನ್ನು ಇದು ಒಳಗೊಂಡಿದೆ. ಇಳಕಲ್ ಸೀರೆಯ ‘ಟೋಪತೇನಿ’ ವಿನ್ಯಾಸದ ವಿಶಿಷ್ಟ ಸೆರಗನ್ನು ಕಲಾಕೃತಿಯಲ್ಲಿ ಬಳಸಿಕೊಳ್ಳಲಾಗಿದೆ.



ಈ ವಿಶೇಷ ಡೂಡಲ್‌ನ್ನು ನಗರದ ಯುವಕರು ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಒಮಾನ್ ಮಹಿಳೆಗೆ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂತ್ರಪಿಂಡ ಸಮಸ್ಯೆಗೆ ಪಾಕಿಸ್ತಾನದಲ್ಲಿ ಸಮರ್ಪಕ ಚಿಕಿತ್ಸೆ ಸಿಗದೆ ಇಲ್ಲಿಗೆ ಬಂದಿದ್ದ ಒಮನ್‌ನ 51 ವರ್ಷದ ಮಹಿಳೆಗೆ ಫೋರ್ಟಿಸ್ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಚಿಕಿತ್ಸೆ ಒದಗಿಸಿದ್ದಾರೆ.

ವರ್ಷದ ಹಿಂದೆ ಮೂತ್ರಪಿಂಡ ವೈಫಲ್ಯಕ್ಕೆ ಒಳಗಾಗಿದ್ದ ಅವರು, ಪಾಕಿಸ್ತಾನದಲ್ಲಿ ಕಸಿ ಮಾಡಿಸಿಕೊಂಡಿದ್ದರು. ಆದರೆ, ಅಂಗಾಂಗ ಅವರ ದೇಹ ಹಾಗೂ ರಕ್ತಕ್ಕೆ ಹೊಂದಿಕೆಯಾಗಿರಲಿಲ್ಲ. ಮೂತ್ರನಾಳದ ಸ್ಟೆಂಟ್ ಹಾಗೂ ಮೂತ್ರ ವಿಸರ್ಜನೆಗೆ ಪ್ಲಾಸ್ಟಿಕ್ ನಳಿಕೆಯನ್ನು ಅಳವಡಿಸಲಾಗಿತ್ತು. ಇದು ತೆಳುವಾಗಿದ್ದರಿಂದ ವರ್ಷದಲ್ಲಿಯೇ ಮುರಿದು ಹೋಯಿತು. ಬಳಿಕ ಅವರಿಗೆ ಮೂತ್ರಕೋಶದ ಸೋಂಕು ಹರಡಲು ಪ್ರಾರಂಭವಾಗಿತ್ತು. ಸ್ಟೆಂಟ್ ತೆಗೆಯುವುದು ಅನಿವಾರ್ಯವಾಗಿತ್ತು. ಪಾಕಿಸ್ತಾನದಲ್ಲಿ ಈ ಸಮಸ್ಯೆಗೆ ಸೂಕ್ತ ಚಿಕಿತ್ಸೆ ಸಿಗದಿದ್ದರಿಂದ ಅವರು ಇಲ್ಲಿಗೆ ಬಂದರು ಎಂದು ಆಸ್ಪತ್ರೆ ತಿಳಿಸಿದೆ.

‘ಆಸ್ಪತ್ರೆಗೆ ದಾಖಲಾದ ಮಹಿಳೆಗೆ ನಮ್ಮಲ್ಲಿರುವ ರೋಬೋಟಿಕ್ ತಂತ್ರಜ್ಞಾನದ ನೆರವಿನಿಂದ ಮೂರು ಗಂಟೆಗಳ ಅವಧಿಯಲ್ಲಿ ಶಸ್ತ್ರಚಿಕಿತ್ಸೆ ನಡೆಸಿ, ಮುರಿದು ಹೋಗಿದ್ದ ಸ್ಟೆಂಟ್ ಹೊರತೆಗೆಯಲಾಯಿತು. ನೇರವಾಗಿ ಮೂತ್ರ ವಿಸರ್ಜನೆಗೆ ಸಮಸ್ಯೆಯಾಗದಂತೆ ಸಂಕೀರ್ಣ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಬಳಿಕ ರೋಗಿ ಸಂಪೂರ್ಣ ಗುಣಮುಖರಾಗಿದ್ದು, ಮೂತ್ರಕೋಶ ಸೋಂಕಿನಿಂದಲೂ ಚೇತರಿಸಿಕೊಂಡಿದ್ದಾರೆ’ ಎಂದು ಆಸ್ಪತ್ರೆಯ ಮೂತ್ರಶಾಸ್ತ್ರ ತಜ್ಞ ಡಾ. ಮೋಹನ್ ಕೇಶವಮೂರ್ತಿ ಹೇಳಿದರು.

ನಗರದಲ್ಲಿ ಇಂದು

ಎಸ್ಸಿ.ಎಸ್‌.ಪಿ ಮತ್ತು ಟಿ.ಎಸ್‌.ಪಿ ಅನುದಾನದ ಸರ್ಕಾರದ ಧೋರಣೆಗಳು ಕುರಿತು ದುಂಡು ಮೇಜಿನ ಸಭೆ: ಭಾಗವಹಿಸುವವರು: ಮುನಿಯಪ್ಪ ಎನ್‌.ಸಿ., ಟಿ.ಆರ್. ಚಂದ್ರಶೇಖರ್, ಗೋಪಾಲಕೃಷ್ಣ ಅರಳಹಳ್ಳಿ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಪ್ರಸ್ತಾವ: ಬಿ. ರಾಜಶೇಖರಮೂರ್ತಿ, ಆಯೋಜನೆ: ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ದಲಿತ ಹಕ್ಕುಗಳ ಸಮಿತಿ, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 10.30

‘ವಿ.ಪಿ. ದೀನದಯಾಳು ನಾಯ್ಡು’ ಅವರ ಜನ್ಮದಿನಾಚರಣೆ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಅತಿಥಿಗಳು: ಪ್ರೀತಿ ಗೆಹಲೋತ್, ಎನ್‌.ಸಿ. ವೆಂಕಟರಾಜು, ಕೊಂಡಜ್ಜಿ ಬ. ಷಣ್ಮುಖಪ್ಪ, ಎಲ್‌.ಎಚ್. ಶಿವಶಂಕರಪ್ಪ, ಡಿ. ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣ, ಶಾಂತಿಗೃಹ, ಅರಮನೆ ರಸ್ತೆ, ಬೆಳಿಗ್ಗೆ 11

ಉಪನ್ಯಾಸ ಕಾರ್ಯಕ್ರಮ: ಅತಿಥಿಗಳು: ಲಿಂಗರಾಜ ಗಾಂಧಿ, ಜವರೇ ಗೌಡ, ವಿ. ಲೋಕೇಶ್, ರಘು ಜಿ.ಪಿ., ಜಿ.ಎಂ. ಅನಂತರಾಮಯ್ಯ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಸೆಂಟ್ರಲ್ ಕಾಲೇಜು ಆವರಣ, ಮಧ್ಯಾಹ್ನ 3

ರುಕ್ಮಿಣಮ್ಮ, ಸೀತಾರಾಮರಾವ್ ದತ್ತಿ: ‘ಕೊಡಗಿನ ಗೌರಮ್ಮ ಅವರ ಕತೆಗಳ ಸುತ್ತ’ ಉಪನ್ಯಾಸ: ಸೌಮ್ಯ ಕೋಡೂರು, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸೀ ಸಭಾಂಗಣ, ಎನ್‌.ಆರ್. ಕಾಲೊನಿ, ಸಂಜೆ 5

‘ನನ್ನ ದೇಶ ನನ್ನ ಜನ’: ಅತಿಥಿ: ದೊಡ್ಡರಂಗೇಗೌಡ, ದೇಶ ಭಕ್ತಿ ಗಾಯನ: ಟಿ. ರಾಜಾರಾಂ, ಆನಂದ ಮಾದಲಗೆರೆ, ಮೃತ್ಯುಂಜಯ ದೊಡ್ಡವಾಡ, ಶ್ರೀಧರ ಅಯ್ಯರ್, ವೆಂಕಟೇಶಮೂರ್ತಿ ಶಿರೂರ, ಅನುರಾಗ ಗದ್ದಿ, ಅಪರ್ಣ ನರೇಂದ್ರ, ಭವ್ಯ ಹೆಬ್ಬಾಲೆ, ಇಂಚರ ಪ್ರವೀಣಕುಮಾರ್, ರಕ್ಷಿತತಾ ಮಾದಲಗೆರೆ, ಆಯೋಜನೆ: ಅಖಿಲ ಕರ್ನಾಟಕ ಸುಗಮಸಂಗೀತ ಸಂಸ್ಥೆಗಳ ಒಕ್ಕೂಟ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5ರಿಂದ

ಚಿನ್ನದ ಬಿಸ್ಕತ್ ವಶ

ದೇವನಹಳ್ಳಿ: ಕೋಲ್ಕತ್ತದಿಂದ ಅಕ್ರಮವಾಗಿ ಚಿನ್ನದ ಬಿಸ್ಕತ್ ತಂದಿದ್ದ ಪ್ರಯಾಣಿಕನನ್ನು ಇಲ್ಲಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಮಂಗಳವಾರ ವಶಕ್ಕೆ ಪಡೆದಿದ್ದಾರೆ.

ಕೋಲ್ಕತದಿಂದ ಬಂದಿಳಿದ ಪ್ರಯಾಣಿಕನನ್ನು ತಪಾಸಣೆ ಮಾಡಿದಾಗ 600 ಗ್ರಾಂ ತೂಕದ 30 ಬಿಸ್ಕತ್ ಸಿಕ್ಕಿವೆ. ಇದರ ಮೌಲ್ಯ ಅಂದಾಜು ₹36ಲಕ್ಷ ಎಂದು ಪೊಲೀಸರು ತಿಳಿಸಿದ್ದಾರೆ.

COFFEE DAY ENTERPRISES LTD.

Coffee Day — Brewing new possibilities.

Registered and Corporate Office: 23/2, Coffee Day Square, Vittal Mallya Road, Bengaluru - 560 001, Karnataka, India
Tel: + 91 80 4001 2345; Fax: + 91 80 4001 2650;
Website: www.coffeeday.com
Corporate Identification Number: L55101KA2008PLC046866

Financial Results for the Quarter and Three-months ended 30th June, 2023

(₹ in Crores except per share data)

Particulars	Quarter ended 30th June, 2023 (Unaudited)	Quarter ended 31st March, 2023 (Audited)	Quarter ended 30th June, 2022 (Unaudited)	Year ended 31st March, 2023 (Audited)
Total income from operations (net)	263.98	301.19	213.34	1028.91
Net Profit from ordinary activities after tax	22.51	34.98	(18.00)	(387.17)
Net Profit for the period after tax (after Extraordinary items)	22.51	34.98	(18.00)	(387.17)
Equity Share Capital	211.25	211.25	211.25	211.25
Reserves (excluding Revaluation Reserve as shown in the Balance Sheet of previous year)				3,006.60
Earnings Per Share (before extraordinary items) (of ₹ 10/- each)				
Basic :	0.97	1.58	(0.79)	(17.98)
Diluted :	0.97	1.58	(0.79)	(17.98)
Earnings Per Share (after extraordinary items) (of ₹ 10/- each)				
Basic :	0.97	1.58	(0.79)	(17.98)
Diluted :	0.97	1.58	(0.79)	(17.98)

Notes:
1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 14th August, 2023 and have been subjected to the Limited review by the Statutory Auditors of the Company.
3. **Un-Audited financial results of Coffee Day Enterprises Limited (Standalone Information)** (₹ in Crores)

Particulars	Quarter ended 30th June, 2023 (Unaudited)	Quarter ended 31st March, 2023 (Audited)	Quarter ended 30th June, 2022 (Unaudited)	Year ended 31st March, 2023 (Audited)
Total income from operations (net)	5.48	4.84	5.00	18.81
Loss before tax and exceptional items	1.06	(1.25)	(2.24)	(3.08)
Loss/profit after tax and exceptional items	1.06	(1.25)	(2.24)	(3.08)

Place : Bengaluru
Date : 14th August, 2023

For and on behalf of Board of Directors
S.V Ranganath
Interim Chairman and Independent Director

ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಹೆಚ್.ಡಿ ಕೋಟೆ
ಓ.ಎಸ್ ಸಂಖ್ಯೆ: 123/2016

ವಾದಿಗಳು: ನಾಗರತ್ನ ಕೋಂ ಲೇಟ್ ಎಸ್.ಎಸ್ ಗಿರೀಶ್, ವಯಸ್ಸು ಸುಮಾರು 45 ವರ್ಷ, ಮಾದಾಪುರ ಗ್ರಾಮ, ಹಂಪಾಪುರ ಹೋಬಳಿ, ಹೆಚ್.ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ :ವಿರುದ್ಧ:

ಪ್ರತಿವಾದಿಗಳು: 1. ಎಂ.ಆರ್ ಕುಮಾರಸ್ವಾಮಿ @ ಶಿವಣ್ಣ ಮತ್ತು ಇತರರು, 4. ಪ್ರೇಮ ಕೋಂ ಲೇಟ್ ರಾಜಪ್ಪ, ವಯಸ್ಸು ಸುಮಾರು 43 ವರ್ಷ, 5. ಚೇತನ್ ಬಿನ್ ಲೇಟ್ ರಾಜಪ್ಪ, ವಯಸ್ಸು ಸುಮಾರು 19 ವರ್ಷ, 6. ಕಾವೇರಿ ಬಿನ್ ಲೇಟ್ ರಾಜಪ್ಪ ಕೋಂ ನಂಜಪ್ಪ, ವಯಸ್ಸು ಸುಮಾರು 23 ವರ್ಷ, 7. ಎಂ.ಕೆ ಮಹದೇವ ಬಿನ್ ಎಂ.ಆರ್ ಕುಮಾರಸ್ವಾಮಿ, ವಯಸ್ಸು ಸುಮಾರು 52 ವರ್ಷ, 8. ನಾಗಮ್ಮ ಕೋಂ ಎಂ.ಕೆ ಮಹದೇವ, ವಯಸ್ಸು ಸುಮಾರು 45 ವರ್ಷ, 9. ಎಂ. ಆಶಾ ಬಿನ್ ಎಂ ಮಹದೇವ, ವಯಸ್ಸು ಸುಮಾರು 28 ವರ್ಷ, 10 ಎಂ ಕಿರಣ್ ಬಿನ್ ಎಂ ಮಹದೇವ, ವಯಸ್ಸು ಸುಮಾರು 25 ವರ್ಷ, 11. ಗಾಯಿತ್ರಿ ಬಿನ್ ಎಂ ಕುಮಾರಸ್ವಾಮಿ ಕೋಂ ಬಿ.ಎಸ್ ರವಿ, ವಯಸ್ಸು ಸುಮಾರು 50 ವರ್ಷ, 12. ಎಂ ಕೆ ಉಮೇಶ ಬಿನ್ ಎಂ ಆರ್ ಕುಮಾರಸ್ವಾಮಿ, ವಯಸ್ಸು ಸುಮಾರು 47 ವರ್ಷ, 13. ಹಿತೇಶ್ ಬಿನ್ ಎಂ ಕೆ ಉಮೇಶ, ವಯಸ್ಸು ಸುಮಾರು 19 ವರ್ಷ, ಎಲ್ಲರ ವಾಸ: ಪದ್ಮಾವತಿ ನಿಲಯ, ಮನೆ ನಂಬರ್:341, 8ನೇ ಮುಖ್ಯ ರಸ್ತೆ, 9ನೇ ಕ್ರಾಸ್, ಬೆಂಗಳೂರು–28

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ದಾವೆಯಲ್ಲಿ ವಾದಿಗಳು ಪ್ರತಿವಾದಿಗಳ ವಿರುದ್ಧ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ದಾವೆ ಹೂಡಿದ್ದು, ಈ ಪ್ರಕಟಣೆಯಲ್ಲಿ ಉಲ್ಲೇಖಿಸಿರುವ 4 ರಿಂದ 13 ನೇ ಪ್ರತಿವಾದಿಗಳಾದ ನಿಮಗೆ ತಿಳಿಯಪಡಿಸುವುದೇನೆಂದರೆ ನೀವು ಇದುವರೆಗೆ ನ್ಯಾಯಾಲಯವು ಹೊರಡಿಸಿದ ಆದೇಶಿಕೆಗಳನ್ನು ಪಡೆದುಕೊಂಡಿರುವುದಿಲ್ಲ, ಹಾಗಾಗಿ ನ್ಯಾಯಾಲಯವು ಪತ್ರಿಕೆ ಪ್ರಕಟಣೆ ಮೂಲಕ ನೋಟೀಸ್ ಹೊರಡಿಸಿದ್ದು ನೀವು ದಿನಾಂಕ: 19–08–2023 ರಂದು ಬೆಳಗ್ಗೆ 11.00 ಗಂಟೆಗೆ ನ್ಯಾಯಾಲಯಕ್ಕೆ ನೀವು ಖುದ್ದು ಅಥವಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು, ತಪ್ಪಿದ್ದಲ್ಲಿ ನ್ಯಾಯಾಲಯವು ಏಕಪಕ್ಷೀಯವಾಗಿ ಪ್ರಕರಣವನ್ನು ಇತ್ಯಾರ್ಥಪಡಿಸಲಾಗುವುದು ಎಂದು ತಿಳಿಯಪಡಿಸಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ: ಶಿರಸ್ತೇದಾರರು, ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹೆಚ್.ಡಿ ಕೋಟೆ
ವಾದಿಗಳ ಪರ ವಕೀಲರು: ಗಂಗರಾಜು ಎಸ್.ಎಂ.ಎ ಎಲ್.ಎಲ್.ಬಿ ಶಂಕರ, ಎಂ.ಎ ಎಲ್.ಎಲ್.ಬಿ
ಕೇಶವ ಪ್ರಸಾದ್ ಎನ್. ಬಿ.ಎ, ಎಲ್.ಎಲ್.ಬಿ, ವಕೀಲರು
#2368/1, 1ನೇ ಮಹಡಿ, ನ್ಯೂ ಕಾಂತರಾಜು ಅರಸ್ ರಸ್ತೆ, ಮೈಸೂರು.

ಹುತಾತ್ಮರ ಸ್ಮರಣೆ, ಮೈನವಿರೇಳಿಸಿದ ಸಾಹಸ ಪ್ರದರ್ಶನ, ಆಕರ್ಷಕ ನೃತ್ಯರೂಪಕ

ಸ್ವಾತಂತ್ರ್ಯದ ಸಂಭ್ರಮ: ದೇಶಭಕ್ತಿ ಅನಾವರಣ





ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಸ್ವಾತಂತ್ರ್ಯೋತ್ಸವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಪ್ತಸ್ವರ ಆರ್ಟ್ಸ್ ಅಂಡ್ ಕ್ರಿಯೇಶನ್ಸ್ ವಿದ್ಯಾರ್ಥಿಗಳು ನೃತ್ಯ ಪ್ರದರ್ಶನ ನೀಡಿದರು –ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್

ಬೆಂಗಳೂರು: ಆಕರ್ಷಕ ಪಥಸಂಚಲನ, ಗಮನಸೆಳೆದ ನೃತ್ಯರೂಪಕಗಳು, ಮೈನವಿರೇಳಿಸಿದ ಟೆಂಟ್ ಪೆಗ್ಗಿಂಗ್, ಮೋಟಾರ್ ಸೈಕಲ್ ಪ್ರದರ್ಶನ... ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಬಿಬಿಎಂಪಿ, ಬೆಂಗಳೂರು ನಗರ ಜಿಲ್ಲೆ ಮತ್ತು ಶಾಲಾ ಶಿಕ್ಷಣ ಇಲಾಖೆ ಮಂಗಳವಾರ ಆಯೋಜಿಸಿದ್ದ ಸ್ವಾತಂತ್ರ್ಯೋತ್ಸವದಲ್ಲಿ ವಿವಿಧ ತಂಡಗಳ ಮತ್ತು ಶಾಲಾ ಮಕ್ಕಳ ಪಥಸಂಚಲನ ಗಮನಸೆಳೆಯಿತು.

ಗಡಿ ಭದ್ರತಾ ಪಡೆ, ಕೇಂದ್ರೀಯ ಮೀಸಲು ಪೊಲೀಸ್ ಪಡೆ, ಕೆಎಸ್‌ಆರ್‌ಪಿ, ಗೋವಾ ಪೊಲೀಸ್ ತಂಡ, ಸಂಚಾರ ಪೊಲೀಸ್, ಎನ್‌ಸಿಸಿ, ಅಗ್ನಿಶಾಮಕ ದಳ, ಅಬಕಾರಿ ತಂಡ, ಶ್ವಾನದಳ, ಗೃಹರಕ್ಷಕ ದಳ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಷ್ಟ್ರೀಯ ಮಿಲಿಟರಿ ಶಾಲೆ, ಆರ್ಮಿ ಪಬ್ಲಿಕ್ ಶಾಲೆ, ಪೊಲೀಸ್ ಪಬ್ಲಿಕ್ ಶಾಲೆ, ಪ್ರೆಸಿಡೆನ್ಸಿ ಶಾಲೆ, ತಿಲಕ್ ಮೆಮೊರಿಯಲ್ ಶಾಲಾ ಮಕ್ಕಳು ಪಥಸಂಚಲನದಲ್ಲಿ ಶಿಸ್ತಿನಿಂದ ಹೆಜ್ಜೆ ಹಾಕಿದರು. ರಮಣ ಶ್ರೀ ಹಾಗೂ ಸಮರ್ಥನಂ ಶಾಲೆಯ ಮಕ್ಕಳು ಪಥಸಂಚಲನದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಒಟ್ಟು 38 ತಂಡಗಳು ಪಥಸಂಚಲನದಲ್ಲಿ ಭಾಗವಹಿಸಿದ್ದವು.

ಪಥಸಂಚಲನದ ಗ್ರೂಪ್-1 ವಿಭಾಗದಲ್ಲಿ ಬಿಎಸ್‌ಎಫ್ ತಂಡಕ್ಕೆ ಪ್ರಥಮ ಸ್ಥಾನ ಲಭಿಸಿತು. ಸಿಆರ್‌ಪಿಎಫ್ (ಮಹಿಳಾ) ತಂಡ ದ್ವಿತೀಯ ಹಾಗೂ ಕೆಎಸ್‌ಆರ್‌ಪಿ ತಂಡವು ತೃತೀಯ ಸ್ಥಾನ ಪಡೆಯಿತು.

ವಿವಿಧ ಶಾಲಾ ತಂಡಗಳು ದೇಶಭಕ್ತಿ ಸಂದೇಶ ಸಾರುವ ನೃತ್ಯರೂಪಕಗಳನ್ನು ಪ್ರಸ್ತುತಪಡಿಸಿದವು.

ಸಾರಕ್ಕಿಯ ಕರ್ನಾಟಕ ಪಬ್ಲಿಕ್ ಶಾಲೆಯ 750 ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದ 'ವೀರ ನಮನ' ನೃತ್ಯ ರೂಪಕ ಆಕರ್ಷಕವಾಗಿತ್ತು. ದೇಶಕ್ಕಾಗಿ ಪ್ರಾಣವನ್ನು ಮುಡುಪಾಗಿಡುವ ಯೋಧರ ತ್ಯಾಗ, ಬಲಿದಾನ ಜೀವನದ ಕುರಿತಾದ ಈ ನೃತ್ಯರೂಪಕವು ನಮ್ಮ ನಾಡು 'ಸರ್ವಜನಾಂಗದ ಶಾಂತಿಯ ತೋಟ' ಎನ್ನುವುದನ್ನು ಸಹ ಬಿಂಬಿಸಿತು.

ಬೆಂಗಳೂರು ಉತ್ತರ ವಲಯದ ಹೇರೋಹಳ್ಳಿಯ ಬಿಬಿಎಂಪಿ ಸಂಯುಕ್ತ ಪದವಿಪೂರ್ವ ಕಾಲೇಜಿನ 700 ವಿದ್ಯಾರ್ಥಿಗಳು 'ವೀರಭೂಮಿ ವಿಧುರಾಶ್ವತ್ಥ ಧ್ವಜ ಸತ್ಯಾಗ್ರಹ' ರೂಪಕವನ್ನು ಆಕರ್ಷಕವಾಗಿ ಪ್ರಸ್ತುತಪಡಿಸಿದರು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ 50 ವಿದ್ಯಾರ್ಥಿಗಳು 'ರೋಪ್ ಸ್ಕಿಪ್ಪಿಂಗ್' ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಲೀಲಾಜಾಲವಾಗಿ ವಿವಿಧ ರೀತಿಯ ಸ್ಕಿಪ್ಪಿಂಗ್ ಪ್ರದರ್ಶನ ರೋಮಾಂಚನಕಾರಿಯಾಗಿತ್ತು.

ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಆ್ಯಂಡ್ ಸೆಂಟರ್‌ನ 'ಕಲಾರಿಪಯಟ್ಟು' ಮತ್ತು ಎಎಸ್‌ಸಿ ಕೇಂದ್ರದ ಟೆಂಟ್ ಪೆಗ್ಗಿಂಗ್ ಹಾಗೂ ಮೋಟಾರ್ ಸೈಕಲ್ ಸಾಹಸ ಪ್ರದರ್ಶನ ಮೈನವಿರೇಳಿಸಿತು.

ಗುಂಡು ನಿರೋಧಕ ಗಾಜು ಇಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾಷಣಕ್ಕಾಗಿ ವೇದಿಕೆಯಲ್ಲಿ ಮೊದಲು ಅಳವಡಿಸಲಾಗಿದ್ದ ಗುಂಡು ನಿರೋಧಕ ಗಾಜು ಅನ್ನು ನಂತರ ತೆಗೆಯಲಾಯಿತು.



ಎಎಸ್‌ಸಿ ಮತ್ತು ಕೇಂದ್ರದ ಯೋಧರು 'ಕಲಾರಿಪಯಟ್ಟು' ಪ್ರದರ್ಶಿಸಿದರು.



ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಮಂಗಳವಾರ 77ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಎ.ಎಸ್‌.ಸಿ. ಮತ್ತು ಕೇಂದ್ರದ ಯೋಧರಿಂದ 'ಟೆಂಟ್ ಪೆಗ್ಗಿಂಗ್ ' ಪ್ರದರ್ಶಿಸಿದರು. –ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ.



ಎಎಸ್‌ಸಿ ಮತ್ತು ಕೇಂದ್ರದ ಯೋಧರು 'ಮೋಟಾರ್ ಸೈಕಲ್ ' ಸಾಹಸ ಪ್ರದರ್ಶಿಸಿದರು.



ಸಾರಕ್ಕಿಯ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು 'ವೀರ ನಮನ' ನೃತ್ಯರೂಪಕ ಪ್ರದರ್ಶಿಸಿದರು.

ಚಿತ್ರಾವಳಿ



ನಗರದ ತ್ಯಾಗರಾಜ ಕೋ– ಆಪರೇಟಿವ್ ಬ್ಯಾಂಕ್‌ನಲ್ಲಿ ಮಹಿಳಾ ಪೌರಕಾರ್ಮಿಕರು ಧ್ವಜಾರೋಹಣ ನೆರವೇರಿಸಿದರು. ಬ್ಯಾಂಕ್ ಅಧ್ಯಕ್ಷ ಡಾ.ಎಂ.ಆರ್. ವೆಂಕಟೇಶ್ ಇದ್ದರು.



ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಕುಲಪತಿ ಎಸ್‌.ಎಂ.ಜಯಕರ, ಕುಲಸಚಿವ ಶೇಕ್ ಲತೀಫ್, ಕುಲಸಚಿವ (ಮೌಲ್ಯಮಾಪನ) ಸಿ.ಶ್ರೀನಿವಾಸ್, ವಿತ್ತಾಧಿಕಾರಿ ಅಜಿತ್ ಕುಮಾರ್ ಹೆಗ್ಡೆ ಇದ್ದರು.



ಚಿಕ್ಕಲಸಂದ್ರ ವಾರ್ಡ್‌ನ ಚೌಡೇಶ್ವರಿ ವಿದ್ಯಾಸಂಸ್ಥೆಯಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಸಂಭ್ರಮದಲ್ಲಿ ಸಂಸ್ಥೆಯ ಅಧ್ಯಕ್ಷೆ ಪ್ರೇಮಾ ಪ್ರಸನ್ನಕುಮಾರ್, ಬಿಬಿಎಂಪಿ ಮಾಜಿ ಸದಸ್ಯ ಬಿ.ಎಸ್. ವೆಂಕಟಸ್ವಾಮಿ ನಾಯ್ಡು ಇದ್ದರು



ಎಐಡಿಎಸ್‌ಒ ಬೆಂಗಳೂರು ಜಿಲ್ಲಾ ಸಮಿತಿಯಿಂದ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ವಿದ್ಯಾರ್ಥಿಗಳು ಮಹನೀಯರ ತ್ಯಾಗ–ಬಲಿದಾನ ನೆನಪಿಸಿಕೊಂಡು ಪ್ರತಿಜ್ಞೆ ಮಾಡಿದರು.



ಕೆಂಗೇರಿಯ ಕೆಎಲ್‌ಇ ಬಸವ ವಸತಿ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ವಿದ್ಯಾರ್ಥಿನಿಯರು ದೇಶಭಕ್ತಿಗೀತೆಯನ್ನು ಪ್ರಸ್ತುತಪಡಿಸಿದರು

ಸ್ವಾತಂತ್ರ್ಯ ಸಂಭ್ರಮಕ್ಕೆ ಸಾಂಸ್ಕೃತಿಕ ಮೆರುಗು

ಮನೆ ಮನೆಗಳ ಮೇಲೂ ತ್ರಿವರ್ಣ ಧ್ವಜ ಹಾರಾಟ, ದೀಪಾಲಂಕಾರದಿಂದ ಕಂಗೊಳಿಸಿದ ಕಟ್ಟಡಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಎಲ್ಲೆಡೆ ಮಂಗಳವಾರ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮವು ಮೇಳೈಸಿತ್ತು. ಸಂಘ ಸಂಸ್ಥೆಗಳು, ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜುಗಳ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು. ಮನೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳ ಮೇಲೆ ತ್ರಿವರ್ಣ ಧ್ವಜ ಹಾರಿಸಿ, ದೇಶಪ್ರೇಮ ಮೆರೆಯಲಾಯಿತು.

ಮಂಗಳವಾರ ಬಿಸಿಲಿನ ವಾತಾವರಣ ಇದ್ದುದ್ದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳೂ ಈ ಬಾರಿ ವಿಜೃಂಭಣೆಯಿಂದ ನೆರವೇರಿದವು. ಶಾಲಾ ಮಕ್ಕಳು ಕೈಗೆ ಬ್ಯಾಂಡ್ ಹಾಗೂ ತ್ರಿವರ್ಣ ವಸ್ತ್ರಧರಿಸಿ ಮೆರುಗು ತುಂಬಿದರು.

ಪೊಲೀಸ್ ಕಮಿಷನರ್ ಕಚೇರಿ: ಇನ್ಫೆಂಟ್ರಿ ರಸ್ತೆಯ ಪೊಲೀಸ್ ಕಮಿಷನರೇಟ್ ಕಚೇರಿಯಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಪೊಲೀಸ್ ಕಮಿಷನರ್ ಬಿ. ದಯಾನಂದ್ ಧ್ವಜಾರೋಹಣ ನೆರವೇರಿಸಿದರು. ಪೊಲೀಸ್ ಸಂಗೀತ ವಾದ್ಯ ಮೇಳದವರು, ರಾಷ್ಟ್ರಗೀತೆ ಪ್ರಸ್ತುತಪಡಿಸಿದರು.

ನೃಪತುಂಗ ರಸ್ತೆಯಲ್ಲಿರುವ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್ ಧ್ವಜಾರೋಹರಣ ನೆರವೇರಿಸಿದರು.

ಎಪಿಎಸ್ ಶಿಕ್ಷಣ ದತ್ತಿಯ 11 ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ ಸಂಭ್ರಮ ಕಂಡುಬಂತು. ಅಂದಾಜು ಎರಡು ಸಾವಿರ ಮಕ್ಕಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಗದಗ, ವಿಜಯಪುರದ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದ ಸರಸ್ವತಿ ಜೀ ಅವರು ಧ್ವಜಾರೋಹಣ ನೆರವೇರಿಸಿ ಪಥಸಂಚಲನಕ್ಕೆ ಚಾಲನೆ ನೀಡಿದರು. ಎಪಿಎಸ್ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಸಿ.ಎ.ವಿಷ್ಣುಭರತ್ ಅಲಂಪಲ್ಲಿ ಹಾಜರಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಮಾತನಾಡಿ, 'ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆಯ ಫಲವಾಗಿ ಸ್ವಾತಂತ್ರ್ಯವನ್ನು ನಾವು ಇಂದು ಅನುಭವಿಸುತ್ತಿದ್ದೇವೆ' ಎಂದರು.

ನಗರದ ಹಳೆ ವಿಮಾನ ನಿಲ್ದಾಣ ರಸ್ತೆ ಮಣಿಪಾಲ್ ಆಸ್ಪತ್ರೆಯಲ್ಲಿ ಸಾಂಸ್ಕೃತಿಕ ಸಂಭ್ರಮ ನಡೆಯಿತು. ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಕುಲಪತಿ ಲಿಂಗರಾಜ ಗಾಂಧಿ ಮಾತನಾಡಿದರು.



ನಗರದ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದ ಬಳಿ ನಡೆದ ಸಮಾರಂಭದಲ್ಲಿ ಶಾಸಕ ಬಸವರಾಜ ಬೊಮ್ಮಾಯಿ, ಬಿಜೆಪಿ ಮುಖಂಡ ಗೋವಿಂದ ಕಾರಜೋಳ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್‌.ರವಿಕುಮಾರ್, ರಾಜ್ಯ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಇದ್ದರು.

ಸಶಕ್ತ ರಾಷ್ಟ್ರ

2047ರ ವೇಳೆಗೆ ದೇಶ ವಿಶ್ವದ ಅತ್ಯಂತ ಸಶಕ್ತ ರಾಷ್ಟ್ರವಾಗಲಿದೆ. ಪ್ರಧಾನಿ ಮೋದಿ ಹೇಳಿದಂತೆ ಅಮೃತಕಾಲ ಆರಂಭವಾಗಿದೆ. ಸಂಕಲ್ಪ ಮತ್ತು ಛಲದೊಂದಿಗೆ ದೇಶವನ್ನು ಮುನ್ನಡೆಸಬೇಕಿದೆ.

ಬಸವರಾಜ ಬೊಮ್ಮಾಯಿ, ಶಾಸಕ (ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ನಡೆದ ಸಮಾರಂಭದಲ್ಲಿ ಅವರು ಮಾತನಾಡಿದರು)

'ಸ್ವಾತಂತ್ರ್ಯ ರಕ್ಷಿಸೋಣ'

ಕರ್ನಾಟಕದ ಮೂಲಕ ಭಾರತವನ್ನು ನೋಡೋಣ. ಪಂಚಭೂತಗಳ ಸಮತತ್ತ್ವದಷ್ಟೇ ಭಾರತೀಯ ಸ್ವಾತಂತ್ರ್ಯದ ಪರಿಕಲ್ಪನೆಯೂ ಅಷ್ಟೇ ಶ್ರೇಷ್ಠ. ಮಹಾತ್ಮ ಗಾಂಧೀಜಿ ಸೇರಿದಂತೆ ಅನೇಕರ ತ್ಯಾಗ, ಬಲಿದಾನದ ಮಹಾಫಲವನ್ನು ಜತನದಿಂದ ಕಾಪಾಡಿಕೊಳ್ಳೋಣ

ಎಚ್‌.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ಮುಂಚೂಣಿಯಲ್ಲಿ ಭಾರತ': 'ದೇಶಕ್ಕೆ ಸ್ವಾತಂತ್ರ್ಯ ಸುಮ್ಮನೆ ಬಂದಿಲ್ಲ. ಲಕ್ಷಾಂತರ ಭಾರತೀಯರ ಅಮೂಲ್ಯ ಜೀವ ಬಲಿದಾನದ ಫಲವಾಗಿದೆ. ಸ್ವಾತಂತ್ರ್ಯ ಯೋಧರ ಆತ್ಮಕ್ಕೆ ಶಾಂತಿ ಕೋರುವುದರ ಜೊತೆಗೆ ಅವರ ಕುಟುಂಬಕ್ಕೆ ನಾವು ಸದಾ ಚಿರಋಣಿಯಾಗಿ ಇರಬೇಕು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ವಿಧಾನಸೌಧ ಪೂರ್ವಭಾಗದ ಮೆಟ್ಟಿಲುಗಳ ಎದುರು ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, '77 ವರ್ಷಗಳಿಂದ ಭಾರತ ಸಾಕಷ್ಟು ಅಭಿವೃದ್ಧಿ ಕಂಡಿದೆ. ಬಲಿಷ್ಠ ರಾಷ್ಟ್ರವಾಗಿ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿದೆ. ವಿಶ್ವಗುರು ಆಗುವಲ್ಲಿ ದಾಪುಗಾಲು ಇಡುತ್ತಿರುವುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ಸಂಗತಿ' ಎಂದರು.

ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ವಿಧಾನ ಪರಿಷತ್ತಿನ ಕಾರ್ಯದರ್ಶಿ ಮಹಾಲಕ್ಷ್ಮಿ, ವಿಧಾನಸಭಾ ಕಾರ್ಯದರ್ಶಿ ವಿಶಾಲಾಕ್ಷಿ, ವಿಧಾನ ಪರಿಷತ್ತಿನ ಹೆಚ್ಚುವರಿ ಕಾರ್ಯದರ್ಶಿ ಎಸ್‌.ನಿರ್ಮಲಾ, ಸಭಾಪತಿಗಳ ಆಪ್ತ ಕಾರ್ಯದರ್ಶಿ ಕೆ.ಡಿ. ಶೈಲಾ ಇದ್ದರು.

'2.72 ಲಕ್ಷ ಪ್ರಕರಣ ಹೈಕೋರ್ಟ್‌ನಲ್ಲಿ ಬಾಕಿ'



ಪ್ರಸನ್ನ ಬಿ. ವರಾಳೆ

'ಹೈಕೋರ್ಟ್‌ನಲ್ಲಿ 2,72,041 ಪ್ರಕರಣಗಳು ಬಾಕಿಯಿದ್ದು, ಇವುಗಳನ್ನು ಶೀಘ್ರವೇ ವಿಲೇವಾರಿ ಮಾಡಬೇಕು' ಎಂದು ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಸೂಚಿಸಿದರು.

ಹೈಕೋರ್ಟ್ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು, 'ಕಾನೂನಿನ ಮುಂದೆ ಎಲ್ಲರೂ ಸಮಾನರು. ನ್ಯಾಯಾಂಗ ವ್ಯವಸ್ಥೆಯನ್ನು ಬಲಗೊಳಿಸಲು ಎಲ್ಲರೂ ಶ್ರಮಿಸಬೇಕು' ಎಂದು ಹೇಳಿದರು.

ಹೆಚ್ಚುವರಿ ಸಾಲಿಸಿಟರ್ ಜನರಲ್ ಶಾಂತಿಭೂಷಣ್, ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಇದ್ದರು.



ಎಪಿಎಸ್ ಶಿಕ್ಷಣ ದತ್ತಿಯ 11 ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ನಡೆದ ಕಾರ್ಯಕ್ರಮದಲ್ಲಿ ಗದಗ ಹಾಗೂ ವಿಜಯಪುರದ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದ ಸರಸ್ವತಿ ಜೀ ಅವರು ಮಹನೀಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು



ಬಿಬಿಎಂಪಿ ಬೆಂಕಿ ಅವಘಡದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲು ಸಹಕರಿಸಿದ ಹಲಸೂರು ಗೇಟ್ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ರಮೇಶ್ ಹಾಗೂ ಹೆಡ್ ಕಾನ್‌ಸ್ಟೆಬಲ್ ಶಿವಾನಂದ ಅವರನ್ನು ಬಿಬಿಎಂಇ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸನ್ಮಾನಿಸಲಾಯಿತು

'ನನ್ನ ಮಣ್ಣು ನನ್ನ ದೇಶ' ಅಭಿಯಾನ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ 'ನನ್ನ ಮಣ್ಣು ನನ್ನ ದೇಶ' ಅಭಿಯಾನದಲ್ಲಿ ಬಿಬಿಎಂಪಿ ಅಧಿಕಾರಿಗಳು ಹಾಗೂ ನೌಕರರು ಮಣ್ಣು ಹಿಡಿದು 'ಪಂಚಪ್ರಾಣ್' ಶಪಥ ತೆಗೆದುಕೊಂಡರು.


ಹುತಾತ್ಮ ಯೋಧರ ಗೌರವಾರ್ಥ ಸ್ಥಾಪಿಸಿರುವಂತಹ ಶಿಲಾಫಲಕದ ಮುಂಭಾಗ ನಡೆದ ಕಾರ್ಯಕ್ರಮದಲ್ಲಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಧ್ವಜಾರೋಹಣ ನೆರವೇರಿಸಿದರು.

ಕಾಲ್ನಡಿಗೆ ಜಾಥಾ: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಕಾಲ್ನಡಿಗೆ ಜಾಥಾಗೆ ರಾಕೇಶ್ ಸಿಂಗ್, ತುಷಾರ್ ಗಿರಿನಾಥ್, ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ಚಾಲನೆ ನೀಡಿದರು.

'ನಾವೆಲ್ಲರು ಒಂದೇ, ಜಾತಿ ಒಂದೇ, ಮತ ಒಂದೇ' ಎಂದು ಸಾರಲು ಜಾಥಾ ಹಮ್ಮಿಕೊಳ್ಳಲಾಗಿತ್ತು. ಬಿಬಿಎಂಪಿ ಕೇಂದ್ರ ಕಚೇರಿಯಿಂದ ಹಡ್ಸನ್ ಸರ್ಕಲ್ ಮಾರ್ಗವಾಗಿ ಕಬ್ಬನ್ ಪಾರ್ಕ್ ಮೂಲಕ ಎಂ.ಜಿ ರಸ್ತೆಗೆ ಆಗಮಿಸಿದ ಜಾಥಾ, ಮಹಾತ್ಮ ಗಾಂಧಿ ಪ್ರತಿಮೆಗೆ ಮಾಲಾರ್ಪಣೆಯೊಂದಿಗೆ ಮುಕ್ತಾಯವಾಯಿತು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಎಚ್. ವಿ.ಅಶ್ವಥ್, ಎಸ್.ಜಿ.ಸುರೇಶ್, ಕೆ.ಜಿ.ರವಿ, ಸಾಯಿಶಂಕರ್, ಬಾಬಣ್ಣ, ಮಂಜು, ರುದ್ರೇಶ್, ಕೆ.ಮಂಜೇಗೌಡ, ಸಂತೋಷ್ ಕುಮಾರ್ ನಾಯಕ್, ಸುಬ್ರಮಣ್ಯ ಪದಕಿ, ನರಸಿಂಹ, ರೇಣುಕಾಂಬ, ಸೂರ್ಯಕುಮಾರಿ, ಎ.ಇ.ಇ. ಉಮೇಶ್ ಮತ್ತು 500ಕ್ಕೂ ಬಿಬಿಎಂಪಿ ಅಧಿಕಾರಿ, ಸಿಬ್ಬಂದಿ ಕಾಲ್ನಡಿಗೆ ಜಾಥಾದಲ್ಲಿ ಪಾಲ್ಗೊಂಡಿದ್ದರು. ಎಲ್ಲರೂ ಆಕರ್ಷಕ ಉಡುಪು ಧರಿಸಿ, ಧ್ವಜವನ್ನು ಹಿಡಿದು ಸಾಗಿದರು. ವಿಶೇಷ ಆಯುಕ್ತರಾದ ಜಯರಾಂ ರಾಯಪುರ, ಡಾ. ತ್ರಿಲೋಕ್ ಚಂದ್ರ, ಡಾ. ಹರೀಶ್ ಕುಮಾರ್, ರೆಡ್ಡಿ ಶಂಕರ ಬಾಬು, ಪ್ರೀತಿ ಗೆಹ್ಲೋಟ್, ಉಪ ಆಯುಕ್ತ ಮಂಜುನಾಥ್ ಸ್ವಾಮಿ, ಸಹಾಯಕ ಆಯುಕ್ತ ಅಜಯ್ ಇದ್ದರು.





ರೋಬಾಟ್‌ಗಳ ಕೃತಕ ಸ್ನಾಯುಗಳು

ಅಮೃತೇಶ್ವರಿ ಬಿ.

ಇಂದು ರೋಬಾಟ್‌ಗಳು ನಮ್ಮ ಆಧುನಿಕ ಜೀವನಶೈಲಿ, ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಬಾಹ್ಯಾಕಾಶ ವಿಜ್ಞಾನ ಮತ್ತು ರಕ್ಷಣಾ ವಿಭಾಗದ ಅವಿಭಾಜ್ಯ ಅಂಗಗಳಾಗಿವೆ. ರೋಬಾಟುಗಳ ಅನ್ವಯದಿಂದಲೇ ನಾವು ಒಂದು ಗ್ರಹದಿಂದ ಮತ್ತೊಂದು ಗ್ರಹ ಎಂದು ಇಡೀ ಸೌರಮಂಡಲವನ್ನೇ ಸುತ್ತುವ ಯೋಜನೆಗಳನ್ನು ಹಾಕಿಕೊಳ್ಳುತ್ತಿದ್ದೇವೆ. ಒಂದಷ್ಟು ಯೋಜನೆಗಳಲ್ಲಿ ತಕ್ಕಮಟ್ಟಿಗೆ ಯಶಸ್ಸು ಕೂಡ ಲಭಿಸಿದೆಯೆನ್ನಿ. ಆದರೆ ಮತ್ತೊಂದೆಡೆ ಈ ಯಶಸ್ಸಿಗೆ ತಳಹದಿಯಾದ ರೋಬಾಟ್‌ಗಳನ್ನು ಇನ್ನೂ ಅಭಿವೃದ್ಧಿಪಡಿಸುವ ಸಂಶೋಧನಾಕಾರ್ಯಗಳು ಜೊತೆಜೊತೆಗೇ ಸಾಗಿವೆ. ರೋಬಾಟ್‌ಗಳು ಮನುಷ್ಯನ ಅನುಕರಣೆಯಾದರೂ ಮನುಷ್ಯನಿಗಿಂತ ಅವು ಬಹಳಷ್ಟು ವಿಷಯಗಳಲ್ಲಿ ಭಿನ್ನವೇ. ಇತ್ತೀಚೆಗೆ ಅವುಗಳಿಗೆ ನಮ್ಮಂತೆ ಭಾವನೆ, ಪ್ರಜ್ಞೆಗಳು ಮೂಡಿದರೆ ಹೇಗೆ ಎನ್ನುವ ಚರ್ಚೆಗಳೂ ನಡೆಯುತ್ತಿವೆ. ಅದೇನೆ ಇರಲಿ, ರೋಬಾಟ್‌ಗಳು ಇನ್ನೂ ಹೆಚ್ಚೆಚ್ಚು ಸುಧಾರಣೆಯಾಗಬೇಕು ಎನ್ನುವುದು ವಿಜ್ಞಾನಿಗಳ ಬಯಕೆ. ಹಾಗಾಗಿಯೇ ಮನುಷ್ಯನ ತದ್ರೂಪಿಯೇನೋ ಎನ್ನುವ ಮಟ್ಟಕ್ಕೆ ಅವನ್ನು ಸುಧಾರಿಸುತ್ತಿರುವುದನ್ನೂ ಕಾಣಬಹುದು.

ರೋಬಾಟ್‌ಗಳ ಚಲನೆಯ ಬಗ್ಗೆ ನಿಮಗೆ ತಿಳಿದೇ ಇದೆ. ಅವು ನಮ್ಮಂತೆ ಅಥವಾ ಇತರೆ ಪ್ರಾಣಿಗಳ ಹಾಗೆ ಸರಾಗವಾಗಿ ತಮ್ಮ ಕೈಕಾಲುಗಳನ್ನು ಆಡಿಸಲಾರವು. ಯಾಕೆ ಹೀಗೆ? ನಮ್ಮ ಕೈಕಾಲುಗಳಲ್ಲಿರುವ ಸ್ನಾಯುಗಳು ಐಚ್ಛಿಕ ಸ್ನಾಯುಗಳು. ಅರ್ಥಾತ್ ಅವು ನಮ್ಮ ಇಚ್ಛೆಗೆ ಒಳಪಡುವ ಮೃದುವಾದ ಸ್ನಾಯುಗಳು. ಬೇಕೆಂದಾಗ ಮುಂದಕ್ಕೆ ಅಥವಾ ಹಿಂದಕ್ಕೆ ಚಾಚಬಹುದು. ಆದರೆ ರೋಬಾಟುಗಳ ದೇಹ – ಹೀಗೆ ಮೃದುವಾದ ಮತ್ತು ಸುಲಭವಾಗಿ ಬಾಗುವ ಸ್ನಾಯುಗಳಿಂದ ಮಾಡಿಲ್ಲವಾದ್ದರಿಂದ ಅವುಗಳ ಚಲನೆಗೆ ಮಿತಿಯಿದೆ. ಇದೋ ಈ ಮಿತಿಯನ್ನು ಹಿಂದಿಕ್ಕಿ ನಮ್ಮಂತೆಯೇ ಸುಲಭವಾಗಿ ಚಲಿಸಲು ಸಹಾಯವಾಗುವ ಕೃತಕ ಸ್ನಾಯುವನ್ನು ಸೃಷ್ಟಿಸಿದ್ದಾರೆ ಪೆನ್ ಸ್ಟೇಟ್ ವಿಶ್ವವಿದ್ಯಾನಿಲಯದ ಕಿಂಗ್ ವಾಂಗ್ ಮತ್ತು ಸಂಗಡಿಗರು. ಈ ಸಂಶೋಧನೆಯು ಮೊನ್ನೆ ನೇಚರ್ ಮೆಟೀರಿಯಲ್ಸ್ ಪತ್ರಿಕೆಯಲ್ಲಿ ವರದಿಯಾಗಿದೆ.

ಇವರು ಸಂಶೋಧಿಸಿರುವ ಕೃತಕ ಸ್ನಾಯುವು ಒಂದು ಹೊಸಬಗೆಯ ಫೆರೋಎಲೆಕ್ಟ್ರಿಕ್ ಪಾಲಿಮರು. ಇವು ತಮ್ಮ ಮೇಲೆ ಬೀರಿದ ವಿದ್ಯುತ್‌ಶಕ್ತಿಯನ್ನು ತತ್‌ಕ್ಷಣವೇ ಯಾಂತ್ರಿಕಶಕ್ತಿಯಾಗಿ ಪರಿವರ್ತಿಸಿಕೊಳ್ಳಬಲ್ಲವು. ನಿರ್ದೇಶನದ ಮೇರೆಗೆ ಯಾಂತ್ರಿಕ ಶಕ್ತಿಯಿಂದಾಗಿ ಅವು ಚಲಿಸುತ್ತವೆ, ಬಾಗುತ್ತವೆ ಹಾಗೂ ಮತ್ತೆ ಮೊದಲಿನ ಸ್ಥಿತಿಗೆ ಬರುತ್ತವೆ. ಅರ್ಥಾತ್, ಈ ಬಗೆಯ ಪಾಲಿಮರು ಅಥವಾ ಕೃತಕ ಸ್ನಾಯುಗಳು ವೈದ್ಯಕೀಯ ಸಾಧನಗಳು, ಮುಂದುವರೆದ ರೋಬಾಟ್‌ಗಳು, ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ, ಕೈಗಾರಿಕಾ ಕ್ಷೇತ್ರಗಳಲ್ಲಿ ಬಹುಬೇಡಿಕೆಯ ಸಾಧನಗಳಾಗುವುದಂತೂ ಸತ್ಯ. ರೋಬಾಟ್‌ಗಳ ಮೇಲೆ ಬಲಪ್ರಯೋಗಿಸಿದಾಗ ಅವುಗಳ ಆಕಾರ ಹಾಗೂ ಚಲನೆಯಲ್ಲಿ ಹೇಗೆ ಬದಲಾವಣೆಯಾಗುತ್ತವೆ ಎನ್ನುವುದು ಒಂದು ಮುಖ್ಯ ಗುಣಲಕ್ಷಣ. ಆದರೆ, ಇದುವರೆಗೂ ಬಳಕೆಯಲ್ಲಿರುವ ರೋಬಾಟ್‌ಗಳು ಬಾಗಲಾರದ, ಸ್ಥಿರವಾಗಿರುವ ಹಾಗೂ ಕಠಿಣವಾಗಿರುವಂಥವು. ಆದರೆ ಈಗ ಪತ್ತೆಮಾಡಿರುವ ಮೃದುವಾಗಿರುವ ಫೆರೋಎಲೆಕ್ಟ್ರಿಕ್ ಪಾಲಿಮರುಗಳು ನಮಗೆ ಬೇಕೆಂದ ರೀತಿಯಲ್ಲಿ ಬಾಗಬಲ್ಲವು ಹಾಗೂ ಪರಿಸರಕ್ಕೆ ತಕ್ಕಂತೆ ಹೊಂದಿಕೊಳ್ಳಬಲ್ಲಂಥವು. ಹೆಚ್ಚುಕಡಿಮೆ ಪ್ರಾಣಿಗಳಂತೆಯೇ ಚಲನೆಯನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಳ್ಳಬಹುದಾದ ಒಂದು ಸೂಪರ್ ಸಾಧನ. ಹೀಗಾಗಿ ಈ ಮೃದು ರೋಬಾಟ್‌ಗಳು ತಮ್ಮ ಬಲ, ಸಾಮರ್ಥ್ಯ ಹಾಗೂ ಪ್ರಾಣಿಗಳ ಸ್ನಾಯುಗಳಂತೆ ಸುಲಭವಾಗಿ ಬಾಗುವ ಗುಣಲಕ್ಷಣಗಳಿಂದಾಗಿ ವಿಜ್ಞಾನಕ್ಷೇತ್ರದಲ್ಲಿ ವಿಶೇಷ ಗಮನವನ್ನು ಸೆಳೆಯುತ್ತಿವೆ. ಮೃದುವಾಗಿದ್ದರೂ, ಹೆಚ್ಚಿನ ಭಾರವನ್ನು ಹಾಗೂ ಒತ್ತಡವನ್ನು ಸಹಿಸಿಕೊಳ್ಳಬಲ್ಲ ಇವು ಸಾಫ್ಟ್ ರೋಬಾಟಿಕ್ಸ್ ಹಾಗೂ ಎಲೆಕ್ಟ್ರಾನಿಕ್ಸ್‌ನಂತಹ ವಿಜ್ಞಾನ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಮತ್ತಷ್ಟು ಹೊಸ ಪ್ರಯೋಗಗಳಲ್ಲಿ ಬಳಕೆಗೆ ಬರುತ್ತವೆ ಎನ್ನುವುದು ವಿಜ್ಞಾನಿಗಳ ಅಂದಾಜು.

ಈ ರೋಬಾಟ್‌ಗಳು ಸುಲಭವಾಗಿ ಬಾಗುವ ಗುಣಲಕ್ಷಣಗಳಿಂದಾಗಿ ವಿಶೇಷ ಗಮನವನ್ನು ಸೆಳೆಯುತ್ತಿವೆ.

ಈ ಹೊಸ ಪಾಲಿಮರುಗಳು ಇತರೆ ಪಾಲಿಮರುಗಳಿಗಿಂತ ಅಗ್ಗವೂ ಹೌದು, ಹಗುರವೂ ಹೌದು. ಆದರೆ ಇವುಗಳ ಬಲ ಇತರೆ ಪಾಲಿಮರುಗಳಿಗಿಂತ ತುಸು ಕಡಿಮೆ ಹಾಗೂ ಇವುಗಳನ್ನು ಬಳಸಲು ಬೇಕಾಗುವ ಶಕ್ತಿ ತುಸು ಹೆಚ್ಚು ಎನ್ನುವುದು ಈ ಕೃತಕ ಸ್ನಾಯುವಿನ ಮಿತಿ. ಅರ್ಥಾತ್, ಈ ಪಾಲಿಮರಿನ ಮೇಲೆ ವಿದ್ಯುತ್‌ಶಕ್ತಿಯನ್ನು ಪ್ರಯೋಗಿಸಿದಾಗ ಆಕಾರದಲ್ಲಿ ಬದಲಾವಣೆಯಾಗಲು ಹೆಚ್ಚಿನ ಶಕ್ತಿಯ ಅವಶ್ಯಕತೆಯಿದೆಯಂತೆ. ಇದನ್ನು ಬಗೆಹರಿಸಲು ಇವರು ನ್ಯಾನೋಕಣಗಳನ್ನು ಬಳಸಿಕೊಂಡು, ಪರ್‌ಕೊಲೇಟಿವ್ ಫೆರೋಎಲೆಕ್ಟ್ರಿಕ್ ಪಾಲಿಮರ್ ನ್ಯಾನೋಕಾಂಪೋಸಿಟ್ ಎನ್ನುವ ಸೂಕ್ಷ್ಮವಾದ ಬಿಲ್ಲೆ ಅಥವಾ ಸಾಧನವನ್ನು ತಯಾರಿಸಿ ಕೃತಕ ಸ್ನಾಯುವಿಗೆ ಬೆಸೆದಿದ್ದಾರೆ. ಆಗ ಪಾಲಿಮರಿನೊಳಗೆ ಒಂದು ಗಟ್ಟಿಯಾದ ಬಂಧ ಏರ್ಪಡುತ್ತದೆ. ಈ ಬಂಧವು ಬೇಕಾದ್ದಕ್ಕಿಂತ ಕಡಿಮೆ ಅಂದರೆ, ಶೇ 10ಕ್ಕಿಂತಲೂ ಕಡಿಮೆ ವಿದ್ಯುತ್‌ಶಕ್ತಿಯನ್ನು ಬಳಸಿಕೊಂಡೇ ವಿದ್ಯುತ್ ಶಕ್ತಿಯನ್ನು ಯಾಂತ್ರಿಕ ಶಕ್ತಿಯಾಗಿ ಪರಿವರ್ತನೆಯಾಗುತ್ತದೆ. ಅಂದರೆ ಶೇ 10ಕ್ಕಿಂತಲೂ ಕಡಿಮೆ ವಿದ್ಯುತ್‌ಶಕ್ತಿಯಿಂದಲೇ ಪಾಲಿಮರು ಅಥವಾ ಸ್ನಾಯುಗಳ ಚಲನೆ ಆಗುತ್ತದೆ.

ರೋಬಾಟುಗಳ ಓಡಾಟ, ನಡೆದಾಟವೆಲ್ಲವೂ ಮನುಷ್ಯರಂತೆಯೇ ಸಹಜವಾಗಿಬಿಟ್ಟರೆ, ಆಗ ಅದು ರೋಬಾಟಿಕ್ಸ್ ವಿಜ್ಞಾನದಲ್ಲಿ ಮತ್ತೊಂದು ಸಾಧನೆಯೇ ಆಗುತ್ತದೆ. ಈಗಂತೂ ರೋಬಾಟ್‌ಗಳೇ ಶಸ್ತ್ರಚಿಕಿತ್ಸೆಯನ್ನೂ ನಡೆಸುತ್ತವಾದ್ದರಿಂದ ಅವುಗಳು ನಮ್ಮಷ್ಟೇ ಸಹಜವಾಗಿರಬೇಕಾದ್ದು ಅನಿವಾರ್ಯ. ಅದರಲ್ಲಿ ಈ ಕೃತಕ ಸ್ನಾಯುಗಳ ಪಾತ್ರ ಮಹತ್ವದ್ದು. ಹಾಗಾಗಿ ಈ ಕೃತಕ ಸ್ನಾಯುಗಳು ವೈದ್ಯಕೀಯ ಸಾಧನಗಳು, ಆಪ್ಟಿಕಲ್ ಸಾಧನಗಳು ಹಾಗೂ ಸಾಫ್ಟ್ ರೋಬಾಟಿಕ್ಸ್ ಕ್ಷೇತ್ರಗಳಲ್ಲಿ ಬಹಳ ಬೇಡಿಕೆಯ ಹಾಗೂ ಉಪಯುಕ್ತ ಸಾಧನವಾಗಬಲ್ಲದು ಎನ್ನುತ್ತಾರೆ, ವಾಂಗ್. ❖



ನೆಲದಡಿಯ ಜೀವಜಾಲ

ಕೊಳ್ಳೇಗಾಲ ಶರ್ಮ

'ಇಹುದೋ ಇಲ್ಲವೋ ತಿಳಿಯಗೊಡದೊಂದು ವಸ್ತು ನಿಜ' ಎಂದಿದ್ದರು ಡಿವಿಜಿ. ನಿಜ, ಎಂದು ಡಿವಿಜಿಯವರು ಪಾರಮಾರ್ಥಿಕವನ್ನು ಕುರಿತು ಹೇಳಿರಬಹುದು. ಆದರೆ ಇದು ನಿಸರ್ಗದ ವಾಸ್ತವತೆಯೂ ಹೌದು ಎನ್ನುವುದಕ್ಕೆ ಮೊನ್ನೆ 'ಪಿಎನ್‌ಎಎಸ್' ಪತ್ರಿಕೆಯಲ್ಲಿ ವರದಿಯಾದ ಸಂಶೋಧನೆಯೇ ಪುರಾವೆ. ಸ್ವಿಟ್ಜರ್ಲ್ಯಾಂಡಿನ ಸ್ವಿಸ್ ಫೆಡರಲ್ ಇನ್ಸ್ಟಿಟ್ಯೂಟ್ ಆಫ್ ಫಾರೆಸ್ಟ್ಸ್ ಸಂಸ್ಥೆಯ ಅರಣ್ಯ ವಿಜ್ಞಾನಿ ಮಾರ್ಕ್ ಅಂಥೊನಿ ಮತ್ತು ಸಂಗಡಿಗರ ಪ್ರಕಾರ ನಮ್ಮ ಕಣ್ಣಿಗೆ ಕಾಣುವ ಜೀವಿಜಗತ್ತಿಗಿಂತಲೂ ದೊಡ್ಡದೊಂದು ಜಗತ್ತು ಈ ಭೂಮಿಯಲ್ಲಿದೆಯಂತೆ. ಅದರಲ್ಲಿರುವ ವೈವಿಧ್ಯ ಹಾಗೂ ಜನಸಂಖ್ಯೆಯನ್ನು ಭೂಮಿಯ ಮೇಲೆ ನಮಗೆ ಕಾಣುವ ಜೀವಿಜಗತ್ತೂ ಸಾಟಿಯಾಗಲಾರದಂತೆ.

ಅಚ್ಚರಿಯಾಯಿತೇ? ಇದು ನೆಲದಡಿಯಲ್ಲಿ ಅಂದರೆ ಮಣ್ಣಿನಲ್ಲಿ ಜೀವಿಸುವ ಜೀವಿಗಳ ಸಂಖ್ಯೆ ನೆಲದ ಮೇಲೆ ನಾವು ಕಾಣುವ ಆನೆ, ಹುಲಿ, ಜಿಂಕೆ, ಮನುಷ್ಯ, ಮಂಗ ಮೊದಲಾದ ಜೀವಿಗಳಿಗಿಂತಲೂ ಹೆಚ್ಚು ಎಂದು ಇವರು ಲೆಕ್ಕ ಹಾಕಿದ್ದಾರೆ. ಇವರ ಲೆಕ್ಕಾಚಾರದ ಪ್ರಕಾರ ಭೂಮಿಯ ಮೇಲಿರುವ ಒಟ್ಟಾರೆ ಜೀವಿಗಳಲ್ಲಿ ಶೇ 59.5ರಷ್ಟು, ಎಂದರೆ ಐದರಲ್ಲಿ ಮೂರು ಪಾಲು ನೆಲದಡಿಯ ಮಣ್ಣಿನಲ್ಲಿಯೇ ನೆಲೆಯಾಗಿವೆ. ಉಳಿದ ಎರಡು ಪಾಲಷ್ಟೆ ನಮಗೆ ಕಾಣುವ ಜಗತ್ತು.

ಕಣ್ಣಿಗೆ ಕಾಣದ ಸತ್ಯವೊಂದಿದೆ. ನೆಲದಡಿಯಲ್ಲಿ ನಮಗೆ ತಿಳಿಯದ ಬೃಹತ್ ಲೋಕವಿದೆ.

ಮಣ್ಣಿನ ಮಹತ್ವದ ಬಗ್ಗೆ ತಿಳಿಸಿಕೊಡಬೇಕಿಲ್ಲ. ಮನುಷ್ಯನ ಇಡೀ ನಾಗರಿಕತೆಗೆ ಅದುವೇ ಆಧಾರ. ಆತನ ಆಹಾರಕ್ಕೆ ಬೇಕಾದ ಗಿಡ, ಮರಗಳು ಬೆಳೆಯಲು ಅದುವೇ ಆಸರೆ. ಕುಡಿಯುವ ನೀರಿನ ಆಕರ. ನಾಗರಿಕತೆ ಹುಟ್ಟು ಹಾಕಿದ ನೂರಾರು ವಸ್ತುಗಳಿಗೆ ಮೂಲ. ಅಷ್ಟೇ ಯಾಕೆ, ಸಾವಿನ ನಂತರವೂ ಈ ಮಣ್ಣೇ ಆತನ ಕೊನೆಯನ್ನು ನಿರ್ಧರಿಸುವ ಸಾಧನ. ಇದು ಕೇವಲ ಮನುಷ್ಯನ ಕಥೆಯಷ್ಟೆ ಅಲ್ಲ. ಭೂಮಿಯ ಮೇಲೆ ಬದುಕುವ ಎಲ್ಲ ಜೀವಿಗಳೂ ಒಂದಲ್ಲ ಒಂದು ಬಗೆಯಲ್ಲಿ ಮಣ್ಣನ್ನೇ ಆಧರಿಸಿವೆ. ಈ ಮಣ್ಣು ಸ್ವತಃ ವಿಶಿಷ್ಟವಾದೊಂದು ಜೀವಿನೆಲೆ ಆಗಿರುವುದರಲ್ಲಿ ಅಚ್ಚರಿ ಏನಿಲ್ಲ.

ಆದರೆ ಅಲ್ಲಿ ಎಷ್ಟು ಜೀವಿಗಳಿವೆ? ಯಾವುವು ಹೆಚ್ಚು? ಈ ಪ್ರಶ್ನೆಗಳಿಗೆ ನಿಖರವಾದ ಉತ್ತರವಿರಲಿಲ್ಲ.

ಮಾರ್ಕ್ ಆಂಥನಿ ಮತ್ತು ಸಂಗಡಿಗರು ಈ ಕಾರ್ಯವನ್ನು ಸಾಧಿಸಿದ್ದಾರೆ. ಇದುವರೆವಿಗೂ ವರದಿಯಾಗಿರುವಂತಹ ವಿವಿಧ ಜೀವಿಗಣನೆಗಳಲ್ಲಿ ವಿವಿಧ ಪ್ರಭೇದಗಳು, ಕುಲಗಳಲ್ಲಿ ಇರುವ ಜೀವಿಗಳನ್ನು ಒಟ್ಟಾರೆ ಒಂದು ವರ್ಗವಾಗಿ ಪರಿಗಣಿಸಿಬಿಡುತ್ತಿದ್ದರು. ಉದಾಹರಣೆಗೆ, ಮನೆ ಇಲಿಯೂ, ನೆಲದಡಿಯಲ್ಲಿ ಬಿಲವನ್ನು ಕೊರೆದು ಜೀವಿಸುವ ಹೆಗ್ಗಣವೂ ಒಂದೇ ಜೀವಕುಟುಂಬಕ್ಕೆ ಸೇರಿಬಿಡುತ್ತಿದ್ದುವು. ಇದು ಮಣ್ಣಿನಲ್ಲಿ ಜೀವಿವೈವಿಧ್ಯ ಎಷ್ಟಿದೆ ಎಂದು ನಿಖರವಾಗಿ ತಿಳಿಯದಂತೆ ಮಾಡಿತ್ತು. ಇದೀಗ ಆಂಥನಿಯ ಲೆಕ್ಕಾಚಾರ ಈ ನೆಲೆಗಳನ್ನು ಪ್ರತ್ಯೇಕಿಸಿ, ಪುನಃ ಲೆಕ್ಕಾಚಾರ ಮಾಡಿದೆ.

ಆ ಪ್ರಕಾರ ನೆಲ, ಜಲ ಹಾಗೂ ಗಾಳಿಯಲ್ಲಿ ಇರುವ ಒಟ್ಟಾರೆ ಎಲ್ಲ ಜೀವಪ್ರಭೇಧಗಳನ್ನು ಕೂಡಿಸಿದರೂ, ನೆಲದ ಅಡಿಯಲ್ಲಿ ಜೀವಿಸುವ ಜೀವಿಗಳನ್ನು ಸರಿಗಟ್ಟುವುದಕ್ಕೆ ಸಾಧ್ಯವಿಲ್ಲವಂತೆ. 'ಓ. ಸೂಕ್ಷ್ಮಜೀವಿಗಳನ್ನು ಸೇರಿಸಿದರೆ, ಇನ್ನೂ ಬೃಹತ್ ಸಂಖ್ಯೆ ದೊರೆಯುತ್ತಿತ್ತು. ಅದಿಲ್ಲದ್ದರಿಂದ ನೆಲದ ಮೇಲಿನ ಜೀವಿಪ್ರಮಾಣ ಕಡಿಮೆ ಆಗಿದೆ' ಎಂದು ನಿಮಗನಿಸಿದ್ದರೆ ಕ್ಷಮಿಸಿ. ಹಾಗಲ್ಲ. ಈ ಲೆಕ್ಕಾಚಾರದಲ್ಲಿ ಬ್ಯಾಕ್ಟೀರಿಯಾ, ಬೂಸುಗಳಂತಹ ಸೂಕ್ಷ್ಮಜೀವಿಗಳೂ ಸೇರಿವೆ. ಹೀಗಾಗಿ ಇವೆರಡನ್ನೂ ಹೋಲಿಸಬಹುದು ಎನ್ನುವುದು ಮಾರ್ಕ್ ಅವರ ತರ್ಕ.

ಈ ಲೆಕ್ಕಾಚಾರಕ್ಕಾಗಿ ಇದಾಗಲೇ ಮಾಡಿರುವ ಜೀವಿಗಳ ಸರ್ವೆಗಳು, ಅಧ್ಯಯನಗಳನ್ನೆಲ್ಲ ಮಾರ್ಕ್ ತಂಡ ಒಟ್ಟು ಮಾಡಿತ್ತು. ತದನಂತರ ಅವುಗಳಲ್ಲಿದ್ದ ವಿವಿಧ ಜೀವಿ ವರ್ಗಗಳನ್ನು ನೆಲ, ಜಲ ಹಾಗೂ ಮಣ್ಣಿನಲ್ಲಿ ವಾಸಿಸುವ ಜೀವಿಗಳನ್ನಾಗಿ ವಿಂಗಡಿಸಿದರು. ನೆಲದ ಮೇಲಿರುವ ಪ್ರಭೇಧಗಳೆಷ್ಟು? ನೆಲದಡಿಯಲ್ಲಿ, ಮಣ್ಣೇ ಮನೆಯಾಗಿರುವ ಪ್ರಭೇಧಗಳೆಷ್ಟು ಎಂದು ಪಟ್ಟಿ ಮಾಡಿದರು. ಒಟ್ಟಾರೆ ಪ್ರಭೇಧಗಳಲ್ಲಿ ಎಷ್ಟು ಅಂಶ ನೆಲದ ಅಡಿಯಲ್ಲಿ, ಎಷ್ಟು ನೆಲದ ಮೇಲೆ ಎಂದು ಗಣಿಸಿದರು. ಇವೆಲ್ಲದರ ಫಲಿತಾಂಶ: ಮಣ್ಣಿನಲ್ಲಿ ವಾಸಿಸುವ ಜೀವಿಗಳ ಪ್ರಭೇಧಗಳು ಒಟ್ಟಾರೆ ಭೂಮಿಯ ಮೇಲಿರುವ ಎಲ್ಲ ಜೀವಿಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು. ಶೇ 59.5ರಷ್ಟು ಎಂದು ಲೆಕ್ಕ ಸಿಕ್ಕಿದೆ.

ಈ ಜೀವಿಗಳಲ್ಲಿ ಬ್ಯಾಕ್ಟೀರಿಯಾಗಳಿಂದ ಹಿಡಿದು ಹೆಗ್ಗಣಗಳಂತಹ ಸ್ತನಿಗಳವರೆಗೂ ಎಲ್ಲ ಪ್ರಭೇಧಗಳೂ ಇವೆ. ಆದರೆ ನೆಲದಡಿಯಲ್ಲಿ ಅತಿ ಹೆಚ್ಚಾಗಿ ಇರುವಂತಹವುಗಳಲ್ಲಿ ಎರೆಹುಳಕ್ಕೆ ಸಂಬಂಧಿಸಿದ ಹುಳುಗಳದ್ದೇ ಪ್ರಧಾನ ಪಾತ್ರ. ಈ ಹುಳುಗಳಲ್ಲಿ ಶೇ 99ರಷ್ಟು ನೆಲದಡಿಯಲ್ಲೇ ವಾಸಿಸುತ್ತವೆ. ಇವಕ್ಕೆ ಹೋಲಿಸಿದರೆ ಮಣ್ಣೇ ನೆಲೆಯಾದ ಬೂಸ್ಟುಜೀವಿಗಳಲ್ಲಿಯೂ ಕೇವಲ 90 ಶತಾಂಶವಷ್ಟೆ. ನಾವು ಕೇವಲ ಮೇಲೆ ಕಾಣುವ ಎತ್ತರದ ಮರಗಳನ್ನಷ್ಟೆ ನೋಡಿ ಖುಷಿ ಪಡುತ್ತೇವಷ್ಟೆ. ಅದಕ್ಕಿಂತಲೂ ಹೆಚ್ಚಿನ ವೈವಿಧ್ಯ ಮಣ್ಣಿನೊಳಗಿದೆ. ಸಸ್ಯವರ್ಗದಲ್ಲಿ ಶೇ 80ರಷ್ಟು ನೆಲದಡಿಯಲ್ಲಿ ಬೆಳೆಯುತ್ತವೆ. ನಂತರದ ಸ್ಥಾನ ಗೆದ್ದಲಿನದ್ದು. ನಾವು ಕಾಣುವ ಗೆದ್ದಲಿಗಿಂತಲೂ ಆರು ಪಟ್ಟು ಹೆಚ್ಚು ಗೆದ್ದಲಿನ ಪ್ರಭೇದಗಳು ನಮ್ಮ ಕಣ್ಣಿಗೆ ಕಾಣದಂತೆ ನೆಲದಡಿಯಲ್ಲಿಯೇ ಜೀವಿಸುತ್ತವೆಯಂತೆ.

ಈಗ ಹೇಳಿ. ನೆಲದ ಮೇಲಿನ ಹುತ್ತಕ್ಕಿಂತಲೂ ನೆಲದಡಿಯದ್ದೇ ದೊಡ್ಡದು ಅಲ್ಲವೇ? ❖



ಬ್ಯಾಲಾಳು

ಚಂದ್ರಯಾನ 3ರ ಸಂಪರ್ಕದ 'ಕಿವಿ ಬಾಯಿ'

ಬಿ. ಆರ್. ಗುರುಪ್ರಸಾದ್

'ಚಂದ್ರಯಾನ 3' ನೌಕೆ ಈ ಜುಲೈ 14ರಂದು ಭೂಮಿಯಿಂದ ಗಗನಕ್ಕೇರಿತಷ್ಟೆ. ಆ ವೇಳೆಯಲ್ಲಿ ಚಂದ್ರಯಾನ 3 ಹಾಗೂ ಅದನ್ನು ಉಡಾಯಿಸಿದ ದೈತ್ಯ ಎಲ್. ವಿ. ಎಂ. ರಾಕೆಟ್ – ಇವುಗಳನ್ನು ಕೇಂದ್ರೀಕೃತವಾಗಿಟ್ಟುಕೊಂಡ ವಿಷಯಗಳು ಪ್ರಮುಖ ಭಾರತೀಯ ಭಾಷೆಗಳಲ್ಲಿ ಹಾಗೂ ವಿದೇಶಿ ಮಾಧ್ಯಮಗಳಲ್ಲಿ ಪುಂಖಾನುಪುಂಖವಾಗಿ ವರದಿಯಾದವು. ನಂತರ ಮಾಧ್ಯಮಗಳ ಗಮನ ಬಹುಮಟ್ಟಿಗೆ ಅಂತರಿಕ್ಷದಲ್ಲಿ ಆ ನೌಕೆಯ ಕುತೂಹಲಕಾರಿಯಾದ ಕಕ್ಷಾ ಯಾನದತ್ತ ಹರಿಯಿತು. ಇಂದು ಆ ನೌಕೆ ಚಂದ್ರನ ಸುತ್ತಲಿನ ಒಂದು ಕೋಳಿಮೊಟ್ಟೆಯಾಕಾರದ ಕಕ್ಷೆಯನ್ನು ಸುರಕ್ಷಿತವಾಗಿ ಸೇರಿ ತನ್ನ ಕಕ್ಷೆಯ ಎತ್ತರವನ್ನು ಕ್ರಮೇಣ ಕಡಿಮೆ ಮಾಡಿಕೊಳ್ಳುತ್ತಾ ಚಂದ್ರನ ಮೇಲೆ ಇಳಿಯಲು ಸಿದ್ಧವಾಗುತ್ತಿದೆ.

ಚಂದ್ರಯಾನ 3ರ ಇತ್ತೀಚಿನವರೆಗಿನ ಯಶಸ್ಸಿನಲ್ಲಿ ಆ ನೌಕೆ ಹಾಗೂ ಅದನ್ನು ಉಡಾಯಿಸಿದ ರಾಕೆಟ್ಟಿನೊಂದಿಗೇ ಮತ್ತೊಂದು ತಾಂತ್ರಿಕ ಅಂಶದ ಪಾತ್ರವೂ ಮಹತ್ತರವಾಗಿದೆ. ಆದರೆ ಅದು ತನ್ನ ಕೊಡುಗೆಗೆ ಅನುಗುಣವಾಗಿ ಪ್ರಚಾರವನ್ನು ಪಡೆಯದೇ ಆ ಕಾರಣದಿಂದಾಗಿ ಬಹುಮಟ್ಟಿಗೆ ಸಾಮಾನ್ಯ ಜನರ ಅರಿವಿಗೆ ಬರದೇ ಇಲ್ಲದಿರುವುದು ದುರದೃಷ್ಟ. ಆ ತಾಂತ್ರಿಕ ಅಂಶವೇ ಚಂದ್ರಯಾನ 3ರ ಭೂ ಸೌಲಭ್ಯಗಳು (ಗ್ರೌಂಡ್ ಫೆಸಿಲಿಟೀಸ್). ಭೂಮಿಯ ಸುತ್ತಲಿನ ಹಾಗೂ ಚಂದ್ರನ ಸುತ್ತಲಿನ ಕಕ್ಷೆಯಿಂದ, ಇಲ್ಲವೇ ಚಂದ್ರನ ಮೇಲ್ಮೈಯಿಂದ ಆ ನೌಕೆ ರೇಡಿಯೋ ತರಂಗಗಳ ರೂಪದಲ್ಲಿ 'ಪಿಸುಗುಟ್ಟುವ' (ವಿಸ್ಪರಿಂಗ್) ಅಮೂಲ್ಯವಾದ ವೈಜ್ಞಾನಿಕ ಮಾಹಿತಿಯನ್ನು ಪಡೆಯುವುದು ಹಾಗೂ ಅಗತ್ಯವಾದ ರೇಡಿಯೋ ಆಜ್ಞೆಗಳನ್ನು ನೌಕೆಗೆ ರವಾನಿಸುವುದು ಈ ಸೌಲಭ್ಯಗಳೇ.

ಇದರೊಂದಿಗೇ ಈ ಭೂ ಸೌಲಭ್ಯಗಳು ಅಂತರಿಕ್ಷದಲ್ಲಿ ಚಂದ್ರಯಾನ 3ರ ಸ್ಥಾನ, ಕಕ್ಷೆ, ಪಥ – ಇವುಗಳನ್ನು ವಿಜ್ಞಾನಿಗಳು ಅತ್ಯಂತ ನಿಖರವಾಗಿ ಲೆಕ್ಕ ಹಾಕುವುದನ್ನು, ಚಂದ್ರಯಾನ 3ರ 'ಆರೋಗ್ಯವನ್ನು ತಪಾಸಣೆ ಮಾಡುವುದನ್ನು' ಸಾಧ್ಯಮಾಡುತ್ತವೆ; ಆ ಮೂಲಕ ಯಾನದ ಮುಂದಿನ ಹಂತವನ್ನು ಎಚ್ಚರಿಕೆಯಿಂದ ಯೋಜಿಸುವುದನ್ನು ಸಾಧ್ಯಮಾಡುತ್ತವೆ; ನೌಕೆಯಿಂದ ಪಡೆದ ವೈಜ್ಞಾನಿಕ ಮಾಹಿತಿಯನ್ನು ಕ್ರಮಬದ್ಧವಾಗಿ ಸಂಗ್ರಹಿಸಿಡುತ್ತವೆ.

ಆ ಸೌಲಭ್ಯಗಳ ಪೈಕಿ ಬೆಂಗಳೂರಿನ ಸಮೀಪದ ಬ್ಯಾಲಾಳುವಿನಲ್ಲಿರುವ 'ಭಾರತೀಯ ಕಡು ಅಂತರಿಕ್ಷ ಜಾಲ' ('ಇಂಡಿಯನ್ ಡೀಪ್ ಸ್ಪೇಸ್ ನೆಟ್ ವರ್ಕ್') ಹಾಗೂ ಚಂದ್ರಯಾನ 3 ಅಭಿಯಾನದ (ಮಿಷನ್) ಕೇಂದ್ರ ನರಮಂಡಲದಂತಿರುವ ಪೀಣ್ಯಾದಲ್ಲಿನ ಅದರ ನಿಯಂತ್ರಣಾ ಕೇಂದ್ರ 'ಮಾಕ್ಸ್' – ಇವುಗಳ ಸಮರ್ಥ ಕಾರ್ಯನಿರ್ವಹಣೆ ಚಂದ್ರಯಾನ 3 ನೌಕೆಯು ತನ್ನನ್ನು ಹಾರಿಬಿಟ್ಟ ಉದ್ದೇಶವನ್ನು ಸುಗಮವಾಗಿ ಸಾಧಿಸುವುದಕ್ಕೆ ಕಾರಣವಾಗುತ್ತದೆ.

ದೊಡ್ಡ ಆಲದ ಮರವಿರುವ ರಾಮೋಹಳ್ಳಿಯಿಂದ ಕೆಲವೇ ಕಿಲೋಮೀಟರ್‌ಗಳ ದೂರದಲ್ಲಿರುವ 'ಭಾರತೀಯ ಕಡು ಅಂತರಿಕ್ಷ ಜಾಲ'ದ ('ಕಡು ಅಂತರಿಕ್ಷ' ಎಂಬುದು ಭೂಮಿಯಿಂದ ಸುಮಾರು ಒಂದು ಲಕ್ಷ ಕಿಲೋಮೀಟರ್‌ಗಳಿಗಿಂತ ದೂರವಿರುವ ಪ್ರದೇಶ) ನೆಲೆಯಲ್ಲಿ 32 ಮೀಟರ್ ಹಾಗೂ 18 ಮೀಟರ್ ಅಗಲವಿರುವ ಎರಡು ಬೃಹತ್ ಬಾಣಲೆಯಾಕಾರದ ಸಂಪರ್ಕ ಆಂಟೆನಾಗಳಿವೆ. ಆ ಪೈಕಿ 32 ಮೀಟರ್ ಆಂಟೆನಾವನ್ನು ಭಾರತೀಯ ಎಂಜಿನಿಯರಿಂಗ್‌ನ ಒಂದು ಅದ್ಭುತ ಎನ್ನಬಹುದು.

350 ಟನ್ ತೂಕದ ಈ ಆಂಟೆನಾವನ್ನು ನಮ್ಮ ದೇಶದಲ್ಲೇ ಅತ್ಯಂತ ನಿಖರವಾಗಿ ನಿರ್ಮಿಸಲಾಗಿದ್ದು ಸೂಕ್ಷ್ಮತೆ ಅದರ ಮುಖ್ಯ ಗುಣವಿಶೇಷವಾಗಿದೆ. ಚಂದ್ರಯಾನ 1, 2 ಮತ್ತು 3 ಹಾಗೂ ಮಂಗಳಯಾನ ನೌಕೆಗಳ ಕಾರ್ಯಕ್ರಮಗಳ ನಡುವೆ ಉತ್ತಮವಾದ ಸೇವೆಯನ್ನು ನೀಡಿರುವ ಹಾಗೂ ನೀಡುತ್ತಿರುವ ಈ ತಾಂತ್ರಿಕ ಸಾಧನದ ನಿರ್ಮಾಣದ ನೇತೃತ್ವವನ್ನು ವಹಿಸಿದ್ದವರು ಕನ್ನಡಿಗರಾದ ದಿವಂಗತ ಎಸ್. ಕೆ. ಶಿವಕುಮಾರ್ ಅವರು.

ಚಂದ್ರಯಾನ3 ನೌಕೆ ಕೆಲವು ಸಮಯದಲ್ಲಿ ಭಾರತವಿರುವ ಭೂಭಾಗಕ್ಕೆ ಗೋಚರಿಸುವುದಿಲ್ಲ.

ಲಕ್ಷಾಂತರ ಇಲ್ಲವೇ ಕೋಟ್ಯಂತರ ಕಿಲೋಮೀಟರ್ ದೂರದಿಂದ ರೋಬಾಟ್ ಅಂತರಿಕ್ಷ ನೌಕೆಗಳು 'ಪಿಸುಗುಟ್ಟುವ' ಮಾಹಿತಿಯನ್ನು ಹೊತ್ತ ರೇಡಿಯೋ ತರಂಗಗಳು ಭೂಮಿಯನ್ನು ತಲುಪುವ ಹೊತ್ತಿಗೆ ಊಹಿಸಲಾಗದಷ್ಟು ಕ್ಷೀಣವಾಗಿರುತ್ತವೆ. ಸುತ್ತಲೂ ಪಸರಿಸಿರುವ ರೇಡಿಯೋ ಗದ್ದಲದಿಂದ ಅವುಗಳನ್ನು 'ಹೆಕ್ಕಿ' ತೆಗೆಯುವುದು ಅತ್ಯಂತ ಪ್ರಯಾಸಕರವಾದ ಕೆಲಸವೇ ಸರಿ. ಅದಕ್ಕಾಗಿ ಆ ಬೃಹತ್ ಆಂಟೆನಾದಲ್ಲಿ 'ಏಳು ಕನ್ನಡಿಗಳನ್ನು ಉಳ್ಳ' ಒಂದು ವಿಶೇಷ ವ್ಯವಸ್ಥೆ ನೌಕೆಯಿಂದ ಬಂದ ಕ್ಷೀಣವಾದ ರೇಡಿಯೋ ತರಂಗಗಳನ್ನು ಪಡೆದು, ಅವುಗಳ ಶಕ್ತಿಯನ್ನು ವೃದ್ಧಿಸುತ್ತದೆ. ನಂತರ ಆ ತರಂಗಗಳ ಮೇಲೆ ಸವಾರಿ ಮಾಡಿಬಂದ ವೈಜ್ಞಾನಿಕ ಮಾಹಿತಿಯನ್ನು ಅದರೊಂದಿಗೇ ಬಂದ ನೌಕೆಯ ಆರೋಗ್ಯವನ್ನು ಕುರಿತ ಮಾಹಿತಿಯಿಂದ ಪ್ರತ್ಯೇಕಿಸಲಾಗುತ್ತದೆ. ಆ ಬಳಿಕ ವೈಜ್ಞಾನಿಕ ಮಾಹಿತಿ ಬ್ಯಾಲಾಳುವಿನಲ್ಲೇ ಇರುವ 'ದತ್ತಾಂಶಗಳ ಕೇಂದ್ರ'ದಲ್ಲಿ ಕ್ರಮಬದ್ಧವಾಗಿ ಸಂಗ್ರಹವಾಗುತ್ತದೆ. ಅದೇ ರೀತಿ ನೌಕೆಯ ಆರೋಗ್ಯವನ್ನು ಹಾಗೂ ಯಾನದ ವಿವರಗಳನ್ನು ಕುರಿತ ಮಾಹಿತಿ ಪೀಣ್ಯಾದಲ್ಲಿರುವ ಚಂದ್ರಯಾನ 3ರ ನಿಯಂತ್ರಣಾ ಕೇಂದ್ರಕ್ಕೆ ('ಮಾಕ್ಸ್') ಕ್ಷಣಾರ್ಧದಲ್ಲಿ ರವಾನೆಯಾಗುತ್ತದೆ. ಅಲ್ಲಿ ದಿನಕ್ಕೆ 24 ಗಂಟೆಗಳ ಕಾಲ ಕಣ್ಣಿಗೆ ಎಣ್ಣೆಹಾಕಿಕೊಂಡು ಚಂದ್ರಯಾನ 3ರ ಆರೋಗ್ಯದೊಂದಿಗೇ ಅದರ ಸ್ಥಾನ, ಕಕ್ಷೆ, ಪಥ, ಮುಂತಾದ ಯಾನದ ವಿವರಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಿರುವ ವಿಜ್ಞಾನಿಗಳು ಚಂದ್ರಯಾನ 3ನ್ನು ದಕ್ಷವಾಗಿ ನಿಯಂತ್ರಿಸಲು ಸಮರ್ಥರಾಗುತ್ತಾರೆ. ಹೀಗಾಗಿ ಚಂದ್ರಯಾನ 3ರ ನಿಯಂತ್ರಣಾ ಕೇಂದ್ರವನ್ನು ಈ ಅಭಿಯಾನದ ಕೇಂದ್ರೀಯ ನರಮಂಡಲ ಎನ್ನಲು ಅಡ್ಡಿಯಿಲ್ಲ. ನೌಕೆಯ ಯಾನದ ನಡುವೆ ಮುಖ್ಯವಾದ ಕಾರ್ಯಗಳು ಜರಗುತ್ತಿರುವಾಗ ಆ ಕೇಂದ್ರದಲ್ಲಿನ ಚಟುವಟಿಕೆ ಜೇಮ್ಸ್ ಬಾಂಡ್ ಚಲನಚಿತ್ರಗಳ ಕೆಲವು ರೋಮಾಂಚಕಾರಿ ಸನ್ನಿವೇಶಗಳನ್ನು ನೆನಪಿಗೆ ತರುತ್ತದೆ.

'ಚಂದ್ರಯಾನ 1' ಚಂದ್ರನ ಮೇಲ್ಮೈಯನ್ನು 2008ರ ನವೆಂಬರ್ 14ರಂದು ಬೇಕಾಗಿಯೇ ಅಪ್ಪಳಿಸಿದ ಹಾಗೂ 2014ರ ಸೆಪ್ಟೆಂಬರ್ 24ರಂದು ಮಂಗಳ ಕಕ್ಷಾ ಅಭಿಯಾನದ 'ಮಂಗಳಯಾನ' ನೌಕೆ ಮಂಗಳಗ್ರಹದ ಕಕ್ಷೆಯನ್ನು ಯಶಸ್ವಿಯಾಗಿ ಸೇರಿದ ಚಾರಿತ್ರಿಕ ವೇಳೆಯಲ್ಲಿ ಆ ನೌಕೆಗಳ ನಿಯಂತ್ರಣ ನಡೆದದ್ದು ಈ ಕೇಂದ್ರದಿಂದಲೇ; ಅಮೆರಿಕ, ರಷ್ಯಾ, ಚೀನಾ, ಯೂರೋಪ್, ಜಪಾನ್, ಇವುಗಳಲ್ಲಿನ ನಿಯಂತ್ರಣಾ ಕೇಂದ್ರಗಳಲ್ಲಿರುವಂತಹ ಕಂಪ್ಯೂಟರ್ ಹಾಗೂ ಸಂಪರ್ಕ ಸಾಧನಗಳನ್ನು ಒಳಗೊಂಡ ಅತ್ಯಾಧುನಿಕ ತಾಂತ್ರಿಕ ವ್ಯವಸ್ಥೆಗಳು ಈ ಕೇಂದ್ರದಲ್ಲೂ ಇವೆ.

ಚಂದ್ರಯಾನ 3 ನೌಕೆ ಕೆಲವು ಸಮಯದಲ್ಲಿ ಭಾರತವಿರುವ ಭೂಭಾಗಕ್ಕೆ ಗೋಚರಿಸುವುದಿಲ್ಲ. ಆಗ ನಾವು 'ನಾಸಾ'ದಂತಹ ಹೊರದೇಶದ ಅಂತರಿಕ್ಷ ಸಂಸ್ಥೆಗಳಿಗೆ ಸೇರಿದ ಭೂಸೌಲಭ್ಯಗಳಿಂದ ಸಹಾಯ ಪಡೆಯಬೇಕಾಗುತ್ತದೆ. ಅವುಗಳ ಜೊತೆ ನಂಬಲರ್ಹವಾದ ಹಾಗೂ ದಕ್ಷವಾದ ಸಂಪರ್ಕ ವ್ಯವಸ್ಥೆಗಳ ಮೂಲಕ ಈ 'ಮಾಕ್ಸ್' ನಿಯಂತ್ರಣಾ ಕೇಂದ್ರ ಜೋಡಿಸಲ್ಪಟ್ಟಿದೆ.

ನೌಕೆಯ ಆರೋಗ್ಯ ಹಾಗೂ ಯಾನದ ಬಗ್ಗೆ ಅರಿತ ನಂತರ ಈ ಕೇಂದ್ರದಲ್ಲಿರುವ 'ಅಭಿಯಾನದ ನಿರ್ದೇಶಕರು' ನೌಕೆ ಮಾಡಬೇಕಾದ ಕೆಲಸದ ಬಗ್ಗೆ ನಿರ್ಧರಿಸಿ ಅಲ್ಲಿಂದ 'ಆಜ್ಞೆ'ಗಳನ್ನು ಬ್ಯಾಲಾಳುವಿನಲ್ಲಿರುವ ಆಂಟೆನಾಗೆ ರವಾನಿಸುತ್ತಾರೆ. ಆ ಆಜ್ಞೆಗಳನ್ನು ಆಂಟೆನಾವು ರೇಡಿಯೋ ತರಂಗಗಳ ಮೇಲೆ ಸವಾರಿಮಾಡುವಂತೆ ಪರಿವರ್ತಿಸಿ ಅದನ್ನು ಚಂದ್ರಯಾನ 3ಕ್ಕೆ 'ಕೂಗಿ ಹೇಳುತ್ತದೆ'. ಅಂದರೆ ಅಪಾರವಾದ ಶಕ್ತಿಯಿಂದ ಆ ತರಂಗಗಳನ್ನು ಪ್ರಸಾರಮಾಡುತ್ತದೆ. ಹೀಗೆ ಭಾರತೀಯ ಕಡು ಅಂತರಿಕ್ಷ ಜಾಲದ 32 ಮೀಟರ್ ಬೃಹತ್ ಆಂಟೆನಾ ಚಂದ್ರಯಾನ 3ರ 'ಪಿಸುಗುಡುವಿಕೆ'ಗೆ ಚುರುಕಾಗಿ ಕಿವಿಕೊಡುವುದಲ್ಲದೇ ಮಾಡಬೇಕಾಗಿರುವ ಕೆಲಸಗಳನ್ನೂ ಅದಕ್ಕೆ 'ದೊಡ್ಡ ದನಿಯಲ್ಲಿ' ಹೇಳುತ್ತದೆ.

ಬ್ಯಾಲಾಳುವಿನ ಸಂಕೀರ್ಣದಲ್ಲಿ ಇರುವ ಮತ್ತೊಂದು ಭೂನೆಲೆಯಾದ 'ಭಾರತೀಯ ಅಂತರಿಕ್ಷ ದತ್ತಾಂಶಗಳ ಕೇಂದ್ರ'ದಲ್ಲಿ (ಇಂಡಿಯನ್ ಸ್ಪೇಸ್ ಸೈನ್ಸ್ ಡೇಟಾ ಸೆಂಟರ್) ನಮ್ಮ ಚಂದ್ರಯಾನ 1, 2 ಮತ್ತು 3, ಮಂಗಳಯಾನ, ಅಸ್ಟ್ರೋಸ್ಯಾಟ್, ಮುಂತಾದ ರೋಬಾಟ್ ಅಂತರಿಕ್ಷ ನೌಕೆಗಳು/ವೈಜ್ಞಾನಿಕ ಉಪಗ್ರಹಗಳು ಚಂದ್ರ, ಮಂಗಳಗ್ರಹ ಹಾಗೂ ಗ್ಯಾಲಕ್ಸಿಗಳಂತಹ ಆಕಾಶಕಾಯಗಳಿಗೆ ಸಂಬಂಧಿಸಿದಂತೆ ಕಳುಹಿಸಿದ ಮಾಹಿತಿಯನ್ನು ಜೋಪಾನವಾಗಿ, ಕ್ರಮಬದ್ಧವಾಗಿ ಜೋಡಿಸಿಡಲಾಗಿದೆ. ಇದರಿಂದಾಗಿ ಅವನ್ನು ಸಂಶೋಧಕರು ಯಾವಾಗ ಬೇಕಾದರೂ ಸುಲಭವಾಗಿ ತೆಗೆದು ವಿಶ್ಲೇಷಿಸಬಹುದು. ನಮ್ಮ ರೋಬಾಟ್ ನೌಕೆಗಳಿಂದ / ವೈಜ್ಞಾನಿಕ ಉಪಗ್ರಹಗಳಿಂದ ಬಂದು ಬ್ಯಾಲಾಳುವಿನ ದತ್ತಾಂಶಗಳ ಕೇಂದ್ರದಲ್ಲಿ ಕುಳಿತ ಅಮೂಲ್ಯವಾದ ವೈಜ್ಞಾನಿಕ ಮಾಹಿತಿಯನ್ನು ಭಾರತ ಹೊರಜಗತ್ತಿನ ಸಂಶೋಧಕರಿಗೂ ತೆರೆದಿಟ್ಟಿದೆ. ಇದು ಭಾರತದ ಸೌಜನ್ಯವಾಗಿರುವುದಲ್ಲದೇ ವಿಜ್ಞಾನದ ಮುನ್ನಡೆಗೆ ಭಾರತದ ಒಂದು ಪ್ರಮುಖ ಕೊಡುಗೆಯಾಗಿದೆ.

ಆಗಸ್ಟ್ 23ರಂದು ಚಂದ್ರನ ಮೇಲೆ, ಚಂದ್ರಯಾನ 3ರ ವಿಕ್ರಂ ಇಳಿಯುವ ಕೋಶ ಹಾಗೂ ಪ್ರಗ್ಯಾನ್ 'ರೋವರ್' ವಾಹನದಿಂದ ಬರುವ ಮಾಹಿತಿಯನ್ನು ಪಡೆಯಲು ಈ ಕೇಂದ್ರವಿಂದು ಸರ್ವವಿಧದಲ್ಲೂ ಸಜ್ಜಾಗಿದೆ. ❖



ಆಗಸದೆಡೆಗೆ ಮುಖ ಮಾಡಿರುವ 32 ಮೀಟರ್ ಅಗಲದ ಸಂಪರ್ಕ ಆಂಟೆನಾದ ಒಂದು ಬದಿಯ ನೋಟ, ಬ್ಯಾಲಾಳುವಿನ ನೆಲೆಯಲ್ಲಿ ಚಿತ್ರಗಳ ಕೃಪೆ: ಇಸ್ರೊ



ಪೀಣ್ಯಾದಲ್ಲಿರುವ 'ಮಾಕ್ಸ್'ನ ಒಂದು ನಿಯಂತ್ರಣಾ ಕೇಂದ್ರ



ಪೀಣ್ಯಾದ 'ಮಾಕ್ಸ್'ನಲ್ಲಿ ಅಂತರಿಕ್ಷನೌಕೆಯೊಂದರ ನಿಯಂತ್ರಣದಲ್ಲಿ ನಿರತರಾದ ಇಸ್ರೊ ವಿಜ್ಞಾನಿಗಳು

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ 226ನೇ ಜಯಂತಿಯಲ್ಲಿ ಸಿ.ಎಂ. ಸಿದ್ದರಾಮಯ್ಯ

ಬ್ರಿಟಿಷ್ ಏಜೆಂಟ್‌ರಿಂದ ಎಚ್ಚರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಗಲೂ ಬ್ರಿಟಿಷರ ಏಜೆಂಟರ್‌ಗಳಿದ್ದು, ಅವರು ನಿಜವಾದ ಸ್ವಾತಂತ್ರ್ಯ ಹೋರಾಟಗಾರರನ್ನು ಅವಮಾನಿಸುತ್ತಿದ್ದಾರೆ. ಅವರ ಬಗ್ಗೆ ಸದಾ ಎಚ್ಚರಿಕೆಯಿಂದ ಇರಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ನಗರದಲ್ಲಿ ಮಂಗಳವಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ ಮತ್ತು ಬಿಬಿಎಂಪಿ ಆಶ್ರಯದಲ್ಲಿ ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ 226ನೇ ಜಯಂತಿಯಲ್ಲಿ ರಾಯಣ್ಣನ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

'ರಾಯಣ್ಣ ಅವರ ಹೆಸರಿನಲ್ಲಿ ಸೈನಿಕ ಶಾಲೆ, ರಾಯಣ್ಣರನ್ನು ಗಲ್ಲಿಗೇರಿಸಿದ ಸ್ಥಳಗಳ ಅಭಿವೃದ್ಧಿಗೆ ₹ 280 ಕೋಟಿ ಅನುದಾನ ನೀಡಿದ್ದೆ. ಸದ್ಯದಲ್ಲೇ ನಾನೇ ಸೈನಿಕ ಶಾಲೆ ಉದ್ಘಾಟಿಸುತ್ತೇನೆ' ಎಂದು ಹೇಳಿದರು.



ನಗರದಲ್ಲಿ ಮಂಗಳವಾರ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ' ಆಯೋಜಿಸಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ ಕಾರ್ಯಕ್ರಮದಲ್ಲಿ ಸೇರಿದ್ದ ಸಂಗೊಳ್ಳಿ ರಾಯಣ್ಣ ಅಭಿಮಾನಿಗಳು —ಪ್ರಜಾವಾಣಿ ಚಿತ್ರ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ನಮ್ಮ ಹೋರಾಟಕ್ಕೆ ರಾಯಣ್ಣನೇ ಸ್ಫೂರ್ತಿ. ದೇಶದಲ್ಲಿ ಪ್ರಜಾಪ್ರಭುತ್ವ ಸುಮ್ಮನೆ ಬಂದಿಲ್ಲ. ರಾಯಣ್ಣ ಅವರಂತಹ ತ್ಯಾಗ– ಬಲಿದಾನದಿಂದ ದೊರಕಿದೆ. ಇದನ್ನು ಕಾಪಾಡಬೇಕಿದೆ' ಎಂದು ಕರೆ ನೀಡಿದರು.

ದೇಶದ ಸಂವಿಧಾನ ಬದಲಾಯಿಸುತ್ತೇವೆ ಎನ್ನುವ ದುಷ್ಟಶಕ್ತಿಗಳನ್ನು ಬೆಳೆಯಲು ಬಿಡಬಾರದು

ಸಿದ್ದರಾಮಯ್ಯ, ಮುಖ್ಯಮಂತ್ರಿ

ಕೋಮುವಾದಿ ಶಕ್ತಿಗಳನ್ನು ಹೊಡೆದೊಡಿಸುವ ಕಾಲ ಹತ್ತಿರ ಬಂದಿದೆ. ಈ ಬದಲಾವಣೆ ರಾಜ್ಯದಿಂದಲೇ ಆರಂಭವಾಗಿದೆ

ಡಿ.ಕೆ.ಶಿವಕುಮಾರ್
ಉಪ ಮುಖ್ಯಮಂತ್ರಿ

'ಕಳೆದ ವರ್ಷ ಇದೇ ರೈಲು ನಿಲ್ದಾಣದ ಬಳಿಯ ರಾಯಣ್ಣ ಅವರ ಪ್ರತಿಮೆಯ ಬಳಿಯಿಂದಲೇ ಸುಮಾರು 3 ಲಕ್ಷ ಜನರು ಸ್ವಾತಂತ್ರ್ಯ ನಡಿಗೆ ಕಾರ್ಯಕ್ರಮ ಮಾಡಿದ್ದೆವು. ರಾಜ್ಯದಲ್ಲಿ ಹೊಸ ರಾಜಕೀಯ ಬದಲಾವಣೆಗೆ ಮುನ್ನುಡಿ ಬರೆಯಿತು' ಎಂದರು.

ದತ್ತಾತ್ರಿಗೆ ಬುಕ್ ಬ್ರಹ್ಮ ಕಾದಂಬರಿ ಪುರಸ್ಕಾರ

ಕಥಾ ಸ್ಪರ್ಧೆಯಲ್ಲಿ ಇಂದ್ರಕುಮಾರ್‌ರ 'ಇರದ ಇರುವಿನ ತಾವು' ಕಥೆ ಪ್ರಥಮ

ಪ್ರಜಾವಾಣಿ ವಾರ್ತೆ



ಎಂ.ಆರ್.ದತ್ತಾತ್ರಿ



ಇಂದ್ರಕುಮಾರ್ ಎಚ್.ಬಿ.

ಬೆಂಗಳೂರು: ಬುಕ್ ಬ್ರಹ್ಮ ಸಂಸ್ಥೆಯು ಸ್ವಾತಂತ್ರ್ಯೋತ್ಸವ ಪ್ರಯುಕ್ತ ಹಮ್ಮಿಕೊಂಡಿದ್ದ ಕಾದಂಬರಿ ಪುರಸ್ಕಾರದಲ್ಲಿ ಎಂ.ಆರ್. ದತ್ತಾತ್ರಿ ಅವರ 'ಒಂದೊಂದು ತಲೆಗೂ ಒಂದೊಂದು ಬೆಲೆ' ಹಾಗೂ ಕಥಾ ಸ್ಪರ್ಧೆಯಲ್ಲಿ ಇಂದ್ರಕುಮಾರ್ ಎಚ್.ಬಿ. ಅವರ 'ಇರದ ಇರುವಿನ ತಾವು' ಕಥೆ ಪ್ರಥಮ ಸ್ಥಾನ ಪಡೆದವು.

ಕಾದಂಬರಿ ಪುರಸ್ಕಾರವು ₹ 1 ಲಕ್ಷ ನಗದು ಒಳಗೊಂಡಿದೆ. 'ಒಂದೊಂದು ತಲೆಗೂ ಒಂದೊಂದು ಬೆಲೆ' ಕೃತಿಯನ್ನು ಅಂಕಿತ ಪುಸ್ತಕ ಪ್ರಕಟಿಸಿದೆ. ಆಯ್ಕೆಯಾದ ಕೃತಿಯ ಲೇಖಕರಿಗೆ ₹ 75 ಸಾವಿರ ಹಾಗೂ ಪ್ರಕಾಶಕರಿಗೆ ₹ 25 ಸಾವಿರ ನಗದು ನೀಡಲಾಯಿತು. ಕಥಾ ಸ್ಪರ್ಧೆಯ ಪ್ರಥಮ ಬಹುಮಾನವು ₹ 50 ಸಾವಿರ ನಗದು ಒಳಗೊಂಡಿದೆ.

ಕಥಾ ಸ್ಪರ್ಧೆಯ ಅಂತಿಮ ಸುತ್ತಿಗೆ 25 ಕಥೆಗಳು ಆಯ್ಕೆಯಾಗಿದ್ದವು. ಅಕ್ಷಯ ಪಂಡಿತ್ ಅವರ 'ಖಾಲಿ ಕ್ಯಾನ್ವಸ್' ಕಥೆ ದ್ವಿತೀಯ (₹ 25 ಸಾವಿರ ನಗದು) ಹಾಗೂ ವಿಕಾಸ್ ನೇಗಿಲೋಣಿ ಅವರ 'ರುಕುಮಣಿ ರುಕುಮಣಿ ಶಾದಿ ಕೆ ಬಾದ್ ಕ್ಯಾ ಕ್ಯಾ ಹುವಾ' ಕಥೆ ತೃತೀಯ ಸ್ಥಾನ (₹ 15 ಸಾವಿರ ನಗದು) ಪಡೆಯಿತು. ಶರತ್ ಭಟ್ ಸೇರಾಜೆ ಅವರ '3 > 2 > 1', ಪೂರ್ಣಿಮಾ ಭಟ್ಟ ಅವರ 'ಹಾಪ್ ಸರ್ಕಲ್ + ಹಾಪ್ ಸರ್ಕಲ್', ಜಯರಾಮಚಾರಿ ಅವರ 'ಯುಗಾದಿ ವಿಶೇಷಾಂಕ', ದೀಪ್ತಿ ಭದ್ರಾವತಿ ಅವರ 'ಸತ್ಯವೇಲು ಮತ್ತವನ ಸೊಳ್ಳೆ ಪುರಾಣ' ಹಾಗೂ ವಿಜಯಶ್ರೀ ಎಂ. ಹಾಲಾಡಿ ಅವರ 'ಉಮ್ಮಲ್ತಿ ಗುಡಿಯ ಸಾಕ್ಷಿಯಲ್ಲಿ' ಕಥೆಗಳು ಸಮಾಧಾನಕರ ಬಹುಮಾನ (ತಲಾ ₹ 5 ಸಾವಿರ ನಗದು) ಪಡೆದವು.

ಕಾದಂಬರಿ ಪುರಸ್ಕಾರದ ಅಂತಿಮ ಸುತ್ತಿನಲ್ಲಿ ಐದು ಕಾದಂಬರಿಗಳಿದ್ದವು. ಪೂರ್ಣಿಮಾ ಮಾಳಗಿಮನಿ ಅವರ 'ಅಗಮ್ಯ', ಎಚ್.ಎಸ್. ಅನುಪಮಾ ಅವರ 'ಬೆಳಗಿನೊಳಗು ಮಹಾದೇವಿಯಕ್ಕ', ಕಾ.ತ. ಚಿಕ್ಕಣ್ಣ ಅವರ 'ಪುರಾಣ ಕನ್ಯೆ' ಹಾಗೂ ಉಷಾ ನರಸಿಂಹನ್ ಅವರ 'ಕೆಂಡದ ರೊಟ್ಟಿ' ಕಾದಂಬರಿ ಮೆಚ್ಚುಗೆ ಬಹುಮಾನ (ತಲಾ ₹ 5 ಸಾವಿರ ನಗದು) ಪಡೆದವು.

'ಬರವಣಿಗೆ ಪ್ರಶಸ್ತಿಗೆ ಮೀಸಲಾಗಿರಬಾರದು'

ಬೆಂಗಳೂರು: 'ಬರವಣಿಗೆ ಪ್ರಶಸ್ತಿಗಳಿಗೆ ಮಾತ್ರ ಮೀಸಲಾಗಿರಬಾರದು. ಅದು ನಮ್ಮ ಅನಿಸಿಕೆಗಳನ್ನು ಅಭಿವ್ಯಕ್ತಪಡಿಸುವ ಒಂದು ಮಾಧ್ಯಮವಾಗಿ ಹೊರಹೊಮ್ಮಬೇಕು' ಎಂದು ಒಡಿಯಾ ಕಥೆಗಾರ್ತಿ ಹಾಗೂ ಆದಾಯ ತೆರಿಗೆ ಆಯುಕ್ತೆ ಪರಮಿತ ಸತ್ಪತಿ ತ್ರಿಪಾಠಿ ತಿಳಿಸಿದರು.

ಬುಕ್ ಬ್ರಹ್ಮ ಸ್ವಾತಂತ್ರ್ಯೋತ್ಸವ ಕಥಾಸ್ಪರ್ಧೆ ಮತ್ತು ಕಾದಂಬರಿ ಪುರಸ್ಕಾರ ಸಮಾರಂಭದ ಭಾಗವಾಗಿ ನಗರದಲ್ಲಿ ಮಂಗಳವಾರ ನಡೆದ ಸಂವಾದದಲ್ಲಿ ಭಾಗವಹಿಸಿ, ಮಾತನಾಡಿದರು.

'ಇತ್ತೀಚೆಗೆ ಸಾಹಿತ್ಯ ಕೃತಿಗಳ ಅನುವಾದ ಹೆಚ್ಚುತ್ತಿದೆ. ಆದರೆ, ಹೆಚ್ಚಿನ ಅನುವಾದಗಳು ಇಂಗ್ಲಿಷ್‌ನಿಂದ ಬೇರೆ ಭಾಷೆಗಳಿಗೆ ಆಗುತ್ತಿವೆ. ಒಡಿಯಾ ಅಥವಾ ಇತರೆ ಭಾರತೀಯ ಭಾಷೆಗಳಿಂದ ಕೃತಿಗಳ ಅನುವಾದಗಳು ಅಷ್ಟಾಗಿ ನಡೆಯುತ್ತಿಲ್ಲ. ಅನುವಾದ ಕ್ಷೇತ್ರವು ಬೇರೆ ಭಾಷೆಗಳ ಸಾಹಿತ್ಯಕ್ಕೂ ಪ್ರಾಮುಖ್ಯ ನೀಡಬೇಕು' ಎಂದು ಹೇಳಿದರು.

ತಮಿಳು ಕಾದಂಬರಿಕಾರ ಚಾರು ನಿವೇದಿತಾ, '25 ವರ್ಷಗಳ ಹಿಂದೆ ಪುಸ್ತಕ ಹೊರತರಲು ಮುಂದಾದಾಗ ನನ್ನ ಸಹಾಯಕ್ಕೆ ಯಾರೂ ಬರಲಿಲ್ಲ. ಹೀಗಾಗಿ, ಸ್ವಂತ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಬೇಕಾಯಿತು. ಆ ಸಮಯದಲ್ಲಿ ₹ 600 ನನ್ನ ಸಂಬಳವಾಗಿತ್ತು. ಹೆಂಡತಿಯು ತಾಳಿಯನ್ನು ಅಡವಿಟ್ಟು, ನನಗೆ ಸಹಾಯ ಮಾಡಿದ್ದಳು. ಆಗಿನ ಕಾಲದಲ್ಲಿ ಸಾಹಿತ್ಯದ ಸ್ಥಿತಿ ಗತಿ ಹೇಗಿತ್ತು ಅನುವುದಕ್ಕೆ ಇದೊಂದು ಉದಾಹರಣೆ' ಎಂದರು.

'ನಾನು ನೇರವಾಗಿ ಪುಸ್ತಕವನ್ನು ಬರೆಯುವುದಿಲ್ಲ. ಡೈರಿಯಲ್ಲಿ ಏನು ಬರೆಯುತ್ತೇನೆಯೋ ಅದೇ ಪುಸ್ತಕವಾಗಿರುತ್ತದೆ. ಜೀವನದಲ್ಲಿ ನಡೆಯುವ ಆಗು ಹೋಗುಗಳೇ ನನ್ನ ಬರಹಗಳು' ಎಂದು ಅವರು ಹೇಳಿದರು.

ನಾಟಕಕಾರ ಡಿ.ಎಸ್. ಚೌಗಲೆ, 'ನಗರ ಕೇಂದ್ರಿತ ಗ್ರಂಥಾಲಯಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಯುವ ಜನರು ಭೇಟಿ ನೀಡುತ್ತಿದ್ದಾರೆ. ಹೀಗಾಗಿ, ಪ್ರಸ್ತುತ ಓದುಗರು ಇಲ್ಲ ಎನ್ನುವುದು ಸುಳ್ಳು' ಎಂದು ಅವರು ತಿಳಿಸಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಬಣ್ಣನೆ

'ವಿಶ್ವಕ್ಕೆ ಬೆಳಕು ನೀಡಲು ದೇಶ ಸ್ವತಂತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಡೀ ವಿಶ್ವಕ್ಕೆ ಬೆಳಕು ನೀಡುವುದಕ್ಕಾಗಿಯೇ ಭಾರತ ಸ್ವತಂತ್ರವಾಗಿದೆ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ತಿಳಿಸಿದರು.

ಸಮರ್ಥ ಭಾರತ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಧ್ವಜಾರೋಹಣ ನೆರವೇರಿಸಿ, ಮಾತನಾಡಿದರು. 'ಜಗತ್ತಿಗೆ ಈಗ ಭಾರತದ ಅವಶ್ಯವಿದೆ. ಅದಕ್ಕಾಗಿ ನಾವು ತಯಾರಾಗಬೇಕು. ಈ ವೇಳೆ ಧ್ವಜದ ಸ್ವರೂಪದ ಬಗ್ಗೆ ಯೋಚನೆ ಮಾಡಿ, ನಿರಂತರ ಕ್ರಿಯಾಶೀಲರಾಗಿರಬೇಕು. ತ್ಯಾಗವನ್ನು ಮಾಡುವುದು ಸ್ವಾರ್ಥಕ್ಕಾಗಿ ಅಲ್ಲ ಎನ್ನುವುದನ್ನು ಧ್ವಜದಲ್ಲಿನ ಕೇಸರಿ ಬಣ್ಣ ಸಾರುತ್ತದೆ. ಮನದ ವಿಕಾರವನ್ನು ನಿರ್ಮೂಲನೆಗೊಳಿಸಲು ಬಿಳಿಯ ಬಣ್ಣವಿದೆ. ಹಸಿರು ಬಣ್ಣ ನಮ್ಮ ಸಮೃದ್ಧಿಯನ್ನು ಸೂಚಿಸುತ್ತದೆ. ಇದನ್ನು ಅರಿತು ನಡೆಯಬೇಕು. ನಾವು ಸಬಲರಾಗದಿದ್ದರೆ, ನಮ್ಮನ್ನು ಒಡೆಯುವ ಶಕ್ತಿಗಳು ಬಲಶಾಲಿಯಾಗುತ್ತವೆ' ಎಂದು ಹೇಳಿದರು.



ಸಮರ್ಥ ಭಾರತ ಆಯೋಜಿಸಿದ್ದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಮೋಹನ್ ಭಾಗವತ್ ಅವರು ಭಾರತಾಂಬೆಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಆರ್‌ಎಸ್‌ಎಸ್ ಸಹ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಇದ್ದಾರೆ —ಪ್ರಜಾವಾಣಿ ಚಿತ್ರ

'ನಮ್ಮ ಅಸ್ಮಿತೆಯ ಆಧಾರದಲ್ಲಿ ದೇಶವನ್ನು ಕಟ್ಟಬೇಕು. ನಮಗೆ ಸ್ವಾಧೀನತೆ ಸಿಕ್ಕಿದೆ. ಆದರೆ, ಸ್ವಾತಂತ್ರ್ಯ ಸಿಕ್ಕಿಲ್ಲ. ಜ್ಞಾನ, ಕರ್ಮದ ಆಧಾರದಲ್ಲಿ ಕೆಲಸ ಮಾಡಿದರೆ ಸ್ವಾತಂತ್ರ್ಯ ಸಿಗುತ್ತದೆ. ನಮ್ಮ ಜಲ, ಅರಣ್ಯ, ಜಾನುವಾರುಗಳನ್ನು ಸುಖಿಯಾಗಿಡಬೇಕು. ಈ ಎಲ್ಲಾ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡಬೇಕು' ಎಂದು ತಿಳಿಸಿದರು.

'ನಮ್ಮ ಪೂರ್ವಜರ ಹಲವು ವರ್ಷಗಳ ತ್ಯಾಗ ಬಲಿದಾನದಿಂದ ಸ್ವಾತಂತ್ರ್ಯ ಸಿಕ್ಕಿದೆ. ಸ್ವಾತಂತ್ರ್ಯ ಎನ್ನುವುದು ನಿರಂತರ ಪ್ರಕ್ರಿಯೆ. ಇಡೀ ಜಗತ್ತಿಗೆ ಉಪಕಾರ ಮಾಡುವ ದೇಶ ನಮ್ಮದಾಗಿ, ವಿಶ್ವಕ್ಕೆ ಗುರುವಾಗಬೇಕು. ಆದ್ದರಿಂದ ರಾಷ್ಟ್ರಧ್ವಜದ ಆಶಯಕ್ಕೆ ಅನುಗುಣವಾಗಿ ನಾವು ನಡೆದುಕೊಳ್ಳಬೇಕು' ಎಂದು ಹೇಳಿದರು.

ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಸಂದಣಿ

ಫಲಪುಷ್ಪ ಪ್ರದರ್ಶನ: ಕಿಕ್ಕಿರಿದ ಜನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಿರುವ 'ವಿಧಾನ ಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ ಅವರ ವಿಷಯಾಧಾರಿತ ಫಲಪುಷ್ಪ ಪ್ರದರ್ಶನ' ವೀಕ್ಷಿಸಲು ಅಂತಿಮ ದಿನ ಜನಸಾಗರವೇ ಹರಿದುಬಂದಿತ್ತು.

ಸ್ವಾತಂತ್ರ್ಯೋತ್ಸವದ ಅಂಗವಾಗಿ ಶಾಲಾ–ಕಾಲೇಜು, ಕಚೇರಿಗಳಿಗೆ ರಜೆ ಇದ್ದಿದ್ದರಿಂದ ಮಂಗಳವಾರ ಬೆಳಿಗ್ಗೆಯಿಂದಲೇ ಸಾರ್ವಜನಿಕರು ತಂಡೋಪತಂಡವಾಗಿ ಲಾಲ್‌ಬಾಗ್‌ನತ್ತ ಬರುತ್ತಿದ್ದರು. ಸಂಜೆ ವೇಳೆ ಎತ್ತ ನೋಡಿದರೂ ಜನಜಾತ್ರೆ. ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಸಂದಣಿ ಹೆಚ್ಚಿತ್ತು.

ಉದ್ಯಾನದಲ್ಲಿ ಎಲ್ಲಿ ನೋಡಿದರು ತ್ರಿವರ್ಣ ಧ್ವಜಗಳೇ ಕಾಣುತ್ತಿದ್ದವು. ವಿದ್ಯಾರ್ಥಿಗಳು, ಯುವಕರು 'ಭಾರತ್ ಮಾತಾ ಕೀ ಜೈ, ವಂದೇ ಮಾತರಂ, ಮೇರಾ ಭಾರತ್ ಮಹಾನ್ ಹೈ' ಎಂಬ ಜಯಘೋಷ ಕೂಗುತ್ತಿದ್ದರು.

ಲಾಲ್‌ಬಾಗ್ ಮುಖ್ಯ ಗೇಟಿನ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದರೂ, ಬೀದಿ ವ್ಯಾಪಾರಿಗಳ ಹಾವಳಿಯಿಂದಾಗಿ ಸಂಚಾರ ದಟ್ಟಣೆ ಉಂಟಾಗಿತ್ತು.

ಲಾಲ್‌ಬಾಗ್ ಮೆಟ್ರೊ ನಿಲ್ದಾಣದಲ್ಲಿ ಟಿಕೆಟ್ ಖರೀದಿಗೆ ಪ್ರಯಾಣಿಕರು ಹರಸಾಹಸ ಪಡುತ್ತಿದ್ದರು. ಬಿಎಂಟಿಸಿ ಬಸ್‌ಗಳೆಲ್ಲ ತುಂಬಿತುಳಕುತ್ತಿದ್ದವು. ಶಾಂತಿನಗರ ಬಸ್ ನಿಲ್ದಾಣದಿಂದ ಲಾಲ್‌ಬಾಗ್‌ನ ಗೇಟಿನವರೆಗೆ, ಉದ್ಯಾನದ ವೆಸ್ಟ್‌ಗೇಟ್‌ನ ಪಾದಚಾರಿ ಮಾರ್ಗಗಳೆಲ್ಲಿ ಕಿರು ಮಾರುಕಟ್ಟೆಗಳು ಸೃಷ್ಟಿಯಾಗಿದ್ದವು.

ಲಾಲ್‌ಬಾಗ್‌ನ ನಾಲ್ಕು ಗೇಟ್‌ಗಳಲ್ಲಿ ಜನಸಂದಣಿ ಹೆಚ್ಚಿದ್ದ ಕಾರಣ ಟಿಕೆಟ್ ನೀಡಲು ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಹರಸಾಹಸ ಪಡುತ್ತಿದ್ದರು.

ಗಾಜಿನ ಮನೆಯಲ್ಲಿ ಪುಷ್ಪಗಳಲ್ಲಿ ಅರಳಿದ ವಿಧಾನಸೌಧ ನೋಡಲು ಬಂದಿದ್ದ ಜನ ಸರತಿ ಸಾಲಿನಲ್ಲಿ ನಿಂತಿದ್ದರು. ಪೊಲೀಸರು ಮತ್ತು ತೋಟಗಾರಿಕೆ ಇಲಾಖೆ ಸಿಬ್ಬಂದಿ ಕಿಕ್ಕಿರಿದು ಸೇರಿದ್ದ ಜನರನ್ನು ನಿಯಂತ್ರಿಸಲು ಹರಸಾಹಸಪಟ್ಟರು.



ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಅಂತಿಮ ದಿನವಾದ ಮಂಗಳವಾರ ಬಂದಿದ್ದ ಜನಸ್ತೋಮ —ಪ್ರಜಾವಾಣಿ ಚಿತ್ರ/ ರಂಜು ಪಿ

ಮಂಗಳವಾರ ಸಸ್ಯಕಾಶಿಗೆ ಭೇಟಿ	
ವಯಸ್ಕರು	1,98,000
ಮಕ್ಕಳು	19,250
ಶಾಲಾ ಮಕ್ಕಳು	28,500
ಒಟ್ಟು	2,45,750
ಸಂಗ್ರಹವಾದ ಹಣ	₹81.5 ಲಕ್ಷ
ಆಗಸ್ಟ್ 5-15ರವರೆಗೆ ಒಟ್ಟು ಭೇಟಿ	
ವಯಸ್ಕರು	5,82,807
ಮಕ್ಕಳು	68,745
ಶಾಲಾ ಮಕ್ಕಳು	1,75,000
ಒಟ್ಟು	8,26,552
ಒಟ್ಟು ಸಂಗ್ರಹವಾದ ಪ್ರವೇಶ ಶುಲ್ಕ	₹3.67 ಕೋಟಿ

ಒಟ್ಟು ಸಂಗ್ರಹ	
ಪ್ರವೇಶ ಶುಲ್ಕ	₹3,67,94,000
ಮಳಿಗೆ ಬಾಡಿಗೆ	₹2,74,5000
ಪ್ರದರ್ಶಕರಿಂದ ಸಂಗ್ರಹವಾದ ಶುಲ್ಕ	₹2,91,800
ಸಂಗ್ರಹವಾದ ಒಟ್ಟು ಮೊತ್ತ	₹3,98,30,800

ಸಲುಗೆ ಬೆಳೆಸಿ ವಿಡಿಯೊ ಮಾಡಿದ ಮಹಿಳೆ • ₹82 ಲಕ್ಷ ಕಿತ್ತಿದ್ದವರ ಬಂಧನ

ಸರ್ಕಾರಿ ನೌಕರ ಹನಿಟ್ರ್ಯಾಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರೊಬ್ಬರನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ₹ 82 ಲಕ್ಷ ಸುಲಿಗೆ ಮಾಡಿದ್ದ ಆರೋಪದಡಿ ಇಬ್ಬರು ಮಹಿಳೆಯರು ಸೇರಿ ಮೂವರನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೊಡಗು ಜಿಲ್ಲೆಯ ಅಣ್ಣಮ್ಮ, ಲೋಕೇಶ್ ಹಾಗೂ ಸ್ನೇಹಾ ಬಂಧಿತರು. ಮೂವರು ವ್ಯವಸ್ಥಿತ ಸಂಚು ರೂಪಿಸಿ ಸರ್ಕಾರಿ ನೌಕರರೊಬ್ಬರನ್ನು ಸುಲಿಗೆ ಮಾಡಿದ್ದರು. ನೌಕರ ನೀಡಿದ್ದ ದೂರು ಆಧರಿಸಿ ಮೂವರನ್ನೂ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಆರೋಪಿಗಳು, ಬೊಮ್ಮನಹಳ್ಳಿ ಬಳಿಯ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಸರ್ಕಾರಿ ನೌಕರ ಮಾತ್ರವಲ್ಲದೇ ಹಲವರನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ಹಣ ಸುಲಿಗೆ ಮಾಡಿರುವ ಮಾಹಿತಿ ಇದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮಗುವಿಗೆ ಹುಷಾರಿಲ್ಲವೆಂದು ಪರಿಚಯ: 'ಸರ್ಕಾರಿ ನೌಕರ ಎಂಬುದನ್ನು ತಿಳಿದುಕೊಂಡಿದ್ದ ಆರೋಪಿ ಅಣ್ಣಮ್ಮ, ದೂರುದಾರರನ್ನು ಪರಿಚಯ ಮಾಡಿಕೊಂಡಿದ್ದರು. 'ನನ್ನ ಮಗುವಿಗೆ ಹುಷಾರಿಲ್ಲ. ಹಣದ ಸಹಾಯ ಮಾಡಿ' ಎಂದು ಕೇಳಿದ್ದರು. ಅದನ್ನು ನಂಬಿದ್ದ ದೂರುದಾರ, ಆರಂಭದಲ್ಲಿ ₹ 5,000 ಸಹಾಯ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಹಾಯದ ನೆಪದಲ್ಲಿ ನೌಕರನ ಜೊತೆ ಹೆಚ್ಚು ಮಾತನಾಡಲಾರಂಭಿಸಿದ್ದ ಅಣ್ಣಮ್ಮ, ಸಲುಗೆ ಬೆಳೆಸಿದ್ದರು. ಲೈಂಗಿಕವಾಗಿ ಮಾತನಾಡಿ ಪ್ರಚೋದಿಸಲಾರಂಭಿಸಿದ್ದರು. ಆರೋಪಿಗಳ ಸಂಚು ಅರಿಯದ ಸರ್ಕಾರಿ ನೌಕರ ಸಹ ಸಲುಗೆಯಿಂದ ಮಾತನಾಡಲಾರಂಭಿಸಿದ್ದರು' ಎಂದು ತಿಳಿಸಿದರು.

ವಿಡಿಯೊ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್: 'ಸರ್ಕಾರಿ ನೌಕರ ಹಾಗೂ ಆರೋಪಿ ಅಣ್ಣಮ್ಮ, ಹಲವು ಬಾರಿ ಭೇಟಿಯಾಗಿ ಖಾಸಗಿ ಕ್ಷಣಗಳನ್ನು ಕಳೆದಿದ್ದರು. ವಸತಿಗೃಹವೊಂದರಲ್ಲಿ ಉಳಿದುಕೊಂಡಿದ್ದ ಸಂದರ್ಭದಲ್ಲಿ ದೂರುದಾರರ ವಿಡಿಯೊವನ್ನು ಆರೋಪಿ ಮಹಿಳೆ ಚಿತ್ರೀಕರಿಸಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.


'ದೂರುದಾರರಿಗೆ ವಿಡಿಯೊ ಕಳುಹಿಸಿದ್ದ ಆರೋಪಿಗಳು, 'ನಾವು ಕೇಳಿದಷ್ಟು ಹಣ ನೀಡಬೇಕು. ಕೊಡದೇ ಹೋದರೆ, ವಿಡಿಯೊವನ್ನು ನಿಮ್ಮ ಸಂಬಂಧಿಕರಿಗೆ ಕಳುಹಿಸುತ್ತೇವೆ' ಎಂದು ಬೆದರಿಕೆಯೊಡ್ಡಿದ್ದರು. ಮರ್ಯಾದೆಗೆ ಅಂಜಿದ್ದ ಸರ್ಕಾರಿ ನೌಕರ, ಹಂತ ಹಂತವಾಗಿ ಆರೋಪಿಗಳಿಗೆ ₹ 82 ಲಕ್ಷ ನೀಡಿದ್ದರು' ಎಂದು ಗೊತ್ತಾಗಿದೆ.

'ಇತ್ತೀಚೆಗೆ ಪುನಃ ದೂರುದಾರರಿಗೆ ಕರೆ ಮಾಡಿದ್ದ ಆರೋಪಿಗಳು, ₹ 42 ಲಕ್ಷ ನೀಡುವಂತೆ ಬೇಡಿಕೆ ಇರಿಸಿದ್ದರು. ಇದರಿಂದ ಬೇಸತ್ತ ಸಂತ್ರಸ್ತ, ಠಾಣೆಗೆ ಬಂದು ದೂರು ನೀಡಿದ್ದರು' ಎಂದು ತಿಳಿಸಿದರು.

'ಪ್ರಕರಣ ದಾಖಲಾಗುತ್ತಿದ್ದಂತೆ ಅಣ್ಣಮ್ಮ ಅವರನ್ನು ಬಂಧಿಸಲಾಯಿತು. ನಂತರ, ಸ್ನೇಹಾ ಹಾಗೂ ಅವರ ಪತಿ ಲೋಕೇಶ್‌ನನ್ನೂ ಸೆರೆ ಹಿಡಿಯಲಾಯಿತು' ಎಂದರು.

ಪೋಕ್ಸೊ: ನಿವೃತ್ತ ಪಿಎಸ್‌ಐ ಬಂಧನ

ಬೆಂಗಳೂರು: ಏಳು ವರ್ಷ ವಯಸ್ಸಿನ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ನಿವೃತ್ತ ಪಿಎಸ್‌ಐ ಅಬ್ದುಲ್ ಹಫೀಜ್‌ನನ್ನು (74) ಶಿವಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.


ಅಬ್ದುಲ್ ಹಫೀಜ್

'ಠಾಣೆ ವ್ಯಾಪ್ತಿಯ ನಿವಾಸಿ ಅಬ್ದುಲ್ ಹಫೀಜ್ ವಿರುದ್ಧ ಬಾಲಕಿಯ ಪೋಷಕರು ದೂರು ನೀಡಿದ್ದಾರೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಸೆರೆ ಹಿಡಿಯಲಾಗಿದೆ. ಸದ್ಯ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ. 'ಬಾಲಕಿಯು ತನ್ನ ಮನೆ ಬಳಿ ಸೋಮವಾರ ಸಂಜೆ ಆಟವಾಡುತ್ತಿದ್ದಳು. ಅವಳನ್ನು ತನ್ನ ಬಳಿ ಕರೆದಿದ್ದ ಆರೋಪಿ, ಪುಸಲಾಯಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ. ವಿಷಯ ಗೊತ್ತಾಗುತ್ತಿದ್ದಂತೆ ಪೋಷಕರು ಹಾಗೂ ಸ್ಥಳೀಯರು, ಆರೋಪಿ ಮನೆ ಎದುರು ಜಮಾಯಿಸಿ ತರಾಟೆಗೆ ತೆಗೆದುಕೊಂಡಿದ್ದರು' ಎಂದರು.

'ಸ್ಥಳಕ್ಕೆ ಹೋಗಿದ್ದ ಗಸ್ತು ವಾಹನದ ಸಿಬ್ಬಂದಿ, ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು. ಆರೋಪಿ ಎಸಗಿದ್ದ ಕೃತ್ಯವನ್ನು ಬಾಲಕಿಯು ಪೋಷಕರ ಎದುರು ಹೇಳಿಕೊಂಡಿದ್ದಳು. ನಂತರವೇ ಪೋಷಕರು ಠಾಣೆಗೆ ಬಂದು ದೂರು ನೀಡಿದ್ದರು. ಬಾಲಕಿ, ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ವರದಿ ಬರಬೇಕಿದೆ' ಎಂದು ಹೇಳಿದರು.

ಸ್ವಿಗ್ಗಿ ಡೆಲಿವರಿ ಬಾಯ್ ಸುಲಿಗೆ

ಬೆಂಗಳೂರು: ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ 'ಸ್ವಿಗ್ಗಿ' ಡೆಲಿವರಿ ಬಾಯ್‌ಗೆ ಚಾಕು ತೋರಿಸಿ ಸುಲಿಗೆ ಮಾಡಲಾಗಿದ್ದು, ಕೃತ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸೋಮವಾರ ನಡೆದಿರುವ ಸುಲಿಗೆ ಸಂಬಂಧ ಡೆಲಿವರಿ ಬಾಯ್ ದೂರು ನೀಡಿದ್ದಾರೆ. ಮೂವರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ದೂರುದಾರ, ಆಹಾರದ ಪೊಟ್ಟಣ ವಿತರಿಸಲು ವಿವೇಕಾನಂದ ನಗರಕ್ಕೆ ಬಂದಿದ್ದರು. ಬೈಕ್‌ನಲ್ಲಿ ಸ್ಥಳಕ್ಕೆ ಬಂದ ಮೂವರು ಆರೋಪಿಗಳು, ಡೆಲಿವರಿ ಬಾಯ್‌ಗೆ ಚಾಕು ತೋರಿಸಿ ಬೆದರಿಸಿದ್ದರು. ನಂತರ ₹1,000 ನಗದು ಹಾಗೂ ಮೊಬೈಲ್ ಕಿತ್ತುಕೊಂಡು ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ. ಸ್ಥಳದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಕೃತ್ಯ ಸೆರೆಯಾಗಿದ್ದು, ಅದನ್ನು ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ಬೈಕ್‌ನಲ್ಲಿ ಸಾಹಸ: ಪ್ರಾಣ ತೆತ್ತ ಯುವಕ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ನಂದಿ ಬೆಟ್ಟ ರಸ್ತೆಯಲ್ಲಿ ಮಂಗಳವಾರ ವ್ಹೀಲಿಂಗ್ ಮಾಡಲು ಹೋಗಿ ಬೈಕ್ ಸವಾರನೊಬ್ಬ ಪ್ರಾಣ ಕಳೆದುಕೊಂಡಿದ್ದಾನೆ.

ಬೆಂಗಳೂರಿನ ಯುವಕರ ಗುಂಪೊಂದು ಕಾರಹಳ್ಳಿ ಬಳಿ ಬೈಕ್ ವಿಲ್ಹಿಂಗ್ ಮಾಡುತ್ತಿದ್ದಾಗ ಬೆಂಗಳೂರು ನಿವಾಸಿ ಆದಿಲ್ (25) ಎಂಬ ಯುವಕ ಕೆಳಗೆ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.ವಿಶ್ವನಾಥಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಮೇನಹಳ್ಳಿ ಸಮೀಪ ಮುನೇಗೌಡ (40) ಎಂಬುವರ ಬೈಕ್ ರಸ್ತೆ ಬದಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಅವರು ಸಾವನ್ನಪ್ಪಿದ್ದಾರೆ.

ಎಂಡಿಎಂಎ, ಅಫೀಮು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಮಾರಾಟದ ವಿರುದ್ಧ ಪ್ರತ್ಯೇಕ ಕಾರ್ಯಾಚರಣೆ ನಡೆಸಿರುವ ವಿ.ವಿ. ಪುರ ಹಾಗೂ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ನೈಜೀರಿಯಾದ ಹಿಜಿಕಿ (35), ರಾಜಸ್ಥಾನದ ಪುಕಾರಾಮ್ ಚೌಧರಿ ಹಾಗೂ ಓಂ ಸಿಂಗ್ ಬಂಧಿತರು.

'ವಿದ್ಯಾರ್ಥಿ ವೀಸಾದಡಿ ನಗರಕ್ಕೆ ಬಂದಿದ್ದ ಹಿಜಿಕಿ, ಗೋವಾದಿಂದ ಡ್ರಗ್ಸ್ ಖರೀದಿಸಿ ತಂದು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದ. ನಗರದ ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಂಪನಿಗಳ ಉದ್ಯೋಗಿಗಳಿಗೆ ಡ್ರಗ್ಸ್ ಮಾರುತ್ತಿದ್ದ. ಕೆಲ ಪಾರ್ಟಿಗಳಿಗೂ ಡ್ರಗ್ಸ್ ಪೂರೈಸುತ್ತಿದ್ದ' ಎಂದು ವಿ.ವಿ.ಪುರ ಠಾಣೆ ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ದ್ವಿಚಕ್ರ ವಾಹನದಲ್ಲಿ ಸುತ್ತಾಡುತ್ತಿದ್ದ ಆರೋಪಿ, ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಆರೋಪಿ ಹಿಜಿಕಿಯನ್ನು ಬಂಧಿಸಲಾಯಿತು. ಈತನಿಂದ ₹ 20 ಲಕ್ಷ ಮೌಲ್ಯದ ಎಂಡಿಎಂಎ ಡ್ರಗ್ಸ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ವೀಸಾ ಅವಧಿ ಮುಗಿದರೂ ಈತ ದೇಶದಲ್ಲಿ ಅಕ್ರಮವಾಗಿ ನೆಲೆಸಿದ್ದ' ಎಂದು ತಿಳಿಸಿದರು.

ರಾಜಸ್ಥಾನ್‌ದಿಂದ ಅಫೀಮು ತಂದು ಮಾರಾಟ: 'ಆರೋಪಿಗಳಾದ ಪುಕಾರಾಮ್ ಹಾಗೂ ಓಂ ಸಿಂಗ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಎಲೆಕ್ಟ್ರಿಕ್ ಉತ್ಪನ್ನಗಳ ಮಾರಾಟ ಮಳಿಗೆಯಲ್ಲಿ ಕೆಲಸಕ್ಕೆ ಸೇರಿದ್ದರು. ಆದರೆ, ಕೆಲಸದಿಂದ ಬರುತ್ತಿದ್ದ ಸಂಬಳ ಅವರಿಗೆ ಸಾಕಾಗುತ್ತಿರಲಿಲ್ಲ. ಹೀಗಾಗಿ, ಡ್ರಗ್ಸ್ ಮಾರಾಟ ಆರಂಭಿಸಿದ್ದರು' ಎಂದು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಹೇಳಿದರು.

'ರಾಜಸ್ಥಾನ್‌ಗೆ ಹೋಗಿ ಬರುತ್ತಿದ್ದ ಆರೋಪಿಗಳು, ಅಫೀಮು ತರುತ್ತಿದ್ದರು. ಕೆಲ ಬಾರಿ ಬೇರೆಯವರಿಂದಲೂ ಡ್ರಗ್ಸ್ ತರಿಸುತ್ತಿದ್ದರು. ನಗರದಲ್ಲಿ ಪರಿಚಯಸ್ಥ ಗ್ರಾಹಕರಿಗೆ ಅಫೀಮು ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದರು.'

'ಪ್ರೇಮ್ ನಗರದ ಕೆಳ ಸೇತುವೆ ಬಳಿ ಡ್ರಗ್ಸ್ ಮಾರುತ್ತಿದ್ದ ಸಂದರ್ಭದಲ್ಲಿ ಆರೋಪಿಯೊಬ್ಬ ಸಿಕ್ಕಿಬಿದ್ದಿದ್ದ. ಈತನನ್ನು ವಿಚಾರಣೆ ನಡೆಸಿದಾಗ ಮತ್ತೊಬ್ಬ ಆರೋಪಿ ಸೆರೆ ಸಿಕ್ಕ. ಇವರಿಬ್ಬರಿಂದ 270 ಗ್ರಾಂ ಅಫೀಮು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಕಾಮಗಾರಿ ಆರಂಭಿಸಬೇಡಿ: ಗುತ್ತಿಗೆದಾರರ ಸಂಘ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಯಾವುದೇ ರೀತಿಯ ಕಾಮಗಾರಿಗಳನ್ನು ಆರಂಭಿಸಬೇಡಿ' ಎಂದು ಗುತ್ತಿಗೆದಾರರಿಗೆ ಬಿಬಿಎಂಪಿ ಗುತ್ತಿಗೆದಾರರ ಸಂಘ ಸೂಚಿಸಿದೆ.

'ಬಿಲ್ ಪಾವತಿ ಮಾಡುವವರೆಗೂ ಕಾಮಗಾರಿಗಳನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಗಿತ್ತು. ಇದರಂತೆ ಆ.7ರಿಂದ ಕಾಮಗಾರಿಗಳು ಸ್ಥಗಿತಗೊಂಡಿವೆ. ಕೆಲವು ವ್ಯಕ್ತಿಗಳು ಕಾಮಗಾರಿ ಪ್ರಾರಂಭಿಸಲು ಗುತ್ತಿಗೆದಾರರ ಮೇಲೆ ಒತ್ತಡ ಹಾಕುತ್ತಿದ್ದಾರೆ. ಗುತ್ತಿಗೆದಾರರ ಒಗ್ಗಟ್ಟನ್ನು ಮುರಿಯುವ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ನೀಡಬಾರದು' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಅಂಬಿಕಾಪತಿ ತಿಳಿಸಿದ್ದಾರೆ.

'ಯಾವುದೇ ಗುತ್ತಿಗೆದಾರರು ಒತ್ತಡಕ್ಕೆ ಒಳಗಾಗಿ ಕಾಮಗಾರಿಗಳನ್ನು ಆರಂಭಿಸಬಾರದು. ಇದರಿಂದ ನಮ್ಮ ಹೋರಾಟಕ್ಕೆ ಧಕ್ಕೆಯಾಗುತ್ತದೆ' ಎಂದಿದ್ದಾರೆ.

'ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರು ಆ.19ರೊಳಗೆ ಬಿಲ್ ಹಣವನ್ನು ಪಾವತಿ ಮಾಡುವ ಭರವಸೆಯನ್ನು ನೀಡಿದ್ದಾರೆ. ಹೀಗಾಗಿ ಅಲ್ಲಿಯವರೆಗೆ ಕಾದು ನೋಡಲು ನಿರ್ಧರಿಸಲಾಗಿದೆ. ಆ.21ರಂದು ಗುತ್ತಿಗೆದಾರರ ಸಭೆ ನಡೆಸಿ ಮುಂದಿನ ಹೋರಾಟದ ಬಗ್ಗೆ ಚರ್ಚಿಸಲಾಗುವುದು' ಎಂದು ಸಂಘದ ಕಾರ್ಯಾಧ್ಯಕ್ಷ ಜಿ.ಎಂ. ರವೀಂದ್ರ ಹೇಳಿದ್ದಾರೆ.

'ಪ್ರಸ್ತುತ ಸನ್ನಿವೇಶದಲ್ಲಿ ಬಾಕಿ ಬಿಲ್ ಪಡೆಯಲು ತಾಳ್ಮೆ ಹಾಗೂ ಒಗ್ಗಟ್ಟಿನಿಂದ ನಿರಂತರ ಹೋರಾಡುವುದು ಅಗತ್ಯವಾಗಿದೆ. ಇದನ್ನು ಎಲ್ಲ ಗುತ್ತಿಗೆದಾರರೂ ಅನುಸರಿಸಬೇಕು' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಂ. ನಂದಕುಮಾರ್ ಮನವಿ ಮಾಡಿಕೊಂಡಿದ್ದಾರೆ.

ತಮಿಳುನಾಡಿಗೆ 10 ಟಿಎಂಸಿ ನೀರು ಬಿಡಲು ಬದ್ಧ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ಕಣಿವೆಯ ಜಲಾಶಯಗಳಲ್ಲಿ ಲಭ್ಯವಿರುವ ನೀರಿನ



ಪ್ರಮಾಣದ ಆಧಾರದಲ್ಲಿ ತಮಿಳುನಾಡಿಗೆ 10 ಟಿಎಂಸಿ ಅಡಿ ನೀರು ಹರಿಸಲು ಕರ್ನಾಟಕ ಬದ್ಧವಾಗಿದೆ ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನೀರು ಹರಿಸುವಂತೆ ನಿರ್ದೇಶನ ನೀಡಲು ಕೋರಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಕುರಿತು ಸುದ್ದಿಗಾರರಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಮಾತುಕತೆ ಮೂಲಕ ವಿವಾದ ಪರಿಹರಿಸಿಕೊಳ್ಳೋಣ ಎಂದು ತಮಿಳುನಾಡಿನವರಿಗೆ ಮನವಿ ಮಾಡುತ್ತೇನೆ. ನೀರಿನ ಸಂಗ್ರಹವಿದ್ದರೆ ಹರಿಸಲು ನಾವು ಸಿದ್ಧ. ಕಳೆದ ವರ್ಷ 400 ಟಿಎಂಸಿ ಅಡಿ ನೀರು ಸಮುದ್ರಕ್ಕೆ ಹರಿದಿಲ್ಲವೆ' ಎಂದು ಕೇಳಿದರು.

'ಮೇಕೆದಾಟು ಜಲಾಶಯ ಯೋಜನೆಗೆ ಅವಕಾಶ ನೀಡಿದರೆ ಸಂಕಷ್ಟದ ದಿನಗಳಲ್ಲಿ ತಮಿಳುನಾಡಿಗೆ ನೀರು ಹರಿಸುವುದಕ್ಕೆ ಅನುಕೂಲವಾಗುತ್ತದೆ. ಅದು ತಮಿಳುನಾಡಿನವರಿಗಾಗಿ ರೂಪಿಸಿರುವ ಯೋಜನೆ. ಅದನ್ನು ವಿರೋಧಿಸಬೇಡಿ, ಯೋಜನೆಗೆ ಸಹಮತಿ ನೀಡಿ ಎಂದು ನಾನು ಅವರಲ್ಲಿ ಮನವಿ ಮಾಡುತ್ತೇನೆ' ಎಂದರು.

ಕೆಂಕೇರಮ್ಮ ದೇಗುಲದಲ್ಲಿ ಕಳ್ಳತನ

ಪ್ರಜಾವಾಣಿ ವಾರ್ತೆ

ಕನಕಪುರ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮನೆ ದೇವರಾಗಿರುವ ಕನಕಪುರದ ಕೆಂಕೇರಮ್ಮ ದೇವಿಯ ದೇವಾಲಯದಲ್ಲಿ ಕಳ್ಳತನವಾಗಿದೆ.

ಕೆಂಕೇರಮ್ಮ ದೇವಾಲಯ ಕನಕಪುರ ನಗರದ ಹಲಸಿನಮರದೊಡ್ಡಿಯಲ್ಲಿದ್ದು, ಈ ಗ್ರಾಮದ ಗ್ರಾಮ ದೇವತೆಯಾಗಿದೆ. ದೇವಾಲಯಕ್ಕೆ ಸಿ.ಸಿ. ಟಿವಿ ಕ್ಯಾಮೆರಾ ಅಳವಡಿಸಿದ್ದು, ಕಳ್ಳ ದೇವಾಲಯ ಹೊಕ್ಕು ಕಳ್ಳತನ ಮಾಡಿರುವುದು ಸೆರೆಯಾಗಿದೆ.

ಅರ್ಚಕರು ಪೂಜೆ ಮಾಡುವಾಗ ದೇವಾಲಯದಲ್ಲೇ ಅಡಗಿ ಕುಳಿತಿದ್ದ ಕಳ್ಳ ಎಲ್ಲವನ್ನೂ ಗಮನಿಸಿದ್ದಾನೆ. ಪೂಜೆ ಮುಗಿಸಿದ ಪೂಜಾರಿ ಉಪಾಹಾರಕ್ಕಾಗಿ ಮನೆಗೆ ಹೋದಾಗ, ಗರ್ಭಗುಡಿ ಪ್ರವೇಶಿಸಿ ದೇವಿಯ ಮೈಮೇಲಿದ್ದ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾನೆ.


ದೇವಾಲಯ ಕನಕಪುರ ನಗರದ ಹಲಸಿನಮರದೊಡ್ಡಿಯಲ್ಲಿರುವ ಕೆಂಕೇರಮ್ಮ ದೇಗುಲ

ಚಿನ್ನದ ತಾಳಿ ಹಾಗೂ ಅರ್ಧ ಕೆ.ಜಿ ಯಷ್ಟು ಬೆಳ್ಳಿಯ ಆಭರಣ ಕಳವಾಗಿವೆ ಎಂದು ಅರ್ಚಕರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ತಮಿಳುನಾಡು ಮನವಿಗೆ ಮನ್ನಣೆ ಸಿಕ್ಕಿಲ್ಲ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕಾವೇರಿ ನೀರಿನ ವಿಚಾರದಲ್ಲಿ ತನ್ನ ಮನವಿಗೆ ಕೇಂದ್ರ ಸರ್ಕಾರ ಮನ್ನಣೆ ನೀಡದಿರುವುದರಿಂದಲೇ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ' ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಂಗಳವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಜಲಾಶಯದಲ್ಲಿರುವ ನೀರಿನ ಸಂಗ್ರಹ, ಇಲ್ಲಿಯವರೆಗೂ ಹರಿಸಿರುವ ನೀರಿನ ಬಗ್ಗೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವರಿಕೆ ಮಾಡಿಕೊಡಲಿದೆ. ಮಳೆ ಕಡಿಮೆಯಾಗಿದೆ. ಜಲಾಶಯಕ್ಕೆ ಒಳ ಹರಿವೂ ಕುಸಿದಿದೆ. ಕುಡಿಯುವ ನೀರಿಗೆ ತೊಂದರೆಯಾಗದಂತೆ ನಿರ್ಧಾರ ಕೈಗೊಳ್ಳುವುದು ನಮ್ಮ ಜವಾಬ್ದಾರಿ. ಕಾನೂನು ವ್ಯಾಪ್ತಿಯಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

'ಕೋರ್ಟ್ ತೀರ್ಪನ್ನೂ ಪಾಲಿಸಬೇಕು; ಜನರ ಹಿತವನ್ನೂ ಕಾಯಬೇಕು. ಮಳೆ ಕಡಿಮೆಯಾದಾಗ ನೀರಿನ ವಿಚಾರದಲ್ಲಿ ತಮಿಳುನಾಡು ಹಾಗೂ ಕರ್ನಾಟಕದ ನಡುವೆ ವಿವಾದ ಸೃಷ್ಟಿಯಾಗುವುದು ಸಹಜ. ದೇವರ ಕೃಪೆಯಿಂದ ಮಳೆಯಾದರೆ ಎಲ್ಲಾ ಗೊಂದಲಗಳು ಬಗೆಹರಿಯುತ್ತವೆ. ಕಾವೇರಿ, ಕಬಿನಿ, ಹಾರಂಗಿ, ಹೇಮಾವತಿ ಅಚ್ಚುಕಟ್ಟು ಪ್ರದೇಶದ ರೈತರ ಹಿತ ಕಾಯುತ್ತೇವೆ' ಎಂದರು.

ಕೃಷಿ ಇಲಾಖೆ ಅಧಿಕಾರಿಗಳ ದೂರು, ಸಿಐಡಿ ತನಿಖೆ ಕುರಿತ ಪ್ರಶ್ನೆಗೆ 'ಇಂದು ಸ್ವಾತಂತ್ರ್ಯ ದಿನಾಚರಣೆ ಮಾಡೋಣ, ನಿಮಗೂ ಧನ್ಯವಾದ, ಬಿಜೆಪಿಯವರಿಗೂ ಧನ್ಯವಾದ' ಎಂದರು.

ಹೊರಹರಿವು ಹೆಚ್ಚಳ: ತಮಿಳುನಾಡು ಕೋರ್ಟ್ ಮೊರೆ ಹೋದ ಬೆನ್ನಲ್ಲೇ ಕೆಆರ್‌ಎಸ್‌ನಿಂದ ನದಿಗೆ ಹರಿಸುವ ನೀರಿನ ಪ್ರಮಾಣ ಹೆಚ್ಚಾಗಿದೆ. 11 ಸಾವಿರ ಕ್ಯುಸೆಕ್ ಹೊರಹರಿವು ದಾಖಲಾಗಿದ್ದು, ಈ ನೀರು ತಮಿಳುನಾಡಿಗೆ ಹೋಗುತ್ತಿದೆ.

ಸುಮಲತಾ ವಿರುದ್ಧ ಆಕ್ರೋಶ

ಸ್ವಾತಂತ್ರ್ಯೋತ್ಸವ ಸಮಾರಂಭಕ್ಕೆ ಗೈರು ಹಾಜರಾದ ಮಂಡ್ಯ ಸಂಸದೆ ಸುಮಲತಾ ಹಾಗೂ ಮೇಲುಕೋಟೆ ಶಾಸಕರ ವಿರುದ್ಧ ಆಕ್ರೋಶ ವ್ಯಕ್ತವಾಯಿತು. ಸಾಮಾಜಿಕ ಜಾಲತಾಣಗಳಲ್ಲೂ ಜನ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸಂಸದೆ ಸುಮಲತಾ ಅವರು ಫೇಸ್‌ಬುಕ್‌ನಲ್ಲಿ ಸ್ವಾತಂತ್ರ್ಯೋತ್ಸವದ ಶುಭಾಶಯವನ್ನಷ್ಟೇ ಹಾಕಿದ್ದಾರೆ. ದರ್ಶನ್ ಪುಟ್ಟಣ್ಣಯ್ಯ ಅಮೆರಿಕದಲ್ಲಿದ್ದು ಶಾಸಕರಾಗಿ ಆಯ್ಕೆಯಾದ ಬಳಿಕ ಮೊದಲ ಸ್ವಾತಂತ್ರ್ಯ ಸಂಭ್ರಮಕ್ಕೆ ಗೈರು ಹಾಜರಾಗಿದ್ದರು. ಈ ಬಗ್ಗೆ ಆಕ್ಷೇಪ ವ್ಯಕ್ತವಾಗಿದೆ.

ವೇದಿಕೆಯಲ್ಲಿ ಪತ್ನಿ: ವಿವಾದ

ಕೃಷಿ ಸಚಿವ ಚಲುವರಾಯ ಸ್ವಾಮಿ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಶಿಷ್ಟಾಚಾರ ಉಲ್ಲಂಘನೆ ಮಾಡಿ ಪತ್ನಿಯನ್ನು ವೇದಿಕೆಯಲ್ಲಿ ಕೂರಿಸಿದ್ದಕ್ಕೆ ಆಕ್ರೋಶ ವ್ಯಕ್ತವಾಗಿದೆ. ಈ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಿದೆ. ಅಧಿಕಾರಿಗಳ ಕುಟುಂಬಸ್ಥರು ಸಮಾರಂಭದಲ್ಲಿ ಭಾಗಿಯಾಗಿದ್ದರು, ಆದರೆ ಅವರೆಲ್ಲರೂ ವೇದಿಕೆಯ ಹಿಂದೆ ಕುಳಿತಿದ್ದರು. ಆದರೆ ಚಲುವರಾಯಸ್ವಾಮಿ ಪತ್ನಿ ಧನಲಕ್ಷ್ಮಿಗೆ ವೇದಿಕೆಯ ಅತಿಥಿಗಳ ಸಾಲಿನಲ್ಲಿ ಸ್ಥಾನ ನೀಡಿದ್ದಕ್ಕೆ ಆಕ್ರೋಶ ವ್ಯಕ್ತವಾಗಿದೆ.

ಭ್ರಷ್ಟಾಚಾರಕ್ಕೆ ಶೀಘ್ರ ತಡೆ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ

‘ಪ್ಯಾನ್ ಸಿನಿಮಾದಂತೆ ‘ಕೈ’ ಲಂಚಾವತಾರ’

ಪ್ರಜಾವಾಣಿ ವಾರ್ತೆ



ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: ‘ಪ್ಯಾನ್ ಇಂಡಿಯಾ ಸಿನಿಮಾಗಳಂತೆ ರಾಜ್ಯ ಸರ್ಕಾರದ ಲಂಚಾವತಾರವೂ ಹಲವು ಭಾಗಗಳಾಗಿ ತೆರೆದುಕೊಳ್ಳುತ್ತಿದೆ. ಪ್ರತಿ ಚಿತ್ರಕ್ಕೂ ಕೊನೆಯಲ್ಲಿ ಕ್ಲೈಮ್ಯಾಕ್ಸ್ ಇರುವಂತೆ ಕಾಂಗ್ರೆಸ್ ಭ್ರಷ್ಟಾಚಾರಕ್ಕೂ ತೆರೆ ಬೀಳಲಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಪಕ್ಷದ ಕಚೇರಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 77ನೇ ಸ್ವಾತಂತ್ರ್ಯ ದಿನಾಚರಣೆ ನಂತರ ಅವರು ಮಾತನಾಡಿದರು.

‘ಕಾಂಗ್ರೆಸ್ ಕಚೇರಿಯಲ್ಲಿ ಈಚೆಗೆ ನಡೆದ ಸಭೆಯಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ವೀರಾವೇಶದ ಮಾತನಾಡಿದ್ದಾರೆ. ಮುಖ್ಯಮಂತ್ರಿ ಪೆನ್‌ಡ್ರೈವ್ ಪ್ರಶ್ನೆಯಾಗಿ ಪೆನ್ ತೆಗೆದು ತೋರಿಸುತ್ತಾ ಅಭಿನಯ ಮಾಡಿದ್ದಾರೆ. ನಾನು ಕೊಡುವ ಸಾಕ್ಷ್ಯಕ್ಕೆ ಪ್ರತಿಯಾಗಿ ಆರೋಪಿತರ ಮೇಲೆ ಕ್ರಮ ಜರುಗಿಸುವ ಎದೆಗಾರಿಕೆ ಮುಖ್ಯಮಂತ್ರಿಗೆ ಇದೆಯಾ’ ಎಂದು ಪ್ರಶ್ನಿಸಿದರು.

‘ಸಿದ್ದರಾಮಯ್ಯ ಅವರು ವಿರೋಧ ಪಕ್ಷದ ನಾಯಕ ಸ್ಥಾನದಲ್ಲಿದ್ದಾಗ ಒಂದೂ ದಾಖಲೆ ಬಿಡುಗಡೆ ಮಾಡಲಿಲ್ಲ. ಇಂಥವರು ಇನ್ನೊಬ್ಬರ ಯೋಗ್ಯತೆ ಬಗ್ಗೆ ಮಾತನಾಡುತ್ತಾರೆ. ಗ್ಯಾರಂಟಿ ಬಗ್ಗೆ ಪ್ರಶ್ನಿಸಿ ಹೇಳಿಕೊಳ್ಳುವ ಕಾಂಗ್ರೆಸ್ ನಾಯಕರು ಪಕ್ಷದ ಕಚೇರಿಯ ದುಡ್ಡಿನಿಂದ ಕೊಟ್ಟಿದ್ದಾರಾ? ಸಮಾನತೆ ತರುತ್ತೇವೆ ಎನ್ನುವ ಸರ್ಕಾರ ಉಚಿತ ಕೊಡುಗೆ ಮೂಲಕ ಜನರನ್ನು ಕೈ ಒಡ್ಡುವಂತೆ ಮಾಡಿದೆ. ದುಡಿಯುವ ಕೈಗಳಿಗೆ ಶಕ್ತಿ ತುಂಬುವ ಬದಲು ಕೈಚಾಚಿ ನಿಲ್ಲುವಂತ ಸ್ಥಿತಿ ನಿರ್ಮಿಸಿದೆ. ಇದಕ್ಕಿಂತ ದುಸ್ಥಿತಿ ಇನ್ನೇನಿದೆ. ರಾಜ್ಯದಲ್ಲಿ ಹಣಕ್ಕೆ ಕೊರತೆ ಇಲ್ಲ. ಜನರು ತಮ್ಮ ರಕ್ತ ಸುರಿಸಿ ಖಜಾನೆ ತುಂಬುತ್ತಿದ್ದಾರೆ. ಈಸ್ಟ್ ಇಂಡಿಯಾ ಕಂಪನಿ ರೀತಿ ಖಜಾನೆಯನ್ನು ಕಾಂಗ್ರೆಸ್ ಲೂಟಿ ಮಾಡುತ್ತಿದೆ’ ಎಂದು ಟೀಕಿಸಿದರು.

‘ಉಪ ಮುಖ್ಯಮಂತ್ರಿ ಅವರು ನಮ್ಮ ಅಜ್ಜಯ್ಯನ ಕಥೆ ಇವರಿಗೆ ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ. ನಮಗೆ, ಜನರಿಗೆ ಅಜ್ಜಯ್ಯನ ರಕ್ಷಣೆ ಇಲ್ಲವೇ ?ಅವರೊಬ್ಬರಿಗೆ ಮಾತ್ರ ಇರುತ್ತದೆಯಾ? ಕಾವೇರಿ ವಿವಾದದ ಬಗ್ಗೆ ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟ್ ಮೊರೆ ಹೋಗಿದೆ. ಕೋರ್ಟ್ ಏನು ಹೇಳುತ್ತದೆ ಎನ್ನುವುದನ್ನು ಕಾದು ನೋಡೋಣ. ಮೇಕೆದಾಟು ಪಾದಯಾತ್ರೆ ಮಾಡಿದವರು ಏನು ಮಾಡುತ್ತಾರೆ ಎನ್ನುವುದನ್ನೂ ನೋಡೋಣ’ ಎಂದರು.

‘ಗುತ್ತಿಗೆದಾರರ ತಣ್ಣಗೆ ಮಾಡಿದವರು ಯಾರು?’

‘ಶೇ 40 ಪರ್ಸೆಂಟ್ ಸರ್ಕಾರ, ಬೆಂಕಿಯಿಂದ ಬಾಣಲೆಗೆ ಬಿದ್ದವು ಎಂದಿದ್ದವರೇ ಈಗ ಉಲ್ಟಾ ಹೊಡೆದಿದ್ದಾರೆ. ಗುತ್ತಿಗೆದಾರರಿಗೆ ಗಟ್ಟಿತನ ಬೇಕು. ಧೈರ್ಯವಾಗಿ ಮಾತಾಡಬೇಕು. ವಿದೇಶಕ್ಕೆ ಹೋಗುವ ಮೊದಲು ನಮ್ಮ ಮನೆಗೆ ಬಂದು ತಮ್ಮ ನೋವು ತೋಡಿಕೊಂಡರು. ಅವರಿಗೆ ಬೆಂಬಲ ನೀಡುವುದಾಗಿ ಭರವಸೆ ಕೊಟ್ಟಿದ್ದೆ, ಈಗ ಅವರ ವರಸೆ ಬದಲಾಗಿದೆ’ ಎಂದು ಕುಮಾರಸ್ವಾಮಿ ಹೇಳಿದರು.

‘ಅಜ್ಜಯ್ಯನ ಮೇಲೆ ಪ್ರಮಾಣ ಮಾಡಿ ಎಂದು ಸವಾಲು ಹಾಕಿದ್ದವರು ತಣ್ಣಗಾಗಿದ್ದಾರೆ. ಅವರನ್ನು ತಣ್ಣಗೆ ಮಾಡಿದವರು ಯಾರು? ಅವರ ಮೇಲೆ ಒತ್ತಡ ಹಾಕಲು ಮಧ್ಯಸ್ಥಿಕೆ ವಹಿಸಿದವರು ಯಾರು? ಅತ್ಯಾಚಾರ ಪ್ರಕರಣಗಳಲ್ಲಿ ದುಡ್ಡು ಕೊಟ್ಟು ಸರಿ ಮಾಡಿಕೊಂಡಿದ್ದಾರೆ ಎಂದು ಮಾಜಿ ಕಾಂಗ್ರೆಸ್ಸಿಗರು ಮಾತನಾಡಿದ್ದಾರೆ. ದುಡ್ಡಿನಿಂದ ಏನು ಬೇಕಾದರೂ ಮಾಡಬಹುದು ಎಂದುಕೊಂಡಿದ್ದಾರೆ’ ಎಂದರು.

‘ಕುಮಾರಸ್ವಾಮಿ ಬಿಜೆಪಿ ಏಡಿಯಾಳಲ್ಲ’

‘ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ನಾಯಕರು ಆರೋಪಿಸಿದಂತೆ ನಾನು ಬಿಜೆಪಿ ವಕ್ತಾರನಲ್ಲ, ಅವರ ಏಜೆಂಟ್ ಅಲ್ಲ. ನಾನು ಆರೂವರೆ ಕೋಟಿ ಕನ್ನಡಿಗರ ವಕ್ತಾರ. ಜನರು ಪ್ರತಿಪಕ್ಷ ಸ್ಥಾನದಲ್ಲಿ ಇರಿಸಿದ್ದಾರೆ. ಅವರ ಪರವಾಗಿ, ಕಾವಲುಗಾರನಾಗಿ ಸರ್ಕಾರವನ್ನು ಪ್ರಶ್ನಿಸುತ್ತಿದ್ದೇನೆ. ವಿರೋಧ ಪಕ್ಷದ ಸಾಮಾನ್ಯ ಶಾಸಕನಾಗಿ ಕೇವಲ ಮಾತನಾಡುತ್ತಿದ್ದೇನೆ. ಕುಮಾರಸ್ವಾಮಿಗೆ ಹೊಟ್ಟೆ ಉರಿ ಎಂದು ಹೇಳುತ್ತಿದ್ದಾರೆ. ನನಗೆ ಏನಾಗಿದೆಯೋ ಅದಕ್ಕೆ ಔಷಧ ತೆಗೆದುಕೊಳ್ಳುವೆ. ಜನರ ಸಂಕಷ್ಟಕ್ಕೆ ಅವರು ಪರಿಹಾರ ನೀಡಲಿ’ ಎಂದು ಕುಮಾರಸ್ವಾಮಿ ಸಲಹೆ ನೀಡಿದರು.

ಎಚ್‌ಡಿಕೆ ಮಾಹಿತಿ ಬಹಿರಂಗಪಡಿಸಲಿ: ಡಿಕೆಶಿ ಸವಾಲು



ಬೆಂಗಳೂರು: ‘ಬಿಚ್ಚಿಡುವವರನ್ನು, ಬಿಚ್ಚಿ ಹಾಕುವವರನ್ನು ತಡೆಯಲು ಆಗುವುದಿಲ್ಲ. ಬಿಚ್ಚಿಡುವುದಕ್ಕೆ ಎಲ್ಲರಿಗೂ ಅವಕಾಶವಿದೆ. ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ತಮ್ಮ ಬಳಿ ಇರುವ ಎಲ್ಲ ಮಾಹಿತಿಯನ್ನೂ ಬಹಿರಂಗಪಡಿಸಲಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

‘ಬಿಬಿಎಂಪಿಯಲ್ಲಿ ಏನಾಗುತ್ತಿದೆ ಎಂಬುದನ್ನು ಬಿಚ್ಚಿಡುತ್ತೇನೆ’ ಎಂಬ ಕುಮಾರಸ್ವಾಮಿ ಹೇಳಿಕೆ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಅವರು ಏನು ಬೇಕಾದರೂ ಮಾಡಲಿ. ಬಿಚ್ಚಿ, ಬಿಚ್ಚಿ ಬಯಲು ಮಾಡಲಿ’ ಎಂದರು.

‘ಪೆನ್ ಡ್ರೈವ್‌ನಲ್ಲಿರುವ ಮಾಹಿತಿ ಬಹಿರಂಗಪಡಿಸಿದರೆ ಸಿಐಡಿ ತನಿಖೆ ಮಾಡಿಸಿ ತಮ್ಮ ಪರ ವರದಿ ಪಡೆಯುತ್ತಾರೆ’ ಎಂಬ ಟೀಕೆ ಕುರಿತು ಕೇಳಿದಾಗ, ‘ನಮಗೆ ಕುಮಾರಸ್ವಾಮಿ ಅವರಷ್ಟು ಅನುಭವವಿಲ್ಲ. ಈಗ ಅವರನ್ನು ‘ಅಣ್ಣ’ ಎಂದು ಕರೆಯುವಂತಿಲ್ಲ. ಮುಂದಿನ ಜನ್ಮದ ಬಗ್ಗೆಯೂ ಮಾತನಾಡಿದ್ದಾರೆ’ ಎಂದು ಹೇಳಿದರು.

‘ನಾನು ಅವರ ಜತೆ ವೈಯಕ್ತಿಕ ಜಟಾಪಟಿ ಮಾಡುವುದಿಲ್ಲ. ರಾಜಕೀಯ ಯುದ್ಧ ಮುಗಿದಿದೆ. ರಾಜ್ಯದ ಜನರು ನಮಗೆ ಆಶೀರ್ವಾದ ಮಾಡಿದ್ದಾರೆ’ ಎಂದರು.


‘ಬಿಬಿಎಂಪಿಯಲ್ಲಿ ನಡೆದಿರುವ ಅಕ್ರಮಗಳ ಕುರಿತು ದಾಖಲೆ ಸಂಗ್ರಹ ನಡೆಯುತ್ತಿದೆ. ಅವುಗಳ ಬಿಡುಗಡೆಗೆ ಆತುರ ಬೇಡ. ಯಾರೆಲ್ಲಾ? ಏನೇನು? ಬಿಚ್ಚಿಡುತ್ತಾರೋ? ಎಲ್ಲವನ್ನೂ ಮುಗಿಸಲಿ. ನಮಗೆ ಅವಸರ ಇಲ್ಲ. ತನಿಖಾ ವರದಿ ಕೈಸೇರಿದ ಬಳಿಕ ಬಿಡುಗಡೆ ಮಾಡಲಾಗುವುದು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕನಸು ಕಾಣಲಿ: ‘ಆರೇಳು ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ’ ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಕೆಲವರಿಗೆ ಮಾನಸಿಕ ಅಸ್ವಸ್ಥತೆ ಇರುತ್ತದೆ. ಅಂತಹವರಿಗೆ ಕನಸು ಕಾಣಬೇಡಿ ಎಂದು ಹೇಳಲು ಆಗುತ್ತದೆಯೆ? ಆಸೆಪಡಲಿ, ಏನು ಬೇಕಾದರೂ ಮಾಡಿಕೊಳ್ಳಲಿ’ ಎಂದರು.

ಹೈಕಮಾಂಡ್ ತೀರ್ಮಾನ: ‘ಹಿರಿಯರು ಎರಡೂವರೆ ವರ್ಷಗಳ ಬಳಿಕ ಅಧಿಕಾರ ಬಿಟ್ಟು ಕೊಡಬೇಕು’ ಎಂಬ ಆಹಾರ ಸಚಿವ ಕೆ.ಎಚ್‌. ಮುನಿಯಪ್ಪ ಹೇಳಿಕೆ ಕುರಿತು ಕೇಳಿದಾಗ, ‘ಆ ಬಗ್ಗೆ ನಾನು ಏನನ್ನೂ ಹೇಳುವುದಿಲ್ಲ. ಇದು ಪಕ್ಷದ ಆಂತರಿಕ ವಿಚಾರ. ಪಕ್ಷದ ಹೈಕಮಾಂಡ್ ಈ ಬಗ್ಗೆ ತೀರ್ಮಾನಿಸಲಿದೆ’ ಎಂದು ಹೇಳಿದರು.

‘ನಾಗಪುರ ಶಿಕ್ಷಣ ನೀತಿ’: ‘ಎನ್‌ಇಪಿ ಎಂದರೆ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲ; ನಾಗಪುರ ಎಜುಕೇಷನ್ ಪಾಲಿಸಿ. ಬಿಜೆಪಿ ಅಧಿಕಾರದಲ್ಲಿರುವ ಉತ್ತರ ಪ್ರದೇಶ, ಗುಜರಾತ್, ಮಧ್ಯಪ್ರದೇಶ, ಹರಿಯಾಣದಲ್ಲಿ ಅದನ್ನು ಜಾರಿ ಮಾಡಿಲ್ಲ. ಅವರಿಗೆ ಕರ್ನಾಟಕದ ಮೇಲೆ ಏಕೆ ಕಣ್ಣು?’ ಎಂದರು.

‘ಎನ್‌ಇಪಿ ರದ್ದು ಮಾಡುತ್ತೇವೆ ಎಂದು ನಮ್ಮ ಪಕ್ಷದ ಪ್ರಣಾಳಿಕೆಯಲ್ಲೇ ಪ್ರಕಟಿಸಿದ್ದೆವು. ಅದನ್ನು ಮಾಡುತ್ತೇವೆ’ ಎಂದು ಹೇಳಿದರು.



ಹಾಸನದ ಎಸ್ಪಿ ಕಚೇರಿ ಆವರಣದಲ್ಲಿ ವಿದ್ಯಾರ್ಥಿನಿ ಸಂಗೀತಾ ಧ್ವಜಾರೋಹಣ ನೆರವೇರಿಸಿದರು

ಹಾಸನ: ಧ್ವಜಾರೋಹಣ ಮಾಡಿದ ಬುಡಕಟ್ಟು ವಿದ್ಯಾರ್ಥಿನಿ

ಪ್ರಜಾವಾಣಿ ವಾರ್ತೆ

ಹಾಸನ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಬುಡಕಟ್ಟು ಸಮುದಾಯದ ವಿದ್ಯಾರ್ಥಿನಿ, ಬೇಲೂರು ತಾಲ್ಲೂಕಿನ ಅಂಗಡಿಹಳ್ಳಿಯ ಸಂಗೀತಾ ಅವರು ಜಿಲ್ಲಾ ಪೊಲೀಸ್ ಕಚೇರಿಯ ಆವರಣದಲ್ಲಿ ಮಂಗಳವಾರ ರಾಷ್ಟ್ರ ಧ್ವಜಾರೋಹಣ ಮಾಡಿ ಗೌರವ ವಂದನೆ ಸ್ವೀಕರಿಸಿದ್ದು ವಿಶೇಷವಾಗಿತ್ತು.

ಗ್ರಾಮದಲ್ಲಿ 300ಕ್ಕೂ ಹೆಚ್ಚು ಹಕ್ಕಿಪಿಕ್ಕಿ ಅಲೆಮಾರಿ ಕುಟುಂಬ, 186 ಸಿಳ್ಳೇಕ್ಯಾತ ಜನಾಂಗ, 156 ಈಡಿಗ ಕುಟುಂಬಗಳಿವೆ. ಹಕ್ಕಿಪಿಕ್ಕಿ ಸಮುದಾಯದ ಹರೀರಾ ಮತ್ತು ಮಂಜುಳಾ ದಂಪತಿಯ ಪುತ್ರಿ ಸಂಗೀತಾ, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 62 ರಷ್ಟು ಅಂಕ ಪಡೆದಿದ್ದರು. ಆಕೆಯ ಸಾಧನೆಯನ್ನು ಎಸ್ಪಿ ಹರಿರಾಂ ಶಂಕರ್ ಪರಿಗಣಿಸಿ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರು.

ಯುವತಿ ಮತ್ತು ಅವರ ಕುಟುಂಬದ ಸದಸ್ಯರನ್ನು ಪೊಲೀಸ್ ಇಲಾಖೆ ಪ್ರೀತಿಯಿಂದ ಸ್ವಾಗತಿಸಿತು. ಹರಿರಾಂ ಶಂಕರ್ ಮತ್ತು ಇಲಾಖೆಯ ಕಾರ್ಯಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ.

ಭಗವಾಧ್ವಜ ಹಾರಿಸಲು ಮುಂದಾದ ನಗರಸಭೆ ಸದಸ್ಯರು

ಪ್ರಜಾವಾಣಿ ವಾರ್ತೆ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): ಸ್ವಾತಂತ್ರ್ಯ ದಿನಾಚರಣೆ ಸಮಾರಂಭದ ವೇಳೆ ನಿಪ್ಪಾಣಿ ನಗರಸಭೆ ಕಚೇರಿ ಮೇಲೆ ಭಗವಾಧ್ವಜ ಹಾರಿಸಲು ಮುಂದಾದ ನಗರಸಭೆಯ ಎನ್‌ಸಿಪಿ ಬೆಂಬಲಿತ ಸದಸ್ಯರಾದ ಸಂಜಯ ಸಾಂಗಾವಕರ ಮತ್ತು ವಿನಾಯಕ ವಡೆ ಅವರನ್ನು ಪೊಲೀಸರು ತಡೆದರು.

ರಾಷ್ಟ್ರಧ್ವಜದ ಕಂಬದ ಪಕ್ಕದಲ್ಲೇ ಇರುವ ಇನ್ನೊಂದು ಕಂಬದಲ್ಲಿ ಹಳೆಯ ಭಗವಾಧ್ವಜ ತೆಗೆದು ಹೊಸ ಧ್ವಜ ಹಾರಿಸಲು ಮುಂದಾದಾಗ, ಇಬ್ಬರೂ ಸದಸ್ಯರು ಮತ್ತು ಪೊಲೀಸರ ಮಧ್ಯೆ ವಾಗ್ವಾದ ಆಯಿತು. ‘ರಾಷ್ಟ್ರಧ್ವಜ ಹೊರತುಪಡಿಸಿ ಬೇರೆ ಧ್ವಜ ಹಾರಿಸಲು ಅವಕಾಶವಿಲ್ಲ’ ಎಂದು ಪೊಲೀಸರು ಮನವರಿಕೆ ಮಾಡಿದರು.

‘ಸ್ವಾತಂತ್ರ್ಯ ದಿನಾಚರಣೆಯಂದು ರಾಷ್ಟ್ರಧ್ವಜ ಹೊರತುಪಡಿಸಿದರೆ, ಬೇರೆ ಯಾವುದೇ ಧ್ವಜ ಹಾರಿಸುವಂತಿಲ್ಲ. ರಾಷ್ಟ್ರಧ್ವಜ ಹಾರಿಸಿದ ಬಳಿಕ ಭಗವಾಧ್ವಜ ಹಾರಿಸಲು ಯತ್ನಿಸಿದವರ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳುವರು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ಸಿಪಿಐ ಸಂಗಮೇಶ ಶಿವಯೋಗಿ, ಪಿಎಸ್‌ಐ ಉಮಾದೇವಿ ಹಾಗೂ ಸಿಬ್ಬಂದಿ ಇದ್ದರು.

ಜಾತಿ ನಿಂದನೆ ಆರೋಪ: ಸಚಿವ ಮಲ್ಲಿಕಾರ್ಜುನ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

'ಬೆಂಗಳೂರು: ಅವಹೇಳನಕಾರಿ ಪದ ಬಳಸಿ ಜಾತಿ ನಿಂದನೆ ಮಾಡಿರುವ ಆರೋಪದಡಿ ತೋಟಗಾರಿಕೆ ಸಚಿವ ಎಸ್‌.ಎಸ್‌. ಮಲ್ಲಿಕಾರ್ಜುನ್ ವಿರುದ್ಧ ರಾಜಾಜಿನಗರ ಠಾಣೆಗೆ ದೂರು ಸಲ್ಲಿಕೆಯಾಗಿದ್ದು, ಅದನ್ನು ವಿಧಾನಸೌಧ ಠಾಣೆಗೆ ವರ್ಗಾಯಿಸಲಾಗಿದೆ.

‘ಸಚಿವ ಮಲ್ಲಿಕಾರ್ಜುನ್ ಅವರು ಜಾತಿ ನಿಂದನೆ ಮಾಡಿದ್ದಾರೆ. ಪರಿಶಿಷ್ಟ ಜಾತಿ- ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಿ’ ಎಂದು ಒತ್ತಾಯಿಸಿ ದಿವಾಕರ್ ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಇದೊಂದು ಸೂಕ್ಷ್ಮ ಪ್ರಕರಣ. ದಿವಾಕರ್ ಅವರಿಂದ ದೂರು ಸ್ವೀಕರಿಸಿ ಪರಿಶೀಲನೆ ನಡೆಸಲಾಯಿತು. ಹಿರಿಯ ಅಧಿಕಾರಿಗಳು ಹಾಗೂ ಕಾನೂನು ತಜ್ಞರ ಅಭಿಪ್ರಾಯದಂತೆ, ದೂರನ್ನು ವಿಧಾನಸೌಧ ಠಾಣೆಗೆ ವರ್ಗಾಯಿಸಲಾಗಿದೆ’ ಎಂದು ತಿಳಿಸಿವೆ.

‘ಮಲ್ಲಿಕಾರ್ಜುನ್ ವಿರುದ್ಧ ಸದ್ಯಕ್ಕೆ ಎಫ್‌ಐಆರ್ ದಾಖಲಾಗಿಲ್ಲ. ವಿಧಾನಸೌಧ ಠಾಣೆ ಪೊಲೀಸರು ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ’ ಎಂದು ಹೇಳಿವೆ. ವಿಧಾನಸೌಧ ಠಾಣೆ ಪೊಲೀಸರು, ‘ದೂರು ಪರಿಶೀಲಿಸಿ ಮುಂದಿನ ಕ್ರಮ’ ಎಂದರು.

> ಜಾತಿ ನಿಂದನೆ ಮಾಡುವಂತಹ ಯಾವ ಹೇಳಿಕೆಯನ್ನೂ ಕೊಟ್ಟಿಲ್ಲ. ಯಾವ ಗಾದೆ ಮಾತನ್ನೂ ಉಲ್ಲೇಖಿಸಿಲ್ಲ. ಹೊಲಸು ಮಾಡಬೇಡಿ ಎಂದಿದ್ದೆ. ಅದನ್ನೇ ತಿರುಚಲಾಗಿದೆ
> **ಎಸ್‌.ಎಸ್‌. ಮಲ್ಲಿಕಾರ್ಜುನ್**
> ತೋಟಗಾರಿಕೆ ಸಚಿವ

ತಿರುಚಿದ ವಿಡಿಯೊ- ದೂರು (ದಾವಣಗೆರೆ ವರದಿ): ವಿಡಿಯೊ ವಿಚಾರವಾಗಿ ದಾವಣಗೆರೆಯ ಕಾಂಗ್ರೆಸ್ ಕಾರ್ಯಕರ್ತ ಶ್ರೀನಾಥ್ ಬಾಬು ನಗರದ ಸಿಇಎನ್ ಠಾಣೆಗೆ ದೂರು ನೀಡಿದ್ದಾರೆ.

ಸಚಿವರ ತೇಜೋವಧೆ ನಡೆಸುವ ಉದ್ದೇಶದಿಂದ ವಿಜಯ್ ಕುಮಾರ್ ಹಿರೇಮಠ ಎಂಬುವರು ತಿರುಚಿದ ವಿಡಿಯೊ ತುಣುಕನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿರುವುದಾಗಿ ಅವರು ಆರೋಪಿಸಿದ್ದಾರೆ.

ಚುನಾವಣಾ ಪೂರ್ವದಲ್ಲಿ ಮಲ್ಲಿಕಾರ್ಜುನ್ ಅವರು ಪತ್ನಿ ಡಾ.ಪ್ರಭಾ ಮಲ್ಲಿಕಾರ್ಜುನ್ ಜೊತೆ ಮಾತನಾಡಿರುವ ವಿಡಿಯೊ ಇದು ಎಂದು ಹೇಳಿದ್ದಾರೆ.



ನಮ್ಮ ದೇಶ ನಮ್ಮ ಹೆಮ್ಮೆ ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆದ ಸ್ವಾತಂತ್ರ್ಯೋತ್ಸವದಲ್ಲಿ 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

ಠಾಣೆ ಆಸ್ಪತ್ರೆಯಲ್ಲಿ ಮತ್ತೆ ಮೂವರ ಸಾವು

ಠಾಣೆ (ಪಿಟಿಐ): ಒಂದೇ ದಿನ 18 ರೋಗಿಗಳು ಮೃತಪಟ್ಟಿದ್ದ ಸರ್ಕಾರಿ ಸ್ವಾಮ್ಯದ ಮಹಾರಾಷ್ಟ್ರದ ಠಾಣೆಯ ಛತ್ರಪತಿ ಶಿವಾಜಿ ಮಹಾರಾಜ ಆಸ್ಪತ್ರೆಯಲ್ಲಿ (ಸಿಎಸ್‌ಎಂಎಚ್) ಮತ್ತೆ ಮೂವರು ರೋಗಿಗಳು ಮೃತಪಟ್ಟಿದ್ದಾರೆ. ಈ ಮೂಲಕ ಶನಿವಾರದಿಂದ ಸೋಮವಾರ ಬೆಳಿಗ್ಗೆವರೆಗೆ ಒಟ್ಟು 21 ರೋಗಿಗಳು ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಂಭೀರ ಪರಿಸ್ಥಿತಿಯಲ್ಲಿ ಇರದ ಮತ್ತು ಹೊಸದಾಗಿ ದಾಖಲಾಗಿರುವ ರೋಗಿಗಳು ಇಚ್ಛೆಪಟ್ಟರೆ ಅವರನ್ನು ಹತ್ತಿರದ ಮತ್ತೊಂದು ಸರ್ಕಾರಿ ಆಸ್ಪತ್ರೆಗೆ ದಾಖಲಿಸುವ ಕೆಲಸವನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಧ್ವಜಾರೋಹಣ ನೆರವೇರಿಸದ ಮುಖ್ಯ ಶಿಕ್ಷಕಿ ಅಮಾನತು

ಶಿಕಾರಿಪುರ: ತಾಲ್ಲೂಕಿನ ಎಳನೀರುಕೊಪ್ಪ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸದ ಮುಖ್ಯ ಶಿಕ್ಷಕಿ ಲಲಿತಾ ಅವರನ್ನು ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಜಿ.ಎಸ್‌.ಶಶಿಧರ್ ಅಮಾನತು ಮಾಡಿದ್ದಾರೆ.

ಸ್ವಾತಂತ್ರ್ಯೋತ್ಸವ ದಿನದಂದು ಶಾಲೆಯಲ್ಲಿ ಧ್ವಜಾರೋಹಣ ನಡೆಸದಿರುವ ಬಗ್ಗೆ ಎಸ್‌ಡಿಎಂಸಿ ಅಧ್ಯಕ್ಷ ಪ್ರಕಾಶ್ ನಾಯ್ಕ, ಬಿಇಒಗೆ ದೂರು ನೀಡಿದ್ದರು.

ಧ್ವಜಕಟ್ಟೆ ಸರಿ ಇಲ್ಲದೇ ಇರುವುದರಿಂದ ಧ್ವಜಾರೋಹಣ ನಡೆಸಲು ಸಾಧ್ಯವಾಗಿಲ್ಲ ಎಂದು ಮುಖ್ಯ ಶಿಕ್ಷಕಿ, ಬಿಇಒಗೆ ಮಾಹಿತಿ ನೀಡಿದ್ದರು. ‘ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಧ್ವಜಕಟ್ಟೆ ಸುಸ್ಥಿತಿಯಲ್ಲಿರುವುದು ಕಂಡುಬಂದಿದೆ. ಹೀಗಿದ್ದರೂ ಧ್ವಜಾರೋಹಣ ನಡೆಸದೇ ಕರ್ತವ್ಯ ಲೋಪ ಎಸಗಿದ್ದಾರೆ. ಹೀಗಾಗಿ ಅಮಾನತು ಮಾಡಲಾಗಿದೆ’ ಎಂದು ಬಿಇಒ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಗರ್ಭಿಣಿಯರಾದ ಬಾಲಕಿಯರು: ಬಾಲಕರು ವಶಕ್ಕೆ

ಪ್ರಜಾವಾಣಿ ವಾರ್ತೆ

ಸರಗೂರು (ಮೈಸೂರು): ಅಪ್ರಾಪ್ತ ವಯಸ್ಸಿನ ಇಬ್ಬರು ಬಾಲಕಿಯರನ್ನು ಮದುವೆಯಾಗಿ ಗರ್ಭಿಣಿರನ್ನಾಗಿಸಿದ ಆರೋಪದ ಮೇರೆಗೆ ತಾಲ್ಲೂಕಿನ ಇಬ್ಬರು ಬಾಲಕರನ್ನು ಪಟ್ಟಣ ಪೊಲೀಸರು ಸೋಮವಾರ ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ಬಾಲಕರು- ಬಾಲಕಿಯರು ಮದುವೆಯಾಗಿ ಜೀವನ ನಡೆಸುತ್ತಿದ್ದರು. ಬಾಲಕಿಯರು ಗರ್ಭಿಣಿಯರಾಗಿದ್ದಾರೆಂಬ ವಿಷಯ ವೈದ್ಯರ ತಪಾಸಣೆಯಿಂದ ಗೊತ್ತಾದ ಬಳಿಕ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿತ್ತು. ಸಿಪಿಐ ಎಂ.ಲಕ್ಷ್ಮೀಕಾಂತ್, ಪಿಎಸ್‌ಐ ನಂದೀಶ್‌ಕುಮಾರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ಸೆ. 5ರಿಂದ ಶಾಲೆಗಳಲ್ಲಿ ‘ಇ–ಲೈಬ್ರರಿ’



ಮಧು ಬಂಗಾರಪ್ಪ

ಶಿವಮೊಗ್ಗ: ‘ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತಂದು ಅವರಲ್ಲಿ ಓದುವ ಹವ್ಯಾಸ ಬೆಳೆಸಲು ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಗ್ರಂಥಾಲಯ ಅಭಿವೃದ್ಧಿಪಡಿಸಲಾಗುತ್ತದೆ. ಇದರ ಜೊತೆಗೆ ಇ–ಲೈಬ್ರರಿ ಯೋಜನೆಯನ್ನೂ ಅನುಷ್ಠಾನಗೊಳಿಸಲಾಗುತ್ತಿದೆ’ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

‘ಇ-ಗ್ರಂಥಾಲಯದಲ್ಲಿ 40 ಲಕ್ಷಕ್ಕೂ ಹೆಚ್ಚು ಪ್ರಕಾರದ ಪುಸ್ತಕಗಳು ದೊರೆಯಲಿವೆ. ಇದರ ಸದಸ್ಯತ್ವವೂ ಉಚಿತವಾಗಿರಲಿದೆ. ಶಿಕ್ಷಕರ ದಿನಾಚರಣೆಯಂದು (ಸೆ.5) ಈ ಯೋಜನೆಗೆ ಚಾಲನೆ ನೀಡುತ್ತೇವೆ’ ಎಂದು ಸುದ್ದಿಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

‘ನಗರ ಪ್ರದೇಶದ ಮಕ್ಕಳಿಗೆ ಸಿಗುತ್ತಿರುವ ಶೈಕ್ಷಣಿಕ ಸವಲತ್ತು ಗ್ರಾಮೀಣ ಭಾಗದವರಿಗೂ ದೊರೆಯುವಂತಾಗಬೇಕು. ಇದಕ್ಕಾಗಿ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಎಲ್‌.ಕೆ.ಜಿ, ಯು.ಕೆ.ಜಿ ಆರಂಭಿಸಲು ಉದ್ದೇಶಿಸಲಾಗಿದೆ’ ಎಂದು ಹೇಳಿದರು.

‘ವಿದ್ಯುತ್ ಸಮಸ್ಯೆ: ಶೀಘ್ರ ಪರಿಹಾರ’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ಉಷ್ಣ ವಿದ್ಯುತ್ ಸ್ಥಾವರಗಳ ನಿರ್ವಹಣೆ ಕಾರ್ಯ ಮತ್ತು ಕಲ್ಲಿದ್ದಲಿನ ಪೂರೈಕೆ ಕೊರತೆಯಿಂದ ವಿದ್ಯುತ್ ಉತ್ಪಾದನೆ ಕಡಿಮೆಯಾಗಿದೆ. ಇನ್ನು 10 ದಿನಗಳಲ್ಲಿ ಎಲ್ಲವೂ ಸರಿಯಾಗಲಿದೆ’ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

‘ಸಾಮಾನ್ಯವಾಗಿ ಮಳೆಗಾಲದಲ್ಲಿ ಉಷ್ಣ ವಿದ್ಯುತ್ ಸ್ಥಾವರಗಳ ನಿರ್ವಹಣೆ ಕಾರ್ಯ ನಡೆಯುತ್ತದೆ. ಮಹಾರಾಷ್ಟ್ರದಲ್ಲಿ ಮಳೆ ಹೆಚ್ಚಾಗಿದ್ದರಿಂದ ಕಲ್ಲಿದ್ದಲು ಪೂರೈಕೆಯಲ್ಲಿ ತೊಂದರೆಯಾಗಿದೆ. ಬಂದಿರುವ ಕಲ್ಲಿದ್ದಲು ಮಳೆಯಲ್ಲಿ ತೊಯ್ದಿರುವುದರಿಂದಲೂ ಸಮಸ್ಯೆಯಾಗಿದೆ. ಆದ್ದರಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಹೇಳಿದರು.

‘ನಾಲ್ಕು ದಿನಗಳಿಂದ ದಕ್ಷಿಣ ಭಾರತದಲ್ಲಿ ಗಾಳಿ ಬೀಸುವುದು ಕಡಿಮೆಯಾಗಿ ಪವನ ವಿದ್ಯುತ್ ಉತ್ಪಾದನೆಯೂ ಕಡಿಮೆಯಾಗಿತ್ತು. ಈಗ ಗಾಳಿ ಬೀಸುತ್ತಿದ್ದು, ಪವನ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಸೌರ ವಿದ್ಯುತ್ ಉತ್ಪಾದನೆಯಲ್ಲಿ ಕರ್ನಾಟಕ ಮುಂದಿದೆ. ಸಬ್ ಸ್ಟೇಷನ್‌ಗಳಿಗೆ ನೇರವಾಗಿ ಸೌರ ವಿದ್ಯುತ್ ಪೂರೈಸುವ ಬಗ್ಗೆ ಚಿಂತನೆ ನಡೆಸಲಾಗಿದೆ’ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	111.46	4,403	11,599
ಹಾರಂಗಿ	2,859	2858.65	1,458	1,700
ಕಬಿನಿ	2284.00	2280.89	3,288	6,025
ಹೇಮಾವತಿ	2,922	2,915.45	2,729	4,150
ಲಿಂಗನಮಕ್ಕಿ	1,819	1,790.55	5,231	7,517.12
ಸೂಪಾ (ಮೀ)	564	546.56	4,158	5,223
ಮಾಣಿ	595	580.82	399	642
ತುಂಗಭದ್ರಾ	1,633	1,628.54	4,850	9,710
ಮಲಪ್ರಭಾ	2079.50	2,067.10	1,354	194
ಘಟಪ್ರಭಾ	2175	2,165.90	3,745	2,823
ಭದ್ರಾ	186	166.10	2,241	3,225
ಆಲಮಟ್ಟಿ (ಮೀ)	519.60	519.59	4,793	731
ನಾರಾಯಣಪುರ (ಮೀ)	492.25	491.77	00	9,479

* ನೆಲಮಟ್ಟದಿಂದ

ಉದ್ಯೋಗ ವಾಣಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಪ್ರಜಾವಾಣಿ ಬುಧವಾರ • ಆಗಸ್ಟ್ 16, 2023

ಅಭಿಮತ




❦ ಸುಭಾಷಿತ ❦

ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು.
-ತೀ.ನಂ.ಶ್ರೀ

ಮತ್ತೆ ಹಿಡಿತ ತಪ್ಪಿದ ಹಣದುಬ್ಬರ ಸರ್ಕಾರದ ನೆರವಿಲ್ಲದೆ ನಿಯಂತ್ರಣ ಕಷ್ಟ

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯು ಈಚೆಗೆ ನಡೆಯಿತು. ಸಭೆಯ ನಿರ್ಣಯಗಳ ಪೈಕಿ ಹೆಚ್ಚು ಗಮನ ಸೆಳೆದಿದ್ದು, ರೆಪೊ ದರದಲ್ಲಿ ಯಥಾಸ್ಥಿತಿ ಮುಂದುವರಿಸಿಕೊಂಡು ಹೋಗುವ ತೀರ್ಮಾನ ಮಾತ್ರವೇ ಅಲ್ಲದೆ, ಹಣದುಬ್ಬರ ದರದ ಅಂದಾಜನ್ನು ಹೆಚ್ಚಿಸಿದ್ದು ಕೂಡ ಒಂದು. ತರಕಾರಿಗಳ ಬೆಲೆಯಲ್ಲಿನ ಹೆಚ್ಚಳವು ಚಿಲ್ಲರೆ ಹಣದುಬ್ಬರದ ಒಟ್ಟು ಪ್ರಮಾಣವನ್ನು ಹೆಚ್ಚು ಮಾಡಬಹುದು ಎಂಬ ಆತಂಕವನ್ನು ಆರ್‌ಬಿಐ ವ್ಯಕ್ತಪಡಿಸಿತ್ತು. 2023–24ನೇ ಹಣಕಾಸು ವರ್ಷದ ಹಾಲಿ ತ್ರೈಮಾಸಿಕದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 6.2ಕ್ಕೆ ಹೆಚ್ಚಬಹುದು ಎಂದು ಆರ್‌ಬಿಐ ಅಂದಾಜಿಸಿತ್ತು ಕೂಡ. ಆದರೆ ಚಿಲ್ಲರೆ ಹಣದುಬ್ಬರ ದರವು ಜುಲೈ ತಿಂಗಳಲ್ಲಿ ಆರ್‌ಬಿಐ ಅಂದಾಜನ್ನು ಮೀರಿ ನಿಂತಿದೆ. ಜುಲೈನಲ್ಲಿ ಅದು ಶೇಕಡ 7.44ರಷ್ಟಾಗಿದೆ. ಇದು 15 ತಿಂಗಳ ಗರಿಷ್ಠ ಮಟ್ಟ. ಈ ಜಿಗಿತದ ನೇರ ಪರಿಣಾಮ ಅಂದರೆ, ಆರ್‌ಬಿಐ ಈ ವರ್ಷದಲ್ಲಿ ರೆಪೊ ದರವನ್ನು ತಗ್ಗಿಸುವ ಸಾಧ್ಯತೆ ಇಲ್ಲವೇ ಇಲ್ಲ ಎಂಬ ಸ್ಥಿತಿ ನಿರ್ಮಾಣ ಆಗಿರುವುದು. ಚಿಲ್ಲರೆ ಹಣದುಬ್ಬರ ಪ್ರಮಾಣದಲ್ಲಿನ ಏರಿಕೆಯು ಗ್ರಾಹಕರ ಜೇಬನ್ನು ನೇರವಾಗಿ ಸುಡುತ್ತಿರುತ್ತದೆ. ರೆಪೊ ದರದಲ್ಲಿ ಸದ್ಯಕ್ಕೆ ಯಾವ ಇಳಿಕೆಯೂ ಆಗುವುದಿಲ್ಲ ಎಂಬುದು ಸಾಲಗಾರರನ್ನು ಹಾಗೂ ಬಂಡವಾಳಕ್ಕಾಗಿ ಬ್ಯಾಂಕುಗಳನ್ನೇ ನೆಚ್ಚಿಕೊಂಡಿರುವ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮಗಳನ್ನು ಬಹುವಾಗಿ ಬಾಧಿಸುತ್ತದೆ. ಆರ್‌ಬಿಐ ಹಣಕಾಸು ನೀತಿಯನ್ನು ತುಸು ಸಡಿಲಗೊಳಿಸಿದರೆ, ಮಾರುಕಟ್ಟೆಯಲ್ಲಿ ಚಟುವಟಿಕೆಗಳು ಇನ್ನಷ್ಟು ಗರಿಗೆದರುತ್ತವೆ ಎಂಬ ನಿರೀಕ್ಷೆಯಲ್ಲಿ ಇರುವ ವರ್ತಕ ಸಮೂಹಕ್ಕೂ ಇದು ನಿರಾಶೆ ತರುತ್ತದೆ.



ಆರ್‌ಬಿಐ ಜೊತೆ ಸರ್ಕಾರ ಕೈಜೋಡಿಸದೆ ಇದ್ದಲ್ಲಿ, ಹಣದುಬ್ಬರ ಪ್ರಮಾಣವು ಮುಂದಿನ ತಿಂಗಳುಗಳಲ್ಲಿಯೂ ನಿಯಂತ್ರಣಕ್ಕೆ ಬರುವುದು ಅನುಮಾನ

ಜುಲೈ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಭಾರಿ ಹೆಚ್ಚಳ ಕಂಡಿರುವುದಕ್ಕೆ ಮುಖ್ಯ ಕಾರಣ ತರಕಾರಿ, ಸಂಬಾರ ಪದಾರ್ಥಗಳು ಹಾಗೂ ವಿವಿಧ ಧಾನ್ಯಗಳ ಬೆಲೆಯಲ್ಲಿ ಆಗಿರುವ ಏರಿಕೆ. ಇವನ್ನು ಹೊರತುಪಡಿಸಿದರೆ ಮಾಂಸ, ಮೊಟ್ಟೆ, ಹಣ್ಣುಗಳು, ಸಿದ್ಧಪಡಿಸಿದ ಊಟ, ತಿಂಡಿ ಹಾಗೂ ಸಿಹಿತಿನಿಸು ಮುಂತಾದ ಅಗತ್ಯ ಉತ್ಪನ್ನಗಳು, ಸೇವೆಗಳ ಬೆಲೆಯಲ್ಲಿ ಭಾರಿ ಏರಿಕೆ ಆಗಿಲ್ಲ. ಎಣ್ಣೆ ಹಾಗೂ ಕೊಬ್ಬಿನ ಅಂಶ ಹೆಚ್ಚಿರುವ ಉತ್ಪನ್ನಗಳ ಬೆಲೆಯಲ್ಲಿ ದೊಡ್ಡಮಟ್ಟದ ಇಳಿಕೆ ಕಂಡುಬಂದಿದೆ ಎಂಬುದು ಗಮನಾರ್ಹ. ಚಿಲ್ಲರೆ ಹಣದುಬ್ಬರ ದರವನ್ನು ಹೇಳುವ ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಆಹಾರ ವಸ್ತುಗಳಿಗೆ ಹೆಚ್ಚಿನ ಪ್ರಾಧಾನ್ಯ ಇರುವ ಕಾರಣ, ತರಕಾರಿ, ಧಾನ್ಯಗಳ ಬೆಲೆಯಲ್ಲಿ ಆಗುವ ಏರಿಕೆಯು ಒಟ್ಟು ಅಂಕಿ-ಅಂಶಗಳ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ದೇಶದಲ್ಲಿ ಚಿಲ್ಲರೆ ಹಣದುಬ್ಬರ ದರವನ್ನು ನಿಯಂತ್ರಣದಲ್ಲಿ ಇರಿಸುವ ಹೊಣೆ ಇರುವುದು ಆರ್‌ಬಿಐ ಮೇಲೆ. ಆದರೆ ಈ ಹೊಣೆ ನಿಭಾಯಿಸುವುದಕ್ಕಾಗಿ ಹಣಕಾಸು ವ್ಯವಸ್ಥೆಯಲ್ಲಿನ ಹಣದ ಹರಿವನ್ನು ಕಡಿಮೆ ಮಾಡಲು ಮುಂದಾಗುತ್ತದೆ. ಆದರೆ, ವಾಸ್ತವದಲ್ಲಿ ಆಹಾರ ವಸ್ತುಗಳ ಬೆಲೆ ಏರಿಕೆಯನ್ನು ತಡೆಯುವ ಪರಿಣಾಮಕಾರಿ ಅಸ್ತ್ರ ಆರ್‌ಬಿಐ ಬಳಿ ಇದ್ದಂತಿಲ್ಲ. ರೆಪೊ ದರ ಏರಿಕೆ ಅಥವಾ ನಗದು ಮೀಸಲು ಅನುಪಾತ (ಸಿಆರ್‌ಆರ್) ಹೆಚ್ಚಳದ ಮೂಲಕ ತರಕಾರಿ, ಧಾನ್ಯಗಳಂತಹ ಅವಶ್ಯಕ ವಸ್ತುಗಳ ಬೆಲೆ ನಿಯಂತ್ರಣ ಸಾಧ್ಯವಿಲ್ಲ.

ಜುಲೈನಲ್ಲಿ ಟೊಮೆಟೊ ಬೆಲೆ ಏರಿಕೆಯು ಬಹಳ ತೀವ್ರವಾಗಿತ್ತು. ಈಗ ಇದು ಕಡಿಮೆ ಆಗುತ್ತಿದೆ. ಟೊಮೆಟೊ ಬೆಲೆ ತೀರಾ ಹೆಚ್ಚಿದ್ದ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ದೇಶದ ಆಯ್ದ ಪ್ರದೇಶಗಳಲ್ಲಿ ಮಾತ್ರ ರಿಯಾಯಿತಿ ದರದಲ್ಲಿ ಟೊಮೆಟೊ ಮಾರಾಟ ಮಾಡಿತು. ಆಗಸ್ಟ್ ಕೊನೆಯ ವಾರದೊಳಗೆ ಈರುಳ್ಳಿ ಬೆಲೆಯು ಗಗನಮುಖಿ ಆಗಲಿದೆ ಎಂದು ಕೆಲವು ಮಾರುಕಟ್ಟೆ ಅಧ್ಯಯನ ವರದಿಗಳು ಅಂದಾಜು ಮಾಡಿವೆ. ಈರುಳ್ಳಿ ಬೆಲೆ ಏರಿಕೆ ಸಾಧ್ಯತೆಯನ್ನು ಗಮನದಲ್ಲಿ ಇರಿಸಿಕೊಂಡು ಕೇಂದ್ರ ಸರ್ಕಾರವು ತನ್ನ ದಾಸ್ತಾನಿನಲ್ಲಿ ಇರುವ ಈರುಳ್ಳಿಯನ್ನು ತಕ್ಷಣದಿಂದಲೇ ಮಾರುಕಟ್ಟೆಗೆ ಬಿಡುಗಡೆ ಮಾಡುವುದಾಗಿ ಹೇಳಿದೆ. ಆಗಸ್ಟ್‌ನಲ್ಲಿ ವಾಡಿಕೆಯಂತೆ ಮಳೆ ಆಗಿಲ್ಲ. ಇದರಿಂದಾಗಿಯೂ ತರಕಾರಿಗಳ ಬೆಲೆಯು ಹೆಚ್ಚಾಗಬಹುದು. ಜಾಗತಿಕ ಪೂರೈಕೆ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾದರೆ ಧಾನ್ಯಗಳ ಬೆಲೆಯ ಮೇಲೆ ಕೆಟ್ಟ ಪರಿಣಾಮ ಆಗಬಹುದು. ಇಂತಹ ಸಂದರ್ಭಗಳಲ್ಲಿ ಚಿಲ್ಲರೆ ಹಣದುಬ್ಬರವನ್ನು ತಗ್ಗಿಸುವ ಹೊಣೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚು ಹೊರಬೇಕು. ಇಲ್ಲಿ ಆರ್‌ಬಿಐ ತೆಗೆದುಕೊಳ್ಳಬಹುದಾದ ಕ್ರಮಗಳು ಅಲ್ಪ. ಸರ್ಕಾರಗಳು ಆರ್‌ಬಿಐ ಜೊತೆ ಕೈಜೋಡಿಸದೆ ಇದ್ದಲ್ಲಿ, ಹಣದುಬ್ಬರ ಪ್ರಮಾಣವು ಮುಂದಿನ ತಿಂಗಳುಗಳಲ್ಲಿಯೂ ನಿಯಂತ್ರಣಕ್ಕೆ ಬರುವುದು ಅನುಮಾನ.

ದಿನದ ಟ್ವೀಟ್

ನಿಷೇಧಿತ ಪದಗಳ ಯಾದಿ ಪ್ರಕಟಿಸಿ



ಸರ್ಕಾರವು ಕಾಲಕ್ಕೆ ತಕ್ಕಂತೆ ನಿಷೇಧಿತ ಪದಗಳು, ಗಾದೆಗಳು ಯಾವುವು ಎಂಬುದನ್ನು ಅಧಿಕೃತವಾಗಿ ಪ್ರಕಟಿಸಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಅದನ್ನು ಪರಾಮರ್ಶಿಸಿ ಅನುಸರಿಸಿದರೆ ಯಾರಿಗೂ ನೋವಾಗದು ಮತ್ತು ಯಾರೂ ಅನವಶ್ಯಕವಾಗಿ ಕಷ್ಟಕ್ಕೆ ಸಿಲುಕಬೇಕಾಗಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು.

ರೋಹಿತ್ ಸಿಂಹ, ಎಂಜಿನಿಯರ್


ಹಣದಿಂದ ಮಾಡಲೇಬೇಕಾದವು



ಹಣವು ವಿಸ್ತೃತ ನೆಲೆಯಲ್ಲಿ ಮೂರು ಉದ್ದೇಶಗಳನ್ನು ಹೊಂದಿರುತ್ತದೆ. ಖರ್ಚು ಮಾಡುವುದು, ಉಳಿತಾಯ ಮಾಡುವುದು ಹಾಗೂ ದಾನ ಮಾಡುವುದು. ಪ್ರತಿ ವ್ಯಕ್ತಿಯ ವಿಚಾರದಲ್ಲಿ ಈ ಮೂರರ ಪ್ರಮಾಣದಲ್ಲಿ ವ್ಯತ್ಯಾಸ ಇರಬಹುದು. ಆದರೆ ಈ ಮೂರೂ ಮಾಡಲೇಬೇಕಾದವು.

ಡಿ. ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ



ನನಗೆ ಬುದ್ಧಿಭ್ರಮಣೆ ಆಗಿದೆ ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದ್ದಾರೆ. ನನ್ನ ಬಗ್ಗೆ ಅವರು ಚಿಂತಿಸುವುದು ಬೇಡ. ನಮ್ಮ ಕುಟುಂಬದಲ್ಲೇ ಸಾಕಷ್ಟು ಜನ ವೈದ್ಯರಿದ್ದಾರೆ. ನನಗೆ ಬುದ್ಧಿಭ್ರಮಣೆ ಆಗಿದ್ದರೆ ನಾನು ತಪಾಸಣೆ ಮಾಡಿಸಿಕೊಳ್ಳುತ್ತೇನೆ. ಆದರೆ, ಮತ ಹಾಕಿದ ಮತದಾರ ಪ್ರಭುಗಳ ಬುದ್ಧಿಗೆ ಮಣ್ಣೆರಚುವ ರೀತಿಯಲ್ಲಿ ಇವರು ಭ್ರಷ್ಟಾಚಾರ ಮಾಡುತ್ತಿದ್ದಾರೆ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 16-8-1998

● ಅಧಿಕಾರಕ್ಕಾಗಿ ರಾಜಿ ಇಲ್ಲ ವಾಜಪೇಯಿ ಘೋಷಣೆ

ನವದೆಹಲಿ, ಆ. 15– ಅಧಿಕಾರದಲ್ಲಿ ಉಳಿಯುವ ಒಂದೇ ಉದ್ದೇಶಕ್ಕಾಗಿ ತಮ್ಮ ನೀತಿ ಮತ್ತು ವಿಚಾರಗಳಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲವೆಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಐತಿಹಾಸಿಕ ಕೆಂಪು ಕೋಟೆಯ ಮೇಲೆ ನಿಂತು ರಾಷ್ಟ್ರದ 51ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಮಾಡಿದ ತಮ್ಮ ಚೊಚ್ಚಲ ಭಾಷಣದಲ್ಲಿ ಘೋಷಿಸಿದರು.

ತಾವು ಬದುಕಿನುದ್ದಕ್ಕೂ ನಂಬಿಕೊಂಡು ಬಂದ ವಿಚಾರಗಳನ್ನು ಪ್ರಸ್ತಾಪಿಸಿದ ವಾಜಪೇಯಿ ಅವರು, ‘ಯಾವುದೇ ಒತ್ತಡಗಳಿಗೆ ಒಳಗಾಗಿ ಮತ್ತು ಅಧಿಕಾರಕ್ಕಾಗಿ ನಾವು ನಂಬಿಕೊಂಡು ಬಂದಿರುವ ಜೀವನ ಮೌಲ್ಯಗಳ ಬಗೆಗೆ ರಾಜಿ ಮಾಡಿಕೊಳ್ಳುವುದಿಲ್ಲ. ಅಧಿಕಾರಕ್ಕಾಗಿ ಯಾರ ಮುಂದೆಯೂ ತಲೆ ಬಾಗುವುದಿಲ್ಲ. ಆದರೆ, ನಮ್ಮ ಮೇಲಿನ ಜವಾಬ್ದಾರಿಯನ್ನು ನಿರ್ವಹಿಸಲು ಎಂದೂ ಹಿಂದೆ ಬೀಳುವುದಿಲ್ಲ’ ಎಂದರು.

ಯಾವುದೇ ಪ್ರಮುಖ ವಿವಾದಗಳು ಮತ್ತು ಪ್ರಮುಖ ವಿಷಯಗಳ ಬಗೆಗೆ ತೀರ್ಮಾನ ಕೈಗೊಳ್ಳಬೇಕಾದರೆ ಒಮ್ಮತ ಅಭಿಪ್ರಾಯಕ್ಕೆ ಆದ್ಯತೆ ನೀಡುವುದಾಗಿ ನುಡಿದ ಅವರು, ತಮ್ಮ ಈ ಐದು ತಿಂಗಳ ಆಡಳಿತದಲ್ಲಿ ಇದನ್ನು ನಡೆಸಿಕೊಂಡು ಬಂದಿರುವುದಾಗಿ ಹೇಳಿ ಕಾವೇರಿ ಸಂಧಾನವನ್ನು ಉಲ್ಲೇಖಿಸಿದರು.

● ಸೌಹಾರ್ದಕ್ಕಾಗಿ ಕಾವೇರಿ ಒಪ್ಪಂದ– ಜೆ.ಎಚ್. ಪಟೇಲ್

ಬೆಂಗಳೂರು, ಆ. 15– ‘ನಾವು ನೆರೆ–ನೆರೆಯಾಗಿಯೇ ಬಾಳಬೇಕೆ ಹೊರತು ನೆರೆ–ಹೊರೆಯಾಗಿ ಬಾಳಬಾರದು. ಸೌಹಾರ್ದಯುತವಾಗಿ ಬಾಳಬೇಕು ಎನ್ನುವ ದೃಷ್ಟಿಯಲ್ಲಿ ಹಾಗೂ ರೈತರ ಹಿತದೃಷ್ಟಿಯಲ್ಲಿ ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ಪ್ರಧಾನಿ ನೇತೃತ್ವದ ಪ್ರಾಧಿಕಾರ ರಚನೆಗೆ ಒಪ್ಪಿದ್ದೇವೆ’ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ಹೇಳಿದರು.

ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಧ್ವಜಾರೋಹಣ ಮಾಡಿ ಮಾತನಾಡಿದ ಅವರು, ‘ನಮ್ಮ ಮತ್ತು ನೆರೆಹೊರೆಯ ರಾಜ್ಯಗಳಾದ ತಮಿಳುನಾಡು, ಕೇರಳ ಮತ್ತು ಪುದುಚೇರಿ ನಡುವೆ ಕಳೆದ ಒಂದು ದಶಕದಿಂದ ನನೆಗುದಿಗೆ ಬಿದ್ದ ಕಾವೇರಿ ಜಲ ವಿವಾದವು ಜನರ ಮನಸ್ಸನ್ನು ಭಾವೋದ್ರೇಕಗೊಳಿಸಿ ಗಲಭೆ, ಆಸ್ತಿ–ಪಾಸ್ತಿಗಳ ನಷ್ಟ ಉಂಟು ಮಾಡುತ್ತಿದ್ದ ಘಟನೆಗಳು ನಡೆದವು. ಈ ವಿಚಾರದಲ್ಲಿ ಹಲವೊಮ್ಮೆ ರಾಜಕೀಯ ಕಾರಣಕ್ಕಾಗಿಯೇ ರಾಡಿ ಎಬ್ಬಿಸಿದಂಥ ಪರಿಪಾಟ ನಡೆದುಬಂದಿತ್ತು. ಆದರೆ, ಅದಕ್ಕೆ ಕೊನೆ ಎಂದು’ ಎಂದ ಅವರು, ‘ಪ್ರಾಧಿಕಾರ ರಚನೆಯ ನಿಲುವಿನೊಂದಿಗೆ ಹೊಸ ವಾತಾವರಣ ಸೃಷ್ಟಿಯಾಗಿದೆ’ ಎಂದರು.

ಅಂಗಿಗೆ ಮಸಿ ಬಿದ್ದರೂ ಮಸಿಯ ಮೇಲೆ ಅಂಗಿ ಬಿದ್ದರೂ ಮಾನಗೆಡುವುದು ಬಿಳಿ ಅಂಗಿಯದೇ!

ಮೂರೇ ತಿಂಗಳಿಗೆ ಅಸಹನೆಯ ಸಿಡಿಲು



ಗತಿಬಿಂಬ

ವೈ.ಗ. ಜಗದೀಶ್

ಸಿದ್ದರಾಮಯ್ಯನವರು 2013ರಲ್ಲಿ ಮುಖ್ಯಮಂತ್ರಿಯಾದಾಗ ಪ್ರವರ್ಧಮಾನದಲ್ಲಿದ್ದ ಅವರ ಮಗ ರಾಕೇಶ್, ಮುಖ್ಯಮಂತ್ರಿ ಸಚಿವಾಲಯದ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿದ್ದರು. ಕಡತವೊಂದನ್ನು ಅಪ್ಪನ ಬಳಿ ತೆಗೆದುಕೊಂಡ ಹೋದ ರಾಕೇಶ್, ಅದಕ್ಕೆ ಸಹಿ ಹಾಕುವಂತೆ ಅವರ ಮುಂದೆ ಹಿಡಿದರು. ಅಧಿಕಾರ ವರ್ತುಲದೊಳಗೆ ಕುಟುಂಬಸ್ಥರನ್ನು ಬಿಟ್ಟುಕೊಳ್ಳುವುದನ್ನು ವಿರೋಧಿಸುತ್ತಿದ್ದ ಸಿದ್ದರಾಮಯ್ಯ, ರಾಕೇಶ್ ಕಡೆ ದುರುಗುಟ್ಟಿ ನೋಡಿ ಕಡತ ಎಸೆದರು. ಕಾಗದಗಳೆಲ್ಲ ಚೆಲ್ಲಾಪಿಲ್ಲಿ ಹರಿದಾಡಿದವು. ಇನ್ನಾವತ್ತೂ ಯಾವುದೇ ಕಡತವನ್ನೂ ತರಬಾರದು ಎಂದು ಕಟ್ಟಪ್ಪಣೆ ವಿಧಿಸಿ ಗದರಿ ಕಳುಹಿಸಿದ್ದರು. ಆ ಬಳಿಕ, ರಾಕೇಶ್ ಕಡತಗಳಿಗೆ ಸಹಿ ಬೀಳುತ್ತಿತ್ತೋ ಇಲ್ಲವೋ ಎಂಬುದು ಬಹಿರಂಗ ಆಗಿಲ್ಲ.

ಈಗ ಮತ್ತೆ ಸಿದ್ದರಾಮಯ್ಯ ಮುಖ್ಯಮಂತ್ರಿ. ರಾಕೇಶ್ ಅವರಷ್ಟು ಪ್ರಭಾವಿಯಲ್ಲದ, ಮುನ್ನುಗ್ಗುವ ಛಾತಿ ಇಲ್ಲದ ಮತ್ತೊಬ್ಬ ಮಗ ಡಾ.ಯತೀಂದ್ರ ಮೇಲೆ ಈಗ ಎಲ್ಲರ ಕಣ್ಣು ಬಿದ್ದಿದೆ. ವಿರೋಧ ಪಕ್ಷದವರು ಯತೀಂದ್ರ ಮೇಲೆ ಮುಗಿಬಿದ್ದಿದ್ದಾರೆ. ಸಿದ್ದರಾಮಯ್ಯನವರು ಪ್ರತಿನಿಧಿಸುವ ವರುಣ ಕ್ಷೇತ್ರದ ಕಾರ್ಯಕರ್ತರ ಕೆಲಸವನ್ನಷ್ಟೇ ಯತೀಂದ್ರ ಮಾಡುತ್ತಿದ್ದಾರೆ ಎಂಬುದು ಮುಖ್ಯಮಂತ್ರಿ ಆಪ್ತವಲಯದ ಅಂಬೋಣ. ರಾಕೇಶ್ ತಂದಿದ್ದ ಕಡತ ಎಸೆದಂತೆ ಯತೀಂದ್ರ ಅವರ ಕಡತವನ್ನು ಸಿದ್ದರಾಮಯ್ಯ ಎಸೆದಿದ್ದಾರೋ ಅಥವಾ ಅವರೇ ತರಿಸಿಕೊಂಡು ಸಹಿ ಹಾಕುತ್ತಿದ್ದಾರೋ ಎಂಬುದು ರಹಸ್ಯ.

ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಕಾಂಗ್ರೆಸ್ ಹೋರಾಡಿತ್ತು. ಗುತ್ತಿಗೆದಾರರಿಂದ ಶೇಕಡ 40ರಷ್ಟು ಕಮಿಷನ್ ವಸೂಲಿ ಮಾಡಲಾಗುತ್ತಿದೆ ಎಂದು ಆರೋಪಿಸಿ (ಆಗ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದರು) ಪ್ರಧಾನಿ ಕಚೇರಿಗೆ ಸಲ್ಲಿಕೆಯಾಗಿದ್ದ ದೂರಿನ ಅಂಚು ಹಿಡಿದಿದ್ದ ಕಾಂಗ್ರೆಸ್ ನಾಯಕರು, ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದರು. ಹಾಗಂತ, ಬೊಮ್ಮಾಯಿ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದ ಎಲ್ಲರೂ ಸುಭಗರೇನಲ್ಲ. ಆ ದಿನಗಳಲ್ಲಿ ‘ಪೇ ಸಿಎಂ’ ಅಭಿಯಾನದ ನೇತೃತ್ವವನ್ನು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ವಹಿಸಿಕೊಂಡಿದ್ದರು. ಶೇ 40ರ ಲಂಚದ ದುಷ್ಪರಿಣಾಮಗಳನ್ನು ಅನುಭವಿಸಿದ್ದ ಜನರಿಗೆ ಈ ಅಭಿಯಾನಗಳು ಗಾಢವಾಗಿ ತಟ್ಟಿತ್ತು. ತಮ್ಮ ಸರ್ಕಾರದಲ್ಲಿ ಅಂಥದ್ದೇನೂ ನಡೆದೇ ಇಲ್ಲ; ತಮ್ಮಷ್ಟು ಪ್ರಾಮಾಣಿಕರು ಜಗತ್ತಿನಲ್ಲೇ ಇಲ್ಲವೆಂಬ ರೀತಿಯೊಳಗೆ ಬಿಜೆಪಿ ನಾಯಕರು ಈಗ ಕಾಂಗ್ರೆಸ್ ನೇತೃತ್ವದ ಸರ್ಕಾರದ ವಿರುದ್ಧ ತಿರುಗಿಬಿದ್ದಿದ್ದಾರೆ.

ಭ್ರಷ್ಟಾಚಾರವನ್ನೇ ಮುಂದಿಟ್ಟು ಚುನಾವಣೆ ಎದುರಿಸಿ ಗೆದ್ದು, ಅಧಿಕಾರ ಹಿಡಿದು ಮೂರು ತಿಂಗಳು ಕಳೆಯುವಷ್ಟರಲ್ಲೇ ಭ್ರಷ್ಟಾಚಾರದ ಕೆಸರು ಕಾಂಗ್ರೆಸ್‌ಗೂ ಮೆತ್ತಿಕೊಂಡಿದೆ. ಸಿದ್ದರಾಮಯ್ಯನವರ ಆಪ್ತ ಬಣದಲ್ಲಿ ಗುರುತಿಸಿಕೊಂಡು, ಅವರ ಪರ ವಕಾಲತ್ತು ವಹಿಸುವಲ್ಲಿ ಮುಂಚೂಣಿಯಲ್ಲಿರುತ್ತಿದ್ದ ಯಲಬುರ್ಗಾದ ಕಾಂಗ್ರೆಸ್ ಶಾಸಕ ಬಸವರಾಜ ರಾಯರಡ್ಡಿ ಇಂತಹದೇ ಮಾತನಾಡಿದ್ದಾರೆ. ‘ಭ್ರಷ್ಟಾಚಾರದ ವಿಷಯದಲ್ಲಿ ಕರ್ನಾಟಕ ಬ್ರ್ಯಾಂಡ್ ಆಗುತ್ತಿದ್ದು, ಇದು ಒಳ್ಳೆಯ ಬೆಳವಣಿಗೆಯಲ್ಲ. ಇದನ್ನು ತಡೆಯಲು ಮುಖ್ಯಮಂತ್ರಿ ಕ್ರಮ ವಹಿಸಬೇಕು. ಹಿಂದೆ ಬಿಜೆಪಿ ಆಡಳಿತವಿದ್ದಾಗ ಗುತ್ತಿಗೆದಾರರು ಶೇ 40ರಷ್ಟು ಕಮಿಷನ್ ಆರೋಪ ಮಾಡಿದ್ದರು. ಈಗ ಶೇ 15ರಷ್ಟು ಕಮಿಷನ್ ಎಂದು ಆರೋಪಿಸುತ್ತಿದ್ದಾರೆ. ಆಗ ನಾವು ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡಿದ್ದೆವು. ಈಗ ಅವರು ನಮ್ಮ ಪಕ್ಷವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಹೀಗಾಗಿ ಕರ್ನಾಟಕಕ್ಕೆ ಕೆಟ್ಟ ಹೆಸರು ಬರುತ್ತಿದೆ’ ಎಂಬುದು ಅವರ ವಾದ.

ವರ್ಗಾವಣೆ, ಕಮಿಷನ್ ವಿಚಾರ ಈಗ ದೊಡ್ಡ ಸದ್ದು ಮಾಡುತ್ತಿದೆ. ಅಧಿಕಾರ ಹಿಡಿದ ಮೂರೇ ತಿಂಗಳಲ್ಲಿ ಇಂತಹದೊಂದು ಆಪಾದನೆಗೆ ಸರ್ಕಾರ ಗುರಿಯಾಗಿರುವುದು ಸಮರ್ಥನೀಯವಲ್ಲ. ಹಾಗಂತ, ಸಿದ್ದರಾಮಯ್ಯನವರ ಬಗ್ಗೆ, ಅವರ ಸಚಿವಾಲಯದ ಬಗ್ಗೆ ಶಾಸಕರ ತಕರಾರಿಲ್ಲ. ಆಪ್ತ ಬಣದಲ್ಲಿ ಗುರುತಿಸಿಕೊಂಡ ಕೆಲವರು, ಕೆಲಸ ಮಾಡಿಸುವುದಾಗಿ ವಾಗ್ದಾನ ಮಾಡಿಸುವವರು ಸರ್ಕಾರಕ್ಕೆ ಕೆಟ್ಟ ಹೆಸರು ತರುತ್ತಿರುವುದು ಸುಳ್ಳಲ್ಲ. ಅಂಗಿಗೆ ಮಸಿ ಬಿದ್ದರೂ ಮಸಿಯ ಮೇಲೆ ಅಂಗಿ ಬಿದ್ದರೂ ಮಾನಗೆಡುವುದು ಬಿಳಿ ಅಂಗಿಯದೇ. ಈ ಅರಿವು ಅಧಿಕಾರಸ್ಥರಿಗೆ ಇರಬೇಕು.

ವರ್ಗಾವಣೆ ವಿಷಯದಲ್ಲಿ ತಮ್ಮ ಶಿಫಾರಸು ಪತ್ರಗಳಿಗೆ ಕಿಮ್ಮತ್ತಿಲ್ಲ ಎಂದು ಶಾಸಕರು ದೂರಿದ್ದಾರೆ. ಹಳಿ ತಪ್ಪಿದ ಆಡಳಿತವನ್ನು ಸರಿದಾರಿಗೆ ತರಬೇಕಾದರೆ ದಕ್ಷ, ಪ್ರಾಮಾಣಿಕ ಅಧಿಕಾರಿಗಳನ್ನು ಆಯಕಟ್ಟಿನ ಜಾಗಕ್ಕೆ ತಂದು ಕೂರಿಸಬೇಕಾದುದು ಅಧಿಕಾರಕ್ಕೆ ಬಂದ ಸರ್ಕಾರವೊಂದು ಮಾಡಲೇಬೇಕಾದ ಮೊದಲ ಕೆಲಸ. ಆಡಳಿತಾತ್ಮಕ ವಿಷಯದಲ್ಲಿ, ಶಾಸಕರು ಹಸ್ತಕ್ಷೇಪ ಮಾಡಿದರೆ ಉತ್ತಮ ಆಡಳಿತವೆಂಬುದು ಲೊಳಲೊಟ್ಟೆಯಾಗುತ್ತದೆ. ವರ್ಗಾವಣೆ ಎಂಬುದು ಜಾತಿ–ಧರ್ಮದ ಹೊರತಾಗಿ, ನಿಷ್ಪಕ್ಷಪಾತವಾಗಿ ನಡೆದಾಗಲಷ್ಟೇ ಆಡಳಿತ ಸರಿದಾರಿಗೆ ಬರಬಹುದು. ಆದರೆ, ಅಧಿಕಾರದ ಚುಕ್ಕಾಣಿಯನ್ನು ಕಾಂಗ್ರೆಸ್ ಹಿಡಿದ ಬಳಿಕ, ಕೆಲವು ಆಯಕಟ್ಟಿನ ಜಾಗಕ್ಕೆ ಬಂದವರು ಹಾಗೂ ಐದಾರು ಇಲಾಖೆಗಳ ಉಸ್ತುವಾರಿ ಹೊತ್ತಿದ್ದ ಕಳಂಕಿತರು ಅದೇ ಹುದ್ದೆಯಲ್ಲಿ ಮುಂದುವರಿದಿರುವುದನ್ನು ನೋಡಿದರೆ, ಉತ್ತಮ ಆಡಳಿತಕ್ಕಾಗಿ ವರ್ಗಾವಣೆ ನಡೆದಿದೆ ಎಂದು ಭಾವಿಸುವಂತೆ ಇಲ್ಲ.



‘ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಕ್ಕೆ ಬಂದ ಅಧಿಕಾರಿಗಳು ತಮ್ಮ ಮಾತು ಕೇಳುತ್ತಿಲ್ಲ; ಅವರಲ್ಲಿ ಬಹುತೇಕರು ಕೋಮುವಾದಿಗಳು, ಅಸೂಕ್ಷ್ಮ ಮನಸ್ಸಿನವರು. ಅವರನ್ನಷ್ಟೇ ಬದಲಿಸಿ ಎಂದು ಕೇಳುತ್ತಿದ್ದೇವೆ’ ಎಂಬುದು ಆಡಳಿತ ಪಕ್ಷದ ಶಾಸಕರ ಬೇಡಿಕೆ. ಅಧಿಕಾರದಲ್ಲಿದ್ದ ಪಕ್ಷದ ಸಿದ್ಧಾಂತ, ನೀತಿ–ನಿಲುವಿಗೆ ತಕ್ಕಂತೆ ಕೆಲವು ಅಧಿಕಾರಿಗಳು ವರ್ತಿಸುವುದು ಸಾಮಾನ್ಯ. ಆಡಳಿತ ಪಕ್ಷ ಬದಲಾದಂತೆ ಅಧಿಕಾರಿಗಳೂ ತಮ್ಮ ಧೋರಣೆ ಬದಲಿಸಿಕೊಳ್ಳುತ್ತಿದ್ದರು. ಕೇಂದ್ರ–ರಾಜ್ಯದಲ್ಲಿ ಬಿಜೆಪಿ ಅಧಿಕಾರ ನಡೆಸಲು ಆರಂಭಿಸಿದ ಮೇಲೆ ಪರಿಸ್ಥಿತಿ ಬದಲಾದಂತಿದೆ. ಸಿದ್ಧಾಂತ, ನಂಬಿಕೆಯನ್ನು ಬದಿಗಿಟ್ಟು ಅಧಿಕಾರಿಗಳಂತೆ ವರ್ತಿಸುತ್ತಿದ್ದ ಬಹುತೇಕರು ತಮ್ಮೊಳಗಿದ್ದ ಜಾತಿವಾದಿ, ಕೋಮುವಾದಿ ಭಾವನೆಯನ್ನು ನಿರ್ಲಜ್ಜೆಯಿಂದ ಪ್ರದರ್ಶಿಸಿದ್ದೂ ಇದೆ. ಆರ್‌ಎಸ್‌ಎಸ್, ಬಿಜೆಪಿಯ ಕೆಲವು ಕಟ್ಟಾಳುಗಳಿಗಿಂತ ತೀವ್ರ ಕೋಮುವಾದಿಗಳಾಗಿ ಆಡಳಿತ ನಡೆಸಿದ್ದನ್ನು ನೋಡಿದ್ದೇವೆ. ಅಧಿಕಾರಿಗಳಲ್ಲಿ ಬೇರೂರಿರುವ ಈ ಅಪಾಯಕಾರಿ ಮನಃಸ್ಥಿತಿಯನ್ನು ಸರ್ಕಾರ ಬದಲಿಸಬೇಕಿದೆ. ಇಲ್ಲದಿದ್ದರೆ, ಸರ್ವ ಜನಾಂಗದ ಶಾಂತಿಯ ತೋಟವನ್ನು ಉಳಿಸುವ ಕಾಂಗ್ರೆಸ್ ಕನಸು ನನಸಾಗದು. ಅಧಿಕಾರಿಗಳು ಈ ರೀತಿ ಇದ್ದಾರೆ ಎಂಬ ಕಾರಣಕ್ಕೆ, ತಾವು ಹೇಳಿದ ಅಧಿಕಾರಿಗಳನ್ನು ಹಾಕಿಕೊಡಿ ಎಂದು ಶಾಸಕರು ಕೇಳುತ್ತಿರುವುದು ನಿಜವಾದರೆ, ಸರ್ಕಾರ ಆ ಕೆಲಸವನ್ನು ಮೊದಲು ಮಾಡಬೇಕಿದೆ.

ಮುಗಿದ ಕಾಮಗಾರಿಗೆ ಕಮಿಷನ್, ವರ್ಗಾವಣೆಯಲ್ಲಿ ದೊಡ್ಡ ಮಟ್ಟದ ಲಂಚ ನಡೆಯುತ್ತಿದೆ ಎಂಬ ಆರೋಪದ ಆಚೆಗೆ ಸತ್ಯವಿದೆ. ಆ ಸತ್ಯವೇನೆಂಬುದು ಆಡಳಿತಾರೂಢರಿಗೆ ಗೊತ್ತಿಲ್ಲದ ಸಂಗತಿಯಲ್ಲ.

‘ಭ್ರಷ್ಟ ರಾಜಕಾರಣಿಗಳು ಎಂದು ಬರೆಯಬೇಕಿಲ್ಲ; ರಾಜಕಾರಣಿಗಳೆಂದರೆ ಭ್ರಷ್ಟರು’ ಎಂದು ಮುಖ್ಯಮಂತ್ರಿಯಾಗಿದ್ದ ಜೆ.ಎಚ್. ಪಟೇಲ್ ಹೇಳುತ್ತಿದ್ದರು. ನಾಲ್ಕು ಗೋಡೆಗಳ ಮಧ್ಯೆ ನಡೆಯುವ ವ್ಯವಹಾರ ಬೀದಿಯಲ್ಲಿ ಸದ್ದು ಮಾಡತೊಡಗಿದರೆ, ಅದು ವಿಪರೀತ ಎನ್ನುವ ಮಟ್ಟಕ್ಕೆ ಹೋಗಿದೆ ಎಂದರ್ಥ. ಅಧಿಕಾರಿಗಳು, ಗುತ್ತಿಗೆದಾರರನ್ನು ಖಾಸಗಿಯಾಗಿ ಕರೆಸಿಕೊಂಡು ವಾಚು, ಪೆನ್ನು, ಬಳೆ, ಮೊಬೈಲ್, ಉಂಗುರ ಎಲ್ಲವನ್ನೂ ಹೊರಗಿರಿಸಿ ‘ವ್ಯಾವಹಾರಿಕ’ ಮಾತುಕತೆಗಳನ್ನು ನಡೆಸುವ ಸಚಿವರು ಈಗಲಾದರೂ ಎಚ್ಚರವಾಗಬೇಕಿದೆ. ಇಲ್ಲದಿದ್ದರೆ, ಮತ್ತೆ ‘ಪೇ ಸಿಎಂ, ಪೇ ಡಿಸಿಎಂ’ ಘೋಷಣೆಗಳಿಗೆ ಬಲ ಬರಲಿದೆ.

ಒಂದೂರಿನ ದೋಣಿಗಂಡಿಯಲ್ಲಿ ಅಂಬಿಗನಿದ್ದ. ಒಂದು ಸರ್ತಿ ಹೊಳೆ ದಾಟಿಸಿದರೆ ₹ 2, ಎರಡೂ ಕಡೆಗಾದರೆ ₹ 3 ಪಡೆಯುತ್ತಿದ್ದ. ಒಂದು ಸರ್ತಿಗೆ ಇಷ್ಟು ದುಡ್ಡು ತೆಗೆದುಕೊಳ್ಳುತ್ತಾನೆ ಎಂದು ಜನ ಬೈದುಕೊಳ್ಳುತ್ತಲೇ, ನಿರ್ವಾಹವಿಲ್ಲದೇ ದೋಣಿ ಏರುತ್ತಿದ್ದರು. ಆತ ತೀರಿಕೊಂಡ ಬಳಿಕ ಅವನ ಮಗ ದೋಣಿಯ ಉಸ್ತುವಾರಿ ವಹಿಸಿಕೊಂಡ. ಒಂದು ಸರ್ತಿಗೆ ₹ 3, ಎರಡೂ ಕಡೆಗಾದರೆ ₹ 5 ನಿಗದಿ ಮಾಡಿದ. ಹಿಂದೆ, ಆತನ ಅಪ್ಪನನ್ನು ಬೈಯ್ಯುತ್ತಿದ್ದವರು, ಇವ್ನ ಅಪ್ಪನೇ ಒಳ್ಳೆಯವನಿದ್ದ; ಕಡಿಮೆ ರೇಟು ತೆಗೆದುಕೊಳ್ಳುತ್ತಿದ್ದ. ಇವ ಬಂದ ಮೇಲೆ ಬದುಕೇ ದುಬಾರಿಯಾಯ್ತು ಎಂದು ಮಗನನ್ನು ಬೈಯ್ಯಲಾರಂಭಿಸಿದರು. ಈ ಕತೆ ಎಲ್ಲ ಕಾಲಕ್ಕೂ ಸಲ್ಲದಿರಲಿ; ಬದುಕಿನ ಬವಣೆ ಕಡಿಮೆಯಾಗಲಿ.

ಚುರುಮುರಿ



ಡೇಂಜರ್ ಡೇಂಜರ್!

● ಗುರು ಪಿ.ಎಸ್.

‘ನನ್ನ ಹುಟ್ಟುಗುಣ ಅದು ಅಹಂಕಾರ, ಅದ ಕೇಳುವುದು ನಿಮ್ಮ ಗ್ರಹಚಾರ...’ ಎಂದು ಹಾಡುತ್ತಾ ಬಂದ ಪೊಲಿಟಿಷಿಯನ್ ಮುದ್ದಣ್ಣ.

‘ಡೇಂಜರ್, ಫಾರ್ಟಿ ಟು ಫಿಫ್ಟಿ, ಡೇಂಜರ್...’ ಹಾಡು ಮುಂದುವರಿಸಿದ ವಿಜಿ.

‘ಅಯ್ಯೇ... ನಿಮಗೂ ಈ ಹಾಡು ಗೊತ್ತುಂಟು...’ ಅಚ್ಚರಿ ಮತ್ತು ಖುಷಿಯಿಂದ ಕೇಳಿದ ಮುದ್ದಣ್ಣ.

‘ಅದು ಫೇಮಸ್ ಹಾಡಲ್ವ, ಎಲ್ಲರಿಗೂ ಗೊತ್ತು ಬಿಡು ಮುದ್ದಣ್ಣ...’

‘ಆದ್ರೂ ಸಾರ್, ನೀವು ಎಲ್ಲ ಏಜ್‌ಗಳ ಲೈನ್ ಬಿಟ್ಟು, ಫಾರ್ಟಿ ಟು ಫಿಫ್ಟೀ ಅಂತಾ ಮಾತ್ರ ಹೇಳಿದ್ರಲ್ಲ, ನನ್ನ ವಯಸ್ಸು 40ರಿಂದ 50 ವರ್ಷದೊಳಗಿದೆ ಅಂತಾ ಅರ್ಥಾನಾ’ ನಗುತ್ತಾ ಕೇಳಿದ ಮುದ್ದಣ್ಣ.

‘ಅಯ್ಯೋ ಹಾಗಲ್ಲ, ಅದು ಕಮಿಷನ್ ವಿಷಯ. ಫಾರ್ಟಿ ಪರ್ಸೆಂಟ್‌ನಿಂದ ಏನೇನು ಡೇಂಜರ್ ಆಯ್ತಂತ ನಾವೆಲ್ಲರೂ ನೋಡಿದೀವಿ.. ನೀನು ಫಿಫ್ಟಿ ಪರ್ಸೆಂಟ್ ಕಡೆಗೆ ಹೋಗ್ತಿದೀಯಾ ಅಂತಾ ಮಾಹಿತಿ ಬಂತು. ಅದಕ್ಕೆ ಫಾರ್ಟಿ ಟು ಫಿಫ್ಟಿ ಡೇಂಜರ್ ಅಂದಿದ್ದು’ ಎಚ್ಚರಿಕೆಯ ದನಿಯಲ್ಲಿ ಹೇಳಿದ ವಿಜಿ.

‘ಏನ್ ಸಾರ್ ನೀವು, ಹೀಗೆ ನೇರಾನೇರ ಆರೋಪ ಮಾಡ್ತೀರಿ... ನಾನು ಕಮಿಷನ್ ತಗೊಂಡಿದೀನಿ ಅಂತಾ ನೀವು ಸಾಬೀತು ಮಾಡಿದರೆ, ಸಾಕ್ಷ್ಯ ತೋರಿಸಿದರೆ ನಾನಿವತ್ತೇ ನನ್ನ ಸ್ಥಾನಕ್ಕೆ ರಾಜೀನಾಮೆ ಬಿಸಾಕ್ತೀನಿ’ ಸವಾಲೆಸೆದ ಮುದ್ದಣ್ಣ.

‘ಅಂದ್ರೆ, ಸಾಕ್ಷ್ಯ ಒಂದೂ ಉಳಿಯದ ಹಾಗೆ ಎಲ್ಲರ ಕಣ್ಣಿಗೆ ಮಣ್ಣೆರಚಿ ಕಮಿಷನ್ ಬಾಚಿದ್ದೀಯಾ ಅನ್ನು...’ ಎಂದು ಮರುಪ್ರಶ್ನಿಸಿದ ವಿಜಿ, ‘ಸಾಕ್ಷ್ಯ ಬೇಡ, ಮನಃಸಾಕ್ಷಿಯಾಗಿ ಹೇಳು, ಕಮಿಷನ್ ತಗೊಂಡಿಲ್ಲ ಅಂತಾ...’

‘ಸಾರ್, ತಗೊಂಡಿದ್ದೀನಿ... ಆದ್ರೆ ಯಾರಿಗೂ ಅನುಮಾನ ಬಾರದಂಗೆ ತಗೊಂಡಿದ್ದೀನಿ. ಅಷ್ಟೊಂದು ಬುದ್ಧಿವಂತ ನಾನು...’ ಸ್ವಲ್ಪವೂ ನಾಚಿಕೆಯಿಲ್ಲದೆ ತಲೆ ಎತ್ತಿ ಹೇಳಿದ ಮುದ್ದಣ್ಣ.

‘ಬುದ್ಧಿವಂತ ಅಂತಾ ಬೀಗಬೇಡ. ಮುಂದೊಮ್ಮೆ ಡೇಂಜರ್‌ಗೆ ಸಿಕ್ಕಾಕಿಕೊಳ್ತೀಯ...’ ನಗುತ್ತಾ ಹೊರಟ ವಿಜಿ.

ಸಂಗತ

ವಿವೇಕ, ಸಂಯಮದ ಅಗತ್ಯ

ಮಾನವೀಯತೆಯ ಪುನರುಜ್ಜೀವನಕ್ಕಾಗಿ ಆರೋಗ್ಯಕರ ಆಲೋಚನೆಗಳನ್ನು ತಲೆಮಾರುಗಳಿಗೆ ದಾಟಿಸಬೇಕಾದುದು ಇಂದಿನ ತುರ್ತು

● ಸತೀಶ ಜಿ.ಕೆ. ತೀರ್ಥಹಳ್ಳಿ

ಕಾಲೇಜು ಕಾರ್ಯಕ್ರಮವೊಂದರಲ್ಲಿ ಇತ್ತೀಚೆಗೆ ಪಾಲ್ಗೊಂಡಿದ್ದೆ. ಅಲ್ಲಿನ ವಿದ್ಯಾರ್ಥಿಗಳ ಮಾತಿನ ವರಸೆ, ಆಲೋಚನಾ ಕ್ರಮ ಮತ್ತು ಅಭಿವ್ಯಕ್ತಿಯ ಶೈಲಿಗಳು ಅಘಾತಕಾರಿ ಎನಿಸಿದವು. ಹದಿಹರೆಯದ ವಿದ್ಯಾರ್ಥಿಗಳು ವೇದಿಕೆಯಲ್ಲಿ ವಿಚಾರ ಮಂಡಿಸುವಾಗ ಪರಸ್ಪರ ದೂಷಣೆಗಿಳಿದರು. ಕೊನೆಗೆ ಸಂಯಮ ಕಳೆದುಕೊಂಡು ಅರಚಾಡಿದ ಪ್ರಸಂಗವೂ ನಡೆಯಿತು. ಕೆಲವು ವಿದ್ಯಾರ್ಥಿಗಳಂತೂ ತಮ್ಮ ತಲೆಬುಡವಿರದ ಮೊಂಡುವಾದದಲ್ಲಿ ಅಪಾರ ಅಸಹನೆಯನ್ನು ಹೊರಹಾಕಿದರು. ವಿರೋಧದ ನಿಲುವನ್ನು ಟೀಕಿಸುವ ಭರದಲ್ಲಿ ನಿಂದನೆಗೆ ಇಳಿದರು. ಅಸಭ್ಯ ಪದ ಬಳಕೆಯೂ ಕಂಡುಬಂತು. ಭಿನ್ನ ನಿಲುವುಗಳ ಮೇಲಿನ ಅಸಹನೆಯು ಮೌಖಿಕ ದಬ್ಬಾಳಿಕೆ, ಭಾಷಿಕ ಹಲ್ಲೆಯಾಗಿಯೂ ಗೋಚರಿಸಿತು. ಅಂತಹ ಅತಿರೇಕಗಳ ಹಿಂದೆ ಸಾಮಾಜಿಕ ಮಾಧ್ಯಮಗಳ ಪ್ರಭಾವ ಇಣುಕಿದರೂ ಹೊಸ ಪೀಳಿಗೆಯ ಅನುಕರಣೆ ಮತ್ತು ಅದರಿಂದ ಆಗಬಹುದಾದ ಅನಾಹುತಗಳು ನಿಜಕ್ಕೂ ಆತಂಕಕಾರಿ. ಅದು ಮಕ್ಕಳಲ್ಲಿನ ಅಧ್ಯಯನದ ಕೊರತೆ ಮತ್ತು ನಾಡಿನ ಚರಿತ್ರೆಯ ಹೆಜ್ಜೆಗುರುತುಗಳ ಬಗೆಗಿನ ಅಜ್ಞಾನ, ನಿರ್ಲಕ್ಷ್ಯದ ಪ್ರತಿಫಲನದಂತಿತ್ತು.

‘ನಾವು ಬದುಕಿರುವ ಕಾಲಕ್ಕಿಂತ ನಮ್ಮ ಮಕ್ಕಳ ಕಾಲವನ್ನು ಇನ್ನಷ್ಟು ಉತ್ತಮಗೊಳಿಸುವುದೇ ನಾವು ಸಮಾಜಕ್ಕೆ ನೀಡುವ ಬಹುದೊಡ್ಡ ಕೊಡುಗೆ’ ಅಂದಿದ್ದಾರೆ ಹಿರಿಯರು. ಸ್ವಾರ್ಥಸಾಧನೆ ಮತ್ತು ಸ್ವಜನ ಪಕ್ಷಪಾತದ ಹಿನ್ನೆಲೆಯಲ್ಲಿ ಸೃಜಿಸುವ ಅತಿರಂಜಿತ ಸುಳ್ಳು ಮತ್ತು ದ್ವೇಷದ ಅಲೆಗೆ ಎಳೆಯ ಜೀವಗಳು ಸಿಲುಕುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳಿನ ಕಾರ್ಖಾನೆಗಳು ಸೃಷ್ಟಿಸುವ ದ್ವೇಷ, ಹಿಂಸಾಪ್ರಚೋದಕ ಪೊಳ್ಳುಕಥೆಗಳನ್ನು ಪರಾಮರ್ಶಿಸದೆಯೇ, ಪರಮ ಸತ್ಯವೆಂದು ನಂಬಿ ನಂಜುನಾಲಿಗೆಯ ನುಡಿಕೋರರನ್ನೇ ಸಾಧಕರಂತೆ ಆರಾಧಿಸುವ ಯುವವರ್ಗವೊಂದು ತಯಾರಾಗಿರುವುದು ಇತ್ತೀಚಿನ ಬೆಳವಣಿಗೆ. ಶಾಲಾ–ಕಾಲೇಜುಗಳ ನೈಜ ಕಲಿಕೆಯಲ್ಲಿ ಮಾಗಬೇಕಾದ ಮೊಗ್ಗಿನ ಮನಸುಗಳಲ್ಲಿ ದ್ವೇಷ ಬಿತ್ತುವ, ನಂಜುಣಿಸುವ ಅಗೋಚರ ಪ್ರಯತ್ನಗಳು ಚಾಲ್ತಿಯಲ್ಲಿವೆ.

ಸನ್ಮಾರ್ಗದೆಡೆಗೆ ಸಾಗಬೇಕಾದ ಯುವಸಮೂಹ ಹೀಗೆ ಬದಲಾದರೆ ಪರಿಣಾಮ ಹೇಗಿರಬಹುದು? ಸಾಮಾಜಿಕ ಅಸಮಾನತೆ, ಅಸಹಿಷ್ಣುತೆ, ಜಾತಿ ತಾರತಮ್ಯದಲ್ಲಿ ನಲುಗಿ ಹೋಗಿದ್ದ ಸಮಾಜಕ್ಕೆ ಚಿಕಿತ್ಸಕ ಮಾದರಿಯಾಗಿ ಒದಗಿದ ಸಂವಿಧಾನದ ಮಹತ್ವವನ್ನು ಮನಗಾಣದಿದ್ದರೆ ಹೇಗೆ? ಶಿಕ್ಷಣದ ನೆರಳಲ್ಲಿ ಸಮಾಜವು ಸಮಾನತೆಯೆಡೆಗೆ, ಉನ್ನತಿಯೆಡೆಗೆ ಧಾವಿಸಬೇಕಾದ ಸಮಯದಲ್ಲಿ ದೇವರು– ಧರ್ಮದ ಹೆಸರಲ್ಲಿ ಶಾಂತಿ, ಸಾಮರಸ್ಯ ಕಲಕುವ ಹುನ್ನಾರವನ್ನು ಸಮಾಜ ಅರ್ಥೈಸಿಕೊಳ್ಳದಿದ್ದರೆ ಯುವಜನರಿಗೆ ಭವಿಷ್ಯವಾದರೂ ಎಲ್ಲಿರುತ್ತದೆ? ಒಬ್ಬರನ್ನೊಬ್ಬರು ದೂಷಿಸಿ, ದ್ವೇಷಿಸುತ್ತಾ ಶೋಷಿತವರ್ಗಗಳೇ ಪರಸ್ಪರ ಬಡಿದಾಡಿಕೊಳ್ಳುತ್ತಿವೆ. ಸಂವಿಧಾನದ ಆಶಯದಡಿ ಪ್ರಜಾಸತ್ತಾತ್ಮಕ ನೆಲೆಯಲ್ಲಿ ಭಿನ್ನಾಭಿಪ್ರಾಯಗಳಿರುತ್ತವೆಯೇ ಹೊರತು ಇಲ್ಲಿ ಯಾರೂ ಶತ್ರುಗಳಿರುವುದಿಲ್ಲ ಎಂಬುದನ್ನು ಈ ತಲೆಮಾರು ಮನಗಾಣಬೇಕಿದೆ. ದ್ವೇಷ, ಹಿಂಸೆಗೆ ಕುಮ್ಮಕ್ಕು ನೀಡುವ ವ್ಯಕ್ತಿ ಮತ್ತು ಸಾಮಾಜಿಕ ಮಾಧ್ಯಮಗಳಿಂದ ದೂರವುಳಿದು, ತಮ್ಮ ಮಿದುಳು– ಪ್ರಜ್ಞೆಗಳನ್ನು ಯಾರಿಗೂ ಅಡವಿಡದಂತೆ ಸ್ವತಂತ್ರವಾಗಿ ಬದುಕನ್ನು ಯೋಚಿಸುವುದು, ಯೋಜಿಸುವುದು ಮುಖ್ಯ.

ವಿಶ್ವಮಾನವ ತತ್ವದ ಸತ್ವದಲ್ಲಿ ಸಮ್ಮಿಳಿತಗೊಂಡ ಜೀವನಶೈಲಿ ರೂಪುಗೊಳ್ಳಬೇಕು. ಯುವ ಮನಸುಗಳನ್ನು ಮೌಢ್ಯ ಮತ್ತು ಬೌದ್ಧಿಕ ದಾಸ್ಯದಿಂದ ಬಿಡುಗಡೆ ಮಾಡಿ, ಅರಿವಿನ ದಾರಿಯಲ್ಲಿ ನಡೆಯಬೇಕಾದ ಸಮಾಜವೂ ಇದೀಗ ತನ್ನ ಹೊಣೆಗಾರಿಕೆ, ಆದರ್ಶಗಳನ್ನು ಮರೆತಂತಿದೆ. ತನ್ನ ಕುಡಿಗಳಿಗೆ ಮಾನವೀಯ ಮೌಲ್ಯಗಳನ್ನು ತುಂಬುವಲ್ಲಿ ಅದು ದಾರುಣವಾಗಿ ಸೋಲುತ್ತಿದೆ ಎನಿಸುತ್ತಿದೆ. ಎರಡು ಸಾವಿರ ವರ್ಷಗಳಿಂದಲೂ ಮಾನವ ಜಗತ್ತನ್ನು ಸನ್ನಡತೆಯೆಡೆಗೆ ಮುನ್ನಡೆಸಿದ ಸಾಧು–ಸಂತರು, ಬುದ್ಧ, ಬಸವ, ಗಾಂಧಿ, ವಿವೇಕಾನಂದ, ಅಂಬೇಡ್ಕರ್, ನಾರಾಯಣ ಗುರುಗಳ ಕಳಕಳಿಗೆ ಶಿಕ್ಷಿತ ವರ್ಗವೂ ಕುರುಡಾಗಿದೆ. ಬುದ್ಧನ ಕಾರುಣ್ಯ, ಗಾಂಧೀಜಿಯ ಅಹಿಂಸೆ, ಬಸವಣ್ಣನ ಕಾಯಕ ಧರ್ಮ, ಅಂಬೇಡ್ಕರ್ ಬಿತ್ತಿದ ಸಮತೆ- ಮಮತೆಯ ಬೇರುಗಳು ಸಡಿಲವಾಗುತ್ತಿವೆ. ಸಾಮಾಜಿಕ ಅನಿಷ್ಟ, ಸಂಕುಚಿತ ನೆಲೆಗಳನ್ನು ಮೀರಿ ಮೇಲೇರಬೇಕಾದ ಆಧುನಿಕ ಜಗತ್ತನ್ನು ಮೌಢ್ಯದ ಮುಸುಕಲ್ಲಿ ಹಿಮ್ಮುಖ ಚಲನೆಗೆ ಎಳೆದೊಯ್ಯಲಾಗುತ್ತಿದೆ.



‘ದೇಶದಲ್ಲಿ ದೀಪಧಾರಿಗಳು ಕಾಣದಾಗಿ ದ್ವೀಪಗಳೇ ಹೆಚ್ಚಾಗಿವೆ’ ಎಂಬುದು ಹಿರಿಯರ ಆತಂಕ. ಮನಸುಗಳ ನಡುವೆ ಕಟ್ಟಿರುವ ಗೋಡೆಗಳು ಹಗೆತನದ ವಿಷಗಾಳಿ ಹೊರಸೂಸುತ್ತವೆ. ‘ಜಾತಿ– ಧರ್ಮಗಳಲ್ಲಿ ಬೇಯುವ ಸಮಾಜವನ್ನು ಹಾಳುಗೆಡವಲು ಇನ್ನಾವ ಬಾಹ್ಯಶಕ್ತಿಯೂ ಬೇಕಿರುವುದಿಲ್ಲ’ ಎಂದ ಟಾಲ್‌ಸ್ಟಾಯ್ ನೆನಪಾಗುತ್ತಾರೆ. ‘ಜಾತಿ– ಧರ್ಮಗಳ ಹೆಸರಲ್ಲಿ ಭುಗಿಲೇಳುವ ಉರಿಯನ್ನು ನಂದಿಸುವುದು ಸುಲಭವಲ್ಲ’ ಎಂಬ ಸೂಕ್ಷ್ಮವನ್ನು ಗ್ರಹಿಸದೇ ಹೋದರೆ ಆಪತ್ತು ತಪ್ಪದು.

ಮಾನವೀಯತೆಯ ಪುನರುಜ್ಜೀವನಕ್ಕಾಗಿ, ಆರೋಗ್ಯಕರ ಆಲೋಚನೆಗಳನ್ನು ತಲೆಮಾರುಗಳಿಗೆ ದಾಟಿಸಬೇಕಾದುದು ಅಗತ್ಯ. ಮನುಷ್ಯ ಸಂಬಂಧಗಳು ಮತ್ತಷ್ಟು ಮಾಗಬೇಕಿದೆ, ಮಕ್ಕಳೆದುರು ಮೌಲಿಕತೆ ಮೆರೆಯಬೇಕಿದೆ. ಜಗದಗಲಕ್ಕೂ ಜೀವದಯೆಯ ಹರವು ಹೆಚ್ಚೆಚ್ಚು ವಿಸ್ತರಿಸಬೇಕಾದುದು ಈ ಹೊತ್ತಿನ ಜರೂರತ್ತು. ತನ್ನದೇ ಸೃಷ್ಟಿಯಾದ ದ್ವೇಷಾಸೂಯೆಗಳ ದಳ್ಳುರಿಯಲ್ಲಿ ಉರಿದೇಳುತ್ತಿರುವ ಮಾನವ ಜಗತ್ತು ತನಗೊಲಿದ ಅಪೂರ್ವ ನೈಸರ್ಗಿಕ ಸೃಷ್ಟಿ ಸೊಬಗನ್ನು ಸಂಭ್ರಮಿಸುವಂತಾಗಲಿ. ನೆಮ್ಮದಿಯ ಬದುಕಿಗೆ ಅಗತ್ಯವಾದ ಸಂಯಮ ಮೂಡಲಿ. ದ್ವೇಷದ ಬದಲು ಪ್ರೀತಿ–ಕರುಣೆ ಅರಳಲಿ.

ವಾಚಕರ ವಾಣಿ

ಪ್ರಥಮ ಸ್ವಾತಂತ್ರ್ಯೋತ್ಸವ: ಶಹನಾಯಿ ಸ್ವಾರಸ್ಯ

1947ರ ಆಗಸ್ಟ್ 15ರ ಪ್ರಥಮ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮವನ್ನು ಶಹನಾಯಿ ವಾದಕ ಬಿಸ್ಮಿಲ್ಲಾ ಖಾನ್ ಅವರು ಶಹನಾಯಿ ನುಡಿಸುವ ಮೂಲಕ ಉದ್ಘಾಟಿಸಬೇಕು ಎಂಬುದು ಪ್ರಧಾನಿ ಜವಾಹರಲಾಲ್ ನೆಹರೂ ಅವರ ಅಭಿಲಾಷೆಯಾಗಿತ್ತು. ಕಾರ್ಯಕ್ರಮದ ಜವಾಬ್ದಾರಿ ವಹಿಸಿಕೊಂಡಿದ್ದ ಅಧಿಕಾರಿಗಳಿಗೆ ಖಾನ್ ಅವರನ್ನು ಕರೆತರಲು ನೆಹರೂ ಸೂಚಿಸಿದ್ದರು. ಆಗ ಬಿಸ್ಮಿಲ್ಲಾ ಖಾನ್ ಅವರು ವಾರಾಣಸಿಯಲ್ಲಿ ಇರಲಿಲ್ಲ. ಅವರು ಮುಂಬೈನಲ್ಲಿರುವುದನ್ನು ಪತ್ತೆಹಚ್ಚಿ, ವಿಶೇಷಾಧಿಕಾರಿಯೊಬ್ಬರನ್ನು ಕಳಿಸಿ ಖಾನ್ ಮತ್ತು ಅವರ ಸಂಗಡಿಗರನ್ನು ವಿಮಾನದಲ್ಲಿ ಆಗಸ್ಟ್ 14ರಂದು ದೆಹಲಿಗೆ ಕರೆತರಲಾಯಿತು.

ಬಿಸ್ಮಿಲ್ಲಾ ಖಾನ್ ಅವರ ಮಂಗಳವಾದ್ಯದೊಂದಿಗೆ ಪ್ರಥಮ ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮ ಆರಂಭಗೊಂಡಿತು. ಈ ಮಂಗಳವಾದ್ಯ ಎಲ್ಲರನ್ನೂ ಒಳಗೊಳ್ಳುವ ಸಂಭ್ರಮದ ಧ್ವನಿಯಾಗಿ ಮೂಡಿಬಂತು. ಕಾರ್ಯಕ್ರಮದ ಬಳಿಕ ನೆಹರೂ ಅವರು ಬಿಸ್ಮಿಲ್ಲಾ ಖಾನ್ ಅವರನ್ನು ಮರುದಿನ ತಮ್ಮ ನಿವಾಸಕ್ಕೆ ಚಹಾಕೂಟಕ್ಕೆ ಆಮಂತ್ರಿಸಿದರು. ಮುಂದೆ 1997ರಲ್ಲಿ ನಡೆದ 50ನೇ ಸ್ವಾತಂತ್ರ್ಯ ಉತ್ಸವದಲ್ಲಿಯೂ ಬಿಸ್ಮಿಲ್ಲಾ ಖಾನ್ ಶಹನಾಯಿ ನುಡಿಸಿದರು. ಅವರು ನುಡಿಸಿದ ಈ ಶಹನಾಯಿ ವಾದನವನ್ನು ಪ್ರತಿವರ್ಷ ಆಗಸ್ಟ್ 15ರಂದು ಆಲ್ ಇಂಡಿಯಾ ರೇಡಿಯೊ ಮತ್ತು ದೂರದರ್ಶನ ಮರುಪ್ರಸಾರ ಮಾಡುತ್ತವೆ. ಬಿಸ್ಮಿಲ್ಲಾ ಖಾನ್ ಅವರ ಶಹನಾಯಿ ವಾದನವು ಭಾರತದ ಸೌಹಾರ್ದ–ಬಂಧುತ್ವದ ಧ್ವನಿಯಾಗಿದೆ ಎಂದು ನೆಹರೂ ಹೇಳುತ್ತಿದ್ದರು. ಕಲೆ ಮತ್ತು ಕಲಾವಿದರ ಬಗ್ಗೆ ಅಪಾರ ಪ್ರೀತಿ ಹೊಂದಿದ್ದ ನೆಹರೂ ಅವರು ಮಹಾಲಿಂಗಪುರದ ಕರಡಿವಾದಕ ವೀರಭದ್ರಪ್ಪ ಕರಡಿ ಹಾಗೂ ತಂಡವನ್ನೂ ತಮ್ಮ ನಿವಾಸಕ್ಕೆ ಆಮಂತ್ರಿಸಿದ್ದರು. ಅವರಿಗೆ ಸ್ವತಃ ನೆಹರೂ ಅವರೇ ಚಹಾ ಕೊಟ್ಟಿದ್ದರು.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಬಲೂನ್‌ಗಳಿಗೆ ಕಡಿವಾಣ ಇರಲಿ

ಸ್ವಾತಂತ್ರ್ಯ ಉತ್ಸವವನ್ನು ದೇಶದ ಎಲ್ಲೆಡೆ ಮಂಗಳವಾರ ಸಂಭ್ರಮದಿಂದ ಆಚರಿಸಲಾಯಿತು. ಉತ್ಸವಕ್ಕೆ ರಂಗೇರಿಸುವ ಸಲುವಾಗಿ ಅನೇಕ ಕಡೆ ಅಲಂಕಾರ ನಿಮಿತ್ತ ಬಲೂನ್‌ಗಳನ್ನು ಬಳಸಲಾಗಿತ್ತು. ಬಲೂನ್ ಅಂದಮೇಲೆ ಅದು ಒಡೆದುಹೋಗುವುದು ಸಹಜ. ಚೂರುಚೂರಾದ ಬಲೂನ್‌ಗಳು ಎಲ್ಲೆಂದರಲ್ಲಿ ಹಾರಾಡುತ್ತವೆ. ಕಸದೊಂದಿಗೆ ಸೇರಿಕೊಳ್ಳುತ್ತವೆ. ಇವುಗಳನ್ನು ಸುಟ್ಟರೆ ವಾಯುಮಾಲಿನ್ಯ. ಹಾಗೇ ಬಿಟ್ಟರೆ ಮಣ್ಣಿನ ಮಾಲಿನ್ಯ, ನೀರಿಗೆ ಬಿಟ್ಟರೆ ಜಲಮಾಲಿನ್ಯ. ಇವುಗಳ ಪುನರ್ ಬಳಕೆಯ ಬಗ್ಗೆ ಯಾರೂ ಗಮನಹರಿಸುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಹುಟ್ಟುಹಬ್ಬ, ನಾಮಕರಣ, ವಿವಾಹ ವಾರ್ಷಿಕೋತ್ಸವದಂಥ ಸಂದರ್ಭಗಳಲ್ಲಿ ಬಲೂನಿನ ಅಲಂಕಾರ ಸಾಮಾನ್ಯ. ಅಂತೆಯೇ ಪರಿಸರ ಮಾಲಿನ್ಯಕ್ಕೆ ಅದರ ಕೊಡುಗೆಯೂ ಏರುತ್ತಿದೆ. ರಬ್ಬರ್, ಲೇಟೆಕ್ಸ್‌ನಿಂದ ತಯಾರಿಸಿದ ಬಲೂನ್‌ನಂಥ ಸಾಮಗ್ರಿ ಬಳಸುವ ಬದಲು ನೈಸರ್ಗಿಕ, ಸಾವಯವ ವಿಘಟನೆಯ ವಸ್ತುಗಳಿಂದ ಅಲಂಕರಿಸಿದರೆ, ಆ ಅಲಂಕಾರಕ್ಕೂ ಒಂದು ಅರ್ಥ ಬರುತ್ತದೆ. ಈ ದಿಸೆಯಲ್ಲಿ ನಾವು ಒಂದು ಕ್ಷಣ ಯೋಚಿಸಬೇಕು.

ಸುನಿಲ್ ಟಿ.ಪಿ., ತಳಗವಾದಿ, ಮಳವಳ್ಳಿ

ಹುಸಿ ಬೆದರಿಕೆಗೆ ಶಿಕ್ಷೆ ಇಲ್ಲವೇ?

ನಮ್ಮ ರಾಜಕೀಯ ನಾಯಕರು ಸ್ವಜನ ಪಕ್ಷಪಾತ, ಭ್ರಷ್ಟಾಚಾರದಂಥ ಅಕ್ರಮಗಳ ಬಗ್ಗೆ ಆರೋಪ ಮಾಡುವ ಸಂದರ್ಭದಲ್ಲಿ ಪುರಾವೆಗೆ ತಮ್ಮ ಬಳಿ ಸಿ.ಡಿ. ಇದೆ, ಪೆನ್‌ಡ್ರೈವ್ ಇದೆ ಎಂದು ಮಾಧ್ಯಮಗಳ ಮುಂದೆ ರಾಜಾರೋಷವಾಗಿ ಹೇಳಿಕೆ ಕೊಡುವುದು ಹೊಸ ಬಗೆಯ ರಾಜಕೀಯ ನಾಟಕದಂತೆ ಕಾಣತೊಡಗಿದೆ.

ಯಾವುದೇ ಅಪರಾಧ ಕೃತ್ಯದ ಬಗ್ಗೆ ಗೊತ್ತಿದ್ದು, ಅದರಲ್ಲೂ ಸಾಕ್ಷ್ಯ–ಆಧಾರಗಳು ಇದ್ದೂ ಅದರ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಸದೇ ಇದ್ದರೆ ಅದು, ಭಾರತೀಯ ದಂಡಸಂಹಿತೆ (ಐಪಿಸಿ) ಸೆಕ್ಷನ್ 202ರ ಪ್ರಕಾರ ಶಿಕ್ಷಾರ್ಹ ಅಪರಾಧ ಎನಿಸುತ್ತದೆ. ಅಂದರೆ, ಯಾವುದೇ ಅಪರಾಧ ಕೃತ್ಯಕ್ಕೆ ಸಂಬಂಧಿಸಿದಂತೆ ತನ್ನ ಬಳಿ ಇರುವ ಮಾಹಿತಿಯನ್ನು ಪೊಲೀಸರಿಗೆ ಇಲ್ಲವೇ ಸಂಬಂಧಿಸಿದ ಇಲಾಖೆಗೆ ನೀಡುವುದು ನಾಗರಿಕರ ಕರ್ತವ್ಯ. ಮಾಹಿತಿ ನೀಡದಿದ್ದರೆ ಅಥವಾ ಮುಚ್ಚಿಟ್ಟರೆ ಅದು ಶಿಕ್ಷಾರ್ಹ ಅಪರಾಧವೆನಿಸುತ್ತದೆ. ಅದಕ್ಕೆ ಸೆರೆವಾಸ ಮತ್ತು ದಂಡವನ್ನೂ ವಿಧಿಸಬಹುದಾಗಿದೆ. ಆದಕಾರಣ, ತಮ್ಮ ಬಳಿ ಸಾಕ್ಷ್ಯವಿದ್ದರೂ ಅದನ್ನು ತನಿಖಾಧಿಕಾರಿಗೆ ನೀಡದಿರುವ, ತಿಳಿಸದಿರುವ ನಾಯಕರ ವಿರುದ್ಧ ಪ್ರಕರಣ ದಾಖಲಿಸಿ ಅವರ ಬಳಿ ಇರುವ ಸಿ.ಡಿ., ಪೆನ್‌ಡ್ರೈವ್ ವಶಪಡಿಸಿಕೊಳ್ಳಬೇಕು. ಆಗ ಅವರ ಬಳಿ ಇರುವುದು ಸಿಡಿಯುವ ಬಾಂಬೋ ಅಥವಾ ಹುಸಿಬಾಂಬೋ ಎಂದು ತಿಳಿಯುತ್ತದೆ.

ಎಸ್.ರವಿ, ಮೈಸೂರು

ಸಾಹಿತ್ಯ ಕಾರ್ಯಕ್ರಮ ನಿರಂತರವಾಗಿ ಜರುಗಲಿ

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಸಾಹಿತ್ಯ ಕಾರ್ಯಕ್ರಮಗಳು ಇತ್ತೀಚಿನ ದಿನಗಳಲ್ಲಿ ಎಂದಿನಂತೆ ನಡೆಯುತ್ತಿಲ್ಲ. ಪರಿಷತ್ತಿನ ಘಟಕಗಳು ಇವೆಯೋ ಇಲ್ಲವೋ ಅನ್ನುವಂತಾಗಿದೆ. ಅಧ್ಯಕ್ಷರ ಅವಧಿ ಐದು ವರ್ಷ ಮಾಡಿರುವುದೇ ಇದಕ್ಕೆ ಕಾರಣ ಇರಬಹುದು. ಇನ್ನೂ ಸಮಯ ಇದೆಯಲ್ಲ ಎಂಬ ಉಡಾಫೆಯ ಧೋರಣೆ. ಸಾಹಿತ್ಯ ಚಟುವಟಿಕೆಗಳಿಂದ ಅನೇಕ ಯುವ ಬರಹಗಾರರಿಗೆ ಉತ್ತೇಜನ ನೀಡಿದಂತಾಗುತ್ತದೆ. ಆದಕಾರಣ, ಅಧ್ಯಕ್ಷರ ಅವಧಿಯನ್ನು ಮೂರು ವರ್ಷಗಳಿಗೆ ಇಳಿಸುವುದು ಸೂಕ್ತವಲ್ಲವೇ? ಇಂದಿನ ಮಕ್ಕಳಿಗೆ ನಾಡು, ನುಡಿ, ನೆಲ, ಜಲದ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕು. ಪರಿಷತ್ತು ಶಾಲಾ ಕಾಲೇಜುಗಳಲ್ಲಿ ನಿರಂತರವಾಗಿ ಕಾರ್ಯಕ್ರಮ ನಡೆಸುವಂತಾಗಬೇಕು.

ಸಾ.ಮ.ಶಿವಮಲ್ಲಯ್ಯ, ಸಾಸಲಾಪುರ,ಕನಕಪುರ

ಭ್ರಷ್ಟಾಚಾರ ನಿಯಂತ್ರಣ ಸಾಧ್ಯವೇ?

ಭ್ರಷ್ಟಾಚಾರದ ವಿರುದ್ಧ ಮಾತುಗಳು ದಶಕಗಳಿಂದಲೂ ಕೇಳಿಬರುತ್ತಿವೆ. ಆಗೊಮ್ಮೆ ಈಗೊಮ್ಮೆ ಹೋರಾಟಗಳು ಕೂಡ ನಡೆದಿವೆ. ಅದನ್ನು ನಿಗ್ರಹಿಸಲು ಹಲವಾರು ಕಾನೂನುಗಳನ್ನೂ ತರಲಾಗಿದೆ. ಭ್ರಷ್ಟಾಚಾರ ನಿರ್ಮೂಲನೆ ಮಾಡುವುದಾಗಿ ಎಲ್ಲ ರಾಜಕೀಯ ಪಕ್ಷಗಳೂ ಘೋಷಣೆ ಮಾಡುತ್ತವೆ. ಆದರೆ ಈ ಅನಿಷ್ಟವನ್ನು ತೊಲಗಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೇವೆ. ಆಳುವ ಮಂದಿಯ ಬದ್ಧತೆಯ ಕೊರತೆಯೇ ಇದಕ್ಕೆ ಪ್ರಧಾನ ಕಾರಣ. ಆರೋಪಗಳು ಕೇಳಿಬರುತ್ತವೆ. ಆದರೆ ಅವುಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ಮನಸ್ಸು ಆರೋಪ ಮಾಡಿದವರಿಗೇ ಇರುವುದಿಲ್ಲ. ಭ್ರಷ್ಟಾಚಾರವು ಸಾಂಸ್ಥೀಕರಣಗೊಂಡಿದೆ. ವರ್ಗಾವಣೆಯೂ ದಂಧೆಯಾಗಿ ಪರಿವರ್ತನೆ ಆಗಿರುವಾಗ ಅದನ್ನು ನಿರ್ಮೂಲನಗೊಳಿಸುವುದು ಸಾಧ್ಯವೇ?

ಮಹಾಂತೇಶ ಎಂ.ಬಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪಾಕಿಸ್ತಾನ: ಹಂಗಾಮಿ ಸರ್ಕಾರ ತಂದ ಅನಿಶ್ಚಿತ ಸ್ಥಿತಿ

● ಸುಕೃತ ಎಸ್.

'ಸೌಹಾರ್ದ ಮತ್ತು ನ್ಯಾಯ ನೆಲೆಸಿರುವ, ನಾಗರಿಕರೇ ಪ್ರಭು ಆಗಿರುವ ಸಮತಾವಾದದ, ಸಮೃದ್ಧ ಕಲ್ಯಾಣ ದೇಶ ನಿರ್ಮಾಣದ ಕನಸನ್ನು ಜಿನ್ನಾ ಕಂಡಿದ್ದರು. ಆದರೆ, ದಶಕಗಳ ಬಳಿಕ ಈ ಕನಸಿಗೆ ಸಂಪೂರ್ಣವಾಗಿ ವಿರುದ್ಧ ದಿಕ್ಕಿನಲ್ಲೇ ದೇಶ ನಡೆದುಬಂದಿದೆ. ಇಂದು ನಿಂತು ನೋಡಿದಾಗ, 'ಜಿನ್ನಾ ಅವರ ಪಾಕಿಸ್ತಾನ' ಎಂಬುದು ಒಂದು ಕಟ್ಟುಕಥೆಯೇ ಎಂಬ ಪ್ರಶ್ನೆ ಮೂಡುತ್ತದೆ... ರಾಜಕೀಯ ಪ್ರಕ್ರಿಯೆಯನ್ನು ಸೇನೆಯು ತನ್ನ ಕೈವಶ ಮಾಡಿಕೊಂಡಿದೆ. ಇದು ಎಷ್ಟರ ಮಟ್ಟಿಗೆ ರಾಜಕೀಯವನ್ನು ಹಾಳು ಮಾಡಿದೆ ಎಂದರೆ, ಈಗ ರಾಜಕೀಯ ಪಕ್ಷಗಳೇ ಅಧಿಕಾರ ಬೇಕೆಂದಾಗ ಸೇನೆಯೊಂದಿಗೆ ಕೈಜೋಡಿಸುತ್ತವೆ...'

ಪಾಕಿಸ್ತಾನದ 77ನೇ ಸ್ವಾತಂತ್ರ್ಯ ದಿನಾಚರಣೆ (ಆಗಸ್ಟ್ 14) ಸಂದರ್ಭದಲ್ಲಿ 'ದಿ ಡಾನ್' ಪತ್ರಿಕೆಯು ಬರೆದ ಸಂಪಾದಕೀಯದ ಈ ಸಾಲುಗಳು ಪಾಕಿಸ್ತಾನದ ವಾಸ್ತವದ ಸಮಸ್ಯೆಯನ್ನೂ, ಭವಿಷ್ಯದಲ್ಲಿ ಆಗಬೇಕಿರುವ ಬದಲಾವಣೆಗಳನ್ನೂ ಸೂಚ್ಯವಾಗಿ ಹೇಳುತ್ತವೆ.

ಜನರಿಂದ ಆಯ್ಕೆಯಾಗಿದ್ದ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ ತೆಹರೀಕ್ ಎ ಇನ್ಸಾಫ್ (ಪಿಟಿಐ) ಪಕ್ಷದ ಸರ್ಕಾರವು 2022ರಲ್ಲಿ ಅವಿಶ್ವಾಸ ಮತದಲ್ಲಿ ಸೋಲುಂಡಿತು; ಸರ್ಕಾರ ಪತನವಾಯಿತು. ನಂತರ ಪಾಕಿಸ್ತಾನ ಮುಸ್ಲಿಂ ಲೀಗ್- ನವಾಜ್ (ಪಿಎಂಎಲ್-ಎನ್) ನೇತೃತ್ವದ ಮೈತ್ರಿ ಸರ್ಕಾರವು ಅಧಿಕಾರಕ್ಕೆ ಬಂದಿತು. 2023ರ ಆಗಸ್ಟ್ 12ಕ್ಕೆ ಸರ್ಕಾರವು ಐದು ವರ್ಷದ ಅಧಿಕಾರಾವಧಿಯನ್ನು ಪೂರೈಸುತ್ತಿತ್ತು. ಆದರೆ, ಮಾಜಿ ಪ್ರಧಾನಿ ಶಹಬಾಜ್ ಶರೀಫ್ ಅವರು ಅವಧಿಗೂ ಮೂರು ದಿನ ಮೊದಲೇ (ಆಗಸ್ಟ್ 9) ಸಂಸತ್ತನ್ನು ವಿಸರ್ಜಿಸಿದರು. ನಂತರ ಅಷ್ಟೇನೂ ಜನಪ್ರಿಯರಾಗಿರದ ಅನ್ವರ್ ಉಲ್ ಹಖ್ ಕಾಕರ್ ಅವರನ್ನು ಹಂಗಾಮಿ ಪ್ರಧಾನಿಯನ್ನಾಗಿ ಆಯ್ಕೆ ಮಾಡಲಾಗಿದೆ. ಅವರು ಪ್ರಮಾಣ ವಚನವನ್ನೂ ಸ್ವೀಕರಿಸಿದ್ದಾರೆ. ಮೊದಲೇ ಆರ್ಥಿಕವಾಗಿ ಕಂಗೆಟ್ಟಿರುವ ದೇಶಕ್ಕೆ ಈ ಹಂಗಾಮಿ ಸರ್ಕಾರವು ಅನಿಶ್ಚಿತ ಸ್ಥಿತಿಯನ್ನು ಹುಟ್ಟುಹಾಕಿದೆ.

ಏನಿದು ಅನಿಶ್ಚಿತ ಸ್ಥಿತಿ?

ಸರ್ಕಾರವೊಂದು ತನ್ನ ಐದು ವರ್ಷಗಳ ಅಧಿಕಾರಾವಧಿ ಪೂರ್ಣಗೊಳಿಸಿದ ಬಳಿಕ ಮುಂದಿನ 60 ದಿನಗಳ ಒಳಗೆ ಹೊಸ ಸರ್ಕಾರ ರಚನೆಯಾಗಬೇಕು. ಒಂದು ವೇಳೆ, ಸರ್ಕಾರವೊಂದು ತನ್ನ ಅಧಿಕಾರಾವಧಿಯನ್ನು ಪೂರ್ಣಗೊಳಿಸದೇ ಸಂಸತ್ತು ವಿಸರ್ಜನೆಗೊಂಡರೆ ಮುಂದಿನ 90 ದಿನಗಳಲ್ಲಿ ಹೊಸ ಸರ್ಕಾರ ರಚನೆಯಾಬೇಕು. ಈಗ ಪಾಕಿಸ್ತಾನದಲ್ಲಿ ತಲೆದೋರಿರುವುದು ಇದೇ. ಅಧಿಕಾರಾವಧಿ ಪೂರ್ಣಗೊಳ್ಳುವ ಮುನ್ನವೇ ಸಂಸತ್ತು ವಿಸರ್ಜನೆಗೊಂಡಿದೆ. ಈ ವಿಷಯವೇ ಈಗ ಅನಿಶ್ಚಿತ ಸ್ಥಿತಿಯನ್ನು ನಿರ್ಮಿಸಿದೆ. ಮುಂದಿನ 90 ದಿನಗಳ ಒಳಗೆ ಚುನಾವಣೆ ನಡೆದು ಹೊಸ ಸರ್ಕಾರವೊಂದು ರಚನೆಯಾಗುವ ಸಾಧ್ಯತೆ ಇಲ್ಲವಾಗಿದೆ. ಇದಕ್ಕೂ ಕಾರಣವಿದೆ.

ಮಾಜಿ ಪ್ರಧಾನಿ ಶರೀಫ್ ಅವರ ಸರ್ಕಾರವು ಹಿಂದೆಯೇ ಜನಗಣತಿಗೆ ಆದೇಶ ನೀಡಿತ್ತು. ಸಂಸತ್ತು ವಿಸರ್ಜನೆಗೊಳ್ಳುವ ಕೆಲವು ತಿಂಗಳ ಮೊದಲು ಗಣತಿಯ ವರದಿ ಸಲ್ಲಿಕೆಯಾಗಿದೆ. ಜುಲೈನಲ್ಲಿ ಈ ವರದಿಯನ್ನು ಸರ್ಕಾರ ಒಪ್ಪಿಕೊಂಡಿದೆ. ಈ ವರದಿ ಬಂದ ಬಳಿಕ ಚುನಾವಣಾ ಕ್ಷೇತ್ರಗಳ ಮರುವಿಂಗಡಣೆಯನ್ನು ದೇಶದ ಚುನಾವಣಾ ಆಯೋಗವು ಕಡ್ಡಾಯವಾಗಿ ಮಾಡಬೇಕು. ಈ ಪ್ರಕ್ರಿಯೆಯು 120 ದಿನಗಳ ಒಳಗೆ ಪೂರ್ಣಗೊಳ್ಳಬೇಕು. ಆದ್ದರಿಂದ, ಮುಂದಿನ 120 ದಿನಗಳ ಒಳಗಂತೂ ಚುನಾವಣೆ ನಡೆಸಲು ಸಾಧ್ಯವಿಲ್ಲ. ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ಮುಗಿದ ಮೇಲೆಯೇ ಚುನಾವಣೆ ಘೋಷಣೆ ಸಂಭವವಿದೆ. ಆದ್ದರಿಂದ, ಮುಂದಿನ ಸುಮಾರು 7 ತಿಂಗಳು ದೇಶದಲ್ಲಿ ಹೊಸ ಸರ್ಕಾರ ರಚನೆ ಸಾಧ್ಯವಿಲ್ಲ.

ಭಾರತಕ್ಕೂ ತಲೆನೋವು: ಆರ್ಥಿಕವಾಗಿ ಮುಗ್ಗಟ್ಟಿನಲ್ಲಿರುವ ದೇಶಕ್ಕೆ ಮುಂದಿನ ಏಳು ತಿಂಗಳು ಸರ್ಕಾರವೇ ಇಲ್ಲದಂತಾಗುವುದು ದೇಶವನ್ನು ಇನ್ನಷ್ಟು ಸಂಕಷ್ಟಕ್ಕೆ ತಳ್ಳಬಹುದಾಗಿದೆ. ಭಾರತ ಹಾಗೂ ಪಾಕಿಸ್ತಾನದ ನಡುವೆ ಇರುವ ಗಡಿ ಸಂಘರ್ಷ ಒಂದು ಕಡೆ. ಭಾರತದ ಒಳಗೆ ಪಾಕಿಸ್ತಾನದ ಗಡಿಯಿಂದ ಒಳನುಸುಳುವಿಕೆ ನಡೆಯುತ್ತಿರುವುದು ಇನ್ನೊಂದು ಕಡೆ. ಜೊತೆಗೆ, ಉಗ್ರ ಚಟುವಟಿಕೆಗಳೂ ನಿಂತಿಲ್ಲ. ಈ ಎಲ್ಲಾ ಕಾರಣದಿಂದ ಪಾಕಿಸ್ತಾನದಲ್ಲಿ ಚುನಾಯಿತ ಸರ್ಕಾರ ಇಲ್ಲದಿರುವುದು ಪಾಕಿಸ್ತಾನಕ್ಕೆ ಮಾತ್ರವಲ್ಲ ಭಾರತಕ್ಕೂ ತಲೆನೋವಾಗಬಲ್ಲದು ಎಂದು ವಿಶ್ಲೇಷಿಸಲಾಗುತ್ತಿದೆ.

ಆಧಾರ: ಪಿಟಿಐ, ರಾಯಿಟರ್ಸ್, 'ದಿ ಡಾನ್' ಪತ್ರಿಕೆ, ಅರಬ್ ನ್ಯೂಸ್



ದೇಶದ ಸ್ವಾತಂತ್ರ್ಯೋತ್ಸದ ಪ್ರಯುಕ್ತ ಪಾಕಿಸ್ತಾನದ ಧ್ವಜವನ್ನು ಮುಖದ ಮೇಲೆ ಬರೆಸಿಕೊಂಡ ಬಾಲಕ –ಎಎಫ್‌ಪಿ ಚಿತ್ರಗಳು


ಚುನಾವಣೆ ಮುಗಿಯುವವರೆಗೆ...

ಅಧಿಕಾರದಲ್ಲಿದ್ದ ಸರ್ಕಾರವು ತನ್ನ ಅಧಿಕಾರಾವಧಿ ಪೂರ್ಣಗೊಂಡು ಹೊಸ ಸರ್ಕಾರ ರಚನೆ ಆಗುವವರೆಗೆ ಅಧಿಕಾರದಲ್ಲಿ ಇದ್ದರೆ, ಆ ಸರ್ಕಾರವು ಚುನಾವಣಾ ಪ್ರಕ್ರಿಯೆ ಮೇಲೆ ಪ್ರಭಾವ ಬೀರಬಲ್ಲದು ಎನ್ನುವ ಕಾರಣಕ್ಕಾಗಿ ಹಂಗಾಮಿ ಸರ್ಕಾರದ ಪರಿಕಲ್ಪನೆ ಹುಟ್ಟಿಕೊಂಡಿದೆ. ಯಾರು ಹಂಗಾಮಿ ಪ್ರಧಾನಿಯನ್ನು ಆಯ್ಕೆ ಮಾಡಬೇಕು, ಈ ಸರ್ಕಾರದ ಕಾರ್ಯವ್ಯಾಪ್ತಿ ಏನಿರಬೇಕು ಎಂಬ ಕುರಿತು ಹಲವು ಚರ್ಚೆಗಳು ನಡೆದು, ಕಾಲ ಕಾಲಕ್ಕೆ ಸಂವಿಧಾನಕ್ಕೆ ತಿದ್ದುಪಡಿಗಳನ್ನೂ ತರಲಾಗಿದೆ. ರಾಷ್ಟ್ರಪತಿಯು ಹಂಗಾಮಿ ಪ್ರಧಾನಿಯನ್ನು ನೇಮಕ ಮಾಡುತ್ತಾರೆ.

ಸದ್ಯ, ಪ್ರಧಾನಿ ಹಾಗೂ ವಿರೋಧ ಪಕ್ಷದ ನಾಯಕ ಸೇರಿ ಮೂವರು ಸಂಭಾವ್ಯರ ಹೆಸರನ್ನು ಸೂಚಿಸಬೇಕು. ಈ ಇಬ್ಬರಿಂದ ಒಮ್ಮತ ಸಾಧ್ಯವಾಗದಿದ್ದರೆ, ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳಿಂದ ತಲಾ ಆರು ಸಂಸದರನ್ನು ಆಯ್ಕೆ ಮಾಡಿ ಸ್ಪೀಕರ್ ಅವರು ಸಮಿತಿಯೊಂದನ್ನು ರಚಿಸುತ್ತಾರೆ. ಈ ಸಮಿತಿಗೆ ಪ್ರಧಾನಿ ಹಾಗೂ ವಿರೋಧ ಪಕ್ಷದ ನಾಯಕ ತಲಾ ಇಬ್ಬರು ಹೆಸರನ್ನು ನೀಡಬೇಕು. ಒಂದು ವೇಳೆ ಸಮಿತಿಯಲ್ಲೂ ಒಮ್ಮತ ಮೂಡದಿದ್ದರೆ ಸಂಭಾವ್ಯರ ಹೆಸರುಗಳನ್ನು ಚುನಾವಣಾ ಆಯೋಗಕ್ಕೆ ನೀಡಬೇಕು. ಚುನಾವಣಾ ಆಯೋಗವೇ ಒಂದು ಹೆಸರನ್ನು ಆಯ್ಕೆ ಮಾಡುತ್ತದೆ ಮತ್ತು ಅದೇ ಅಂತಿಮ ತೀರ್ಮಾನವಾಗಿರುತ್ತದೆ. ಸಂಪುಟಕ್ಕೆ ಸಚಿವರನ್ನು ತಾವೇ ನೇಮಿಸಿಕೊಳ್ಳುವ ಅಧಿಕಾರವು ಹಂಗಾಮಿ ಪ್ರಧಾನಿಗಿದೆ.

ಹಿಂದಿಗಿಂತ ಹೆಚ್ಚಿನ ಅಧಿಕಾರ

ತೀರಾ ಸೀಮಿತ ಕಾರ್ಯವ್ಯಾಪ್ತಿಯನ್ನು ಈವರೆಗೆ ಹಂಗಾಮಿ ಸರ್ಕಾರಕ್ಕೆ ನೀಡಲಾಗಿತ್ತು. ಆದರೆ, ಚುನಾವಣಾ ಕಾಯ್ದೆ 2017ಕ್ಕೆ ತಿದ್ದುಪಡಿ ತರುವ ಮೂಲಕ ಮಾಜಿ ಪ್ರಧಾನಿ ಶಹಬಾಜ್ ಶರೀಫ್ ಅವರ ಸರ್ಕಾರವು ಹಂಗಾಮಿ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ನೀಡಿದೆ. ಇದು ರಾಜಕೀಯ ಮೇಲಾಟಕ್ಕೂ ಕಾರಣವಾಗಿದೆ. ಸರಿಯಾಗಿ ಚರ್ಚೆ ನಡೆಸದೇ, ತುರ್ತಾಗಿ ಇಂಥ ಪ್ರಮಾದ ಮಾಡಲಾಗಿದೆ ಎಂದು ವಿರೋಧ ಪಕ್ಷಗಳು ಸರ್ಕಾರವನ್ನು ದೂರಿವೆ. ಸರ್ಕಾರವು ವಿಸರ್ಜನೆಗೊಳ್ಳುವ ಕೆಲವು ದಿನಗಳ ಮೊದಲು ಈ ತಿದ್ದುಪಡಿಗಳಿಗೆ ಸಂಸತ್ತು ಒಪ್ಪಿಗೆ ನೀಡಿತ್ತು.



ಅನ್ವರ್ ಉಲ್ ಹಖ್ ಕಾಕರ್

'ಹೊಸ ಸರ್ಕಾರ ರಚನೆ ಆಗುವವರೆಗೆ ಸರ್ಕಾರದ ನಿತ್ಯದ ವಿಷಯಗಳ ನಿರ್ವಹಣೆ, ಸ್ವತಂತ್ರ ಹಾಗೂ ನ್ಯಾಯಯುತ ಚುನಾವಣೆ ನಡೆಸಲು ಚುನಾವಣಾ ಆಯೋಗಕ್ಕೆ ಸಹಕಾರ ನೀಡುವುದು, ನಿತ್ಯದ ಆಗುಹೋಗುಗಳ ಕುರಿತಲ್ಲದೇ ಬೇರೆ ಯಾವ ತುರ್ತಿನ ಅಥವಾ ವಿವಾದಾತ್ಮಕ ಚಟುವಟಿಕೆಗಳನ್ನೂ ಮಾಡುವಂತಿಲ್ಲ. ಜೊತೆಗೆ ಪ್ರತಿಯೊಬ್ಬರನ್ನೂ ಪ್ರತಿ ರಾಜಕೀಯ ಪಕ್ಷವನ್ನೂ ಸಮಾನವಾಗಿ ಕಾಣುವುದು' –ಇವು ಚುನಾವಣಾ ಕಾಯ್ದೆ 2017ರ 230ನೇ ಸೆಕ್ಷನ್‌ನಲ್ಲಿ ಹೇಳಲಾಗಿರುವ ಹಂಗಾಮಿ ಸರ್ಕಾರವೊಂದರ ಕಾರ್ಯವ್ಯಾಪ್ತಿ.

ತಿದ್ದುಪಡಿ ನಂತರ ಹಂಗಾಮಿ ಸರ್ಕಾರವು ಆರ್ಥಿಕತೆಗೆ ಸಂಬಂಧಿಸಿದ ಪ್ರಮುಖ ನಿರ್ಧಾರ ಮತ್ತು ನ್ಯಾಯಸಮ್ಮತ, ಪಾರದರ್ಶಕ ಚುನಾವಣೆ ನಡೆಸಲು ಬೇಕಾದ ತೀರ್ಮಾನಗಳನ್ನೂ ತೆಗೆದುಕೊಳ್ಳಬಹುದು. ಇದರೊಂದಿಗೆ ಕೆಲವು 'ತುರ್ತು ವಿಷಯ'ಗಳ ಕುರಿತು, ಜನರಿಂದ ಆಯ್ಕೆಯಾದ ಸರ್ಕಾರವು ಈಗಾಗಲೇ ಸಹಿ ಮಾಡಿರುವ ದ್ವಿಪಕ್ಷೀಯ ಒಪ್ಪಂದಗಳ ಬಗ್ಗೆ, ಈಗಾಗಲೇ ಆರಂಭಗೊಂಡಿರುವ ಕೆಲವು ಯೋಜನೆಗಳ ಬಗ್ಗೆ ತೀರ್ಮಾನ ಕೈಗೊಳ್ಳಬಹುದಾಗಿದೆ. ಇದರೊಂದಿಗೆ ಮುಖ್ಯವಾಗಿ, 'ಅಂತರರಾಷ್ಟ್ರೀಯ ಹಣಕಾಸು ನಿಧಿಯು 300 ಕೋಟಿ ಡಾಲರ್ (ಅಂದಾಜು ₹2,500 ಕೋಟಿ) ಅಷ್ಟು ಹಣವನ್ನು ವಿವಿಧ ಯೋಜನೆಗಳ ಜಾರಿಗಾಗಿ ಮುಂದಿನ ಒಂಬತ್ತು ತಿಂಗಳ ಅವಧಿಗೆ ಪಾಕಿಸ್ತಾನಕ್ಕೆ ನೀಡಲಿದೆ. ಈ ಹಣವು ಆರ್ಥಿಕವಾಗಿ ತತ್ತರಿಸಿರುವ ದೇಶಕ್ಕೆ ಅಗತ್ಯವಾಗಿದೆ. ಆದ ಕಾರಣ, ಈ ಒಪ್ಪಂದದ ಸಂಬಂಧವೂ ನಿರ್ಣಯ ಕೈಗೊಳ್ಳುವಂತೆ ಹಂಗಾಮಿ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ನೀಡಲಾಗಿದೆ' ಎಂದೂ ಸರ್ಕಾರ ಹೇಳಿತ್ತು.

ಆದರೆ, ಈ ಬಗ್ಗೆ ಪಿಟಿಐ ಸೇರಿದಂತೆ ಹಲವು ವಿರೋಧ ಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದವು. 'ಇದು ಸಂವಿಧಾನದ ಹತ್ಯೆ ಮಾಡಿದಂತೆ' ಎಂದು ಹೇಳಿದ್ದವು. ಕೆಲವು ತಜ್ಞರು ವಿರೋಧ ಪಕ್ಷಗಳ ಆತಂಕಕ್ಕೆ ಕಾರಣವಿಲ್ಲ ಎಂದೂ ವಿಶ್ಲೇಷಿಸಿದ್ದಾರೆ. ಆದರೆ, 'ಹಂಗಾಮಿ ಸರ್ಕಾರವೊಂದಕ್ಕೆ ಹೆಚ್ಚಿನ ಅಧಿಕಾರ ಇರಲೇಬಾರದು' ಎಂದು ಸುಪ್ರೀಂ ಕೋರ್ಟ್ ಮೊದಲಿನಿಂದಲೂ ಹೇಳುತ್ತಲೇ ಬಂದಿದೆ. ಜೊತೆಗೆ ಕೆಲವು ವರ್ಷಗಳ ಹಿಂದೆ ಇದೇ ರೀತಿ ತೀರ್ಪನ್ನೂ ನೀಡಿತ್ತು.

ಇಮ್ರಾನ್ ಖಾನ್ ಬಂಧನ: ಮುಂದೇನು?



ಪಾಕಿಸ್ತಾನ ಸರ್ಕಾರಕ್ಕೆ, ಸರ್ಕಾರದ ಅಧಿಕಾರಿಗಳಿಗೆ ವಿದೇಶಿ ಸರ್ಕಾರಗಳು ನೀಡಿದ್ದ ಉಡುಗೊರೆಗಳನ್ನು ಕಾನೂನು ಬಾಹಿರವಾಗಿ ಮಾರಾಟ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಪ್ರಧಾನಿ, ಪಿಟಿಐನ ನಾಯಕ ಇಮ್ರಾನ್ ಖಾನ್ ಅವರಿಗೆ ಇಸ್ಲಾಮಾಬಾದ್‌ನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆಗಸ್ಟ್ 5ರಂದು ಮೂರು ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಇಮ್ರಾನ್ ಅವರು ತೀರ್ಪಿನ ಕಾರಣಕ್ಕಾಗಿ ಮುಂದಿನ ಐದು ವರ್ಷಗಳಲ್ಲಿ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವುದಾಗಿ ಪಿಟಿಐ ಹೇಳಿದೆ. ಅದೇನೇ ಇದ್ದರು, ಈ ತೀರ್ಪು ಇಮ್ರಾನ್ ಅವರ ರಾಜಕೀಯ ಜೀವನದ ಅಂತ್ಯ ಎಂದೇ ಹೇಳಲಾಗುತ್ತಿದೆ. ಇದು ಪಾಕಿಸ್ತಾನದ ರಾಜಕೀಯ ಸ್ಥಿತ್ಯಂತರಕ್ಕೂ ಕಾರಣವಾಗಬಹುದು ಎಂದೂ ವಿಶ್ಲೇಷಿಸಲಾಗುತ್ತಿದೆ.

ಅಧಿಕಾರ ಕಳೆದುಕೊಂಡ ಬಳಿಕ ಇಮ್ರಾನ್ ಅವರು ದೇಶದಾದ್ಯಂತ ದೊಡ್ಡ ಮಟ್ಟದ ಪ್ರತಿಭಟನೆಗಳನ್ನು ನಡೆಸಿದರು. ಇಲ್ಲೆಲ್ಲಾ ಸೇನೆಯ ವಿರುದ್ಧ ಇಮ್ರಾನ್ ಹರಿಹಾಯ್ದರು. ಸೇನೆಯೇ ತನ್ನನ್ನು ಅಧಿಕಾರದಿಂದ ಇಳಿಸಿದೆ ಎಂದೂ ಆರೋಪಿಸಿದರು. ಈ ಆರೋಪವನ್ನು ಸೇನೆಯು ನಿರಾಕರಿಸಿದರೂ ಈ ಬೆಳವಣಿಗೆಗಳ ಬಳಿಕ ಸೇನೆಯು ಪಿಟಿಐ ಮೇಲೆ ನೇರವಾಗಿಯೇ ತನ್ನ ಬಲ ಪ್ರಯೋಗಿಸಿದೆ.

'ಇಮ್ರಾನ್ ಪರವಾಗಿ ಜನರು ಸಂಘಟಿತಗೊಳ್ಳಲು ಆರಂಭಿಸಿದ್ದರು. ಆದ್ದರಿಂದ, ಸರಿಯಾಗಿ ವಿಚಾರಣೆಯನ್ನೂ ನಡೆಸದೆ ನ್ಯಾಯಾಲಯವು ತೀರ್ಪು ನೀಡಿದೆ' ಎಂದು ಪಿಟಿಐ ಆರೋಪಿಸಿದೆ. ಇಮ್ರಾನ್ ಅವರ ವಿಷಯವನ್ನೇ ಇಟ್ಟುಕೊಂಡು ಅನುಕಂಪದ ಆಧಾರದಲ್ಲಿ ಪಿಟಿಐ ಮುಂದಿನ ಚುನಾವಣೆ ಎದುರಿಸಬಹುದು ಎಂದೂ ವಿಶ್ಲೇಷಿಸಲಾಗುತ್ತಿದೆ.

ಸಿನಿ ಬಿಟ್ಸ್

ಅಧಿಪತ್ರ ಹೊರಡಿಸಿದ ರಾಕ್ ಸ್ಟಾರ್



ಬಿಗ್‌ಬಾಸ್ ವಿಜೇತ, ರಾಕ್‌ಸ್ಟಾರ್ ಖ್ಯಾತಿಯ ರೂಪೇಶ್ ಶೆಟ್ಟಿ ತುಳು ಸಿನಿಮಾ ಇಂಡಸ್ಟ್ರಿಯಲ್ಲಿ ನಟನಾಗಿ, ನಿರ್ದೇಶಕನಾಗಿ ಮಿಂಚಿದವರು. ಸ್ಯಾಂಡಲ್‌ವುಡ್‌ನಲ್ಲಿ ಈಗಾಗಲೇ ಕೆಲ ಸಿನಿಮಾಗಳಲ್ಲಿ ಬಣ್ಣಹಚ್ಚಿರುವ ರೂಪೇಶ್, 'ಅಧಿಪತ್ರ' ಎನ್ನುವ ಸಿನಿಮಾ ಮೂಲಕ ಮತ್ತೊಮ್ಮೆ ಸಿಲ್ವರ್‌ಸ್ಕ್ರೀನ್ ಮೇಲೆ ಬರುತ್ತಿದ್ದಾರೆ.

ರೂಪೇಶ್ ಅವರ ಜನ್ಮದಿನದಂದು ಚಿತ್ರದ ಶೀರ್ಷಿಕೆ ಘೋಷಣೆಯಾಗಿದೆ. 'ಡೇಂಜರ್ ಝೋನ್', 'ನಿಶ್ಯಬ್ದ-2', 'ಅನುಷ್ಕಾ', 'ಮಂಕು ಭಾಯ್ ಫಾಕ್ಸಿ ರಾಣಿ' ಸೇರಿದಂತೆ ಹಲವು ಚಿತ್ರಗಳಲ್ಲಿ ರೂಪೇಶ್ ನಟಿಸಿದ್ದು, ಈಗ 'ಅಧಿಪತ್ರ' ಮೂಲಕ ಹೊಸ ಬಗೆಯ ಕಥೆಯೊಂದಿಗೆ ಪ್ರೇಕ್ಷಕರ ಎದುರು ಬರಲಿದ್ದಾರೆ.

ತಮ್ಮ ನಿರ್ದೇಶನದ ತುಳು ಸಿನಿಮಾ 'ಸರ್ಕಸ್' 50 ದಿನ ಪೂರೈಸಿರುವ ಸಂದರ್ಭದಲ್ಲೇ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ ರೂಪೇಶ್. ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಇರುವ ಚಯನ್ ಶೆಟ್ಟಿ 'ಅಧಿಪತ್ರ' ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಇದು ಇವರ ನಿರ್ದೇಶನದ ಚೊಚ್ಚಲ ಚಿತ್ರವಾಗಿದೆ. ಕೆ.ಆರ್. ಸಿನಿಕಂಬೈನ್ಸ್ ಬ್ಯಾನರ್‌ನಡಿಯಲ್ಲಿ ತಯಾರಾಗುತ್ತಿರುವ 'ಅಧಿಪತ್ರ' ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿದೆ.

ನೈಜ ಘಟನೆಯಿಂದ ಸ್ಫೂರ್ತಿ ಪಡೆದ ಈ ಸಿನಿಮಾವನ್ನು ಮಂಗಳೂರು, ಉಡುಪಿ ಸುತ್ತಮುತ್ತ ಚಿತ್ರೀಕರಣ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. 'ಸೆಪ್ಟೆಂಬರ್ ತಿಂಗಳಲ್ಲಿ ಸಿನಿಮಾದ ಶೂಟಿಂಗ್ ಆರಂಭವಾಗಲಿದೆ. ಮುಂದಿನ ದಿನಗಳಲ್ಲಿ ಉಳಿದ ತಾರಾಗಣ ಹಾಗೂ ತಾಂತ್ರಿಕ ಬಳಗದ ಬಗ್ಗೆ ಮಾಹಿತಿ ಹಂಚಿಕೊಳ್ಳಲಾಗುವುದು' ಎಂದಿದೆ ಚಿತ್ರತಂಡ.

ಮೈಸೂರಿನಲ್ಲಿ 'ವಾಮನ' ಅವತಾರ!



ರೀಷ್ಮಾ ಹಾಗೂ ಧನ್ವೀರ್

'ಬಜಾರ್', 'ಬೈ ಟು ಲವ್' ಸಿನಿಮಾ ಖ್ಯಾತಿಯ ನಟ ಧನ್ವೀರ್ ನಟನೆಯ ಹೊಸ ಸಿನಿಮಾ 'ವಾಮನ' ಬಿಡುಗಡೆಗೆ ಸಜ್ಜಾಗುತ್ತಿದೆ. ಈಗಾಗಲೇ ಎರಡು ಹಾಡುಗಳ ಮೂಲಕ ಸದ್ದು ಮಾಡಿರುವ ಈ ಸಿನಿಮಾದ ಆ್ಯಕ್ಷನ್ ಟೀಸರ್ ಆಗಸ್ಟ್ 17ರಂದು ಮೈಸೂರಿನಲ್ಲಿ ಬಿಡುಗಡೆಯಾಗಲಿದೆ.


ಆ್ಯಕ್ಷನ್ ಟೀಸರ್ ಬಿಡುಗಡೆ ಸಂದರ್ಭದಲ್ಲೇ ಚಿತ್ರತಂಡ ರಿಲೀಸ್ ದಿನಾಂಕ ಘೋಷಣೆ ಮಾಡುವ ಸಾಧ್ಯತೆ ಇದೆ. ಈಕ್ವಿನಾಕ್ಸ್ ಗ್ಲೋಬಲ್ ಎಂಟರ್‌ಟೈನ್‌ಮೆಂಟ್ ಪ್ರೊಡಕ್ಷನ್‌ನಡಿ ಚೇತನ್ ಗೌಡ ಈ ಸಿನಿಮಾಗೆ ಬಂಡವಾಳ ಹೂಡಿದ್ದಾರೆ. ಇದು ಇವರ ನಿರ್ಮಾಣದ ಚೊಚ್ಚಲ ಸಿನಿಮಾ. ಶಂಕರ್ ರಾಮನ್ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರದಲ್ಲಿ ಖಳನಟನಾಗಿ ತೆಲುಗು ಚಿತ್ರರಂಗದ ಖ್ಯಾತ ಬಹುಭಾಷಾ ನಟ ಸಂಪತ್ ನಟಿಸಿದ್ದಾರೆ. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯೂ ಶಂಕರ್ ರಾಮನ್ ಅವರದ್ದು.

ಚಿತ್ರಕ್ಕೆ ಅಜನೀಶ್ ಬಿ. ಲೋಕನಾಥ್ ಸಂಗೀತ ನಿರ್ದೇಶನವಿದ್ದು, ಮಹೇನ್ ಸಿಂಹ ಛಾಯಾಚಿತ್ರಗ್ರಹಣ, ಸುರೇಶ್ ಆರ್ಮುಗಂ ಸಂಕಲನ, ಭೂಷಣ್ ನೃತ್ಯ ನಿರ್ದೇಶನವಿದೆ. ಅರ್ಜುನ್ ರಾಜ್, ವಿಕ್ರಂ ಮೋರ್ ಹಾಗೂ ಜಾಲಿ ಬಾಸ್ಟಿನ್ ಸಾಹಸ ನಿರ್ದೇಶನ ಹಾಗೂ ನವೀನ್ ಹಾಡೋನಹಳ್ಳಿ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ. 'ಏಕ್ ಲವ್ ಯಾ' ಸಿನಿಮಾ ಮೂಲಕ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟ ನಟಿ ರೀಷ್ಮಾ ನಾಣಯ್ಯ ಧನ್ವೀರ್ ಅವರಿಗೆ ನಾಯಕಿಯಾಗಿ ನಟಿಸಿದ್ದಾರೆ. ತಾರಾ, ಆದಿತ್ಯ ಮೆನನ್, ಅವಿನಾಶ್, ಅಚ್ಯುತ್ ಕುಮಾರ್, ಕಾಕ್ರೋಜ್ ಸುಧಿ, ಪೆಟ್ರೋಲ್ ಪ್ರಸನ್ನ, ಶಿವರಾಜ್ ಕೆ.ಆರ್ ಪೇಟೆ, ಕೆ.ಜಿ.ಸಚ್ಚು, ಅರುಣ್ ಶ್ರೀರಾಮಯ್ಯ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಭಾರತದ ಸಂವಿಧಾನವನ್ನು ಕಾಪಾಡಲು ನಮ್ಮಿಂದಾದಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಈ ಸರ್ವಾಧಿಕಾರಿ ಸರ್ಕಾರದ ವಿರುದ್ಧ ನೀವು ಒಗ್ಗಟ್ಟಾಗಿ (ಜನರು) ಬೀದಿಗಿಳಿಯಬೇಕು. ನಿಮ್ಮ ಹಕ್ಕುಗಳಿಗಾಗಿ ಒತ್ತಾಯ ಮಾಡಬೇಕು' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ ಎನ್ನಲಾದ ಪೋಸ್ಟರ್ ಒಂದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗಿದೆ. ಆದರೆ, ಇದು ಸುಳ್ಳು ಸುದ್ದಿ.



ಸಿಜೆಐ ಕಚೇರಿ ಹಾಗೂ ಸುಪ್ರೀಂ ಕೋರ್ಟ್‌ನ ಪ್ರಧಾನ ಕಾರ್ಯದರ್ಶಿ ಅವರು ಈ ಮಾಹಿತಿಗಳನ್ನು ತಳ್ಳಿ ಹಾಕಿದ್ದಾರೆ. ಇಂಥ ಯಾವುದೇ ಹೇಳಿಕೆಯನ್ನು ಸಿಜೆಐ ಅವರು ನೀಡಿಲ್ಲ ಅಥವಾ ಇಂಥ ಹೇಳಿಕೆಗೆ ಸಹಮತವನ್ನೂ ನೀಡಿಲ್ಲ. ಈ ರೀತಿ ಸುಳ್ಳು ಸುದ್ದಿ ಹರಡಿದವರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಕಚೇರಿ ತಿಳಿಸಿದೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಆಕೆ ಎಂದೂ ನಕ್ಕವಳಲ್ಲ

ನುಡಿ ಬೆಳಗು





ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ತರಗತಿಯಲ್ಲಿ ಸುಮ್ಮನೆ ಕೂತು ಬಿಡುವುದು ಅವಳಿಗಿಷ್ಟ. ಯಾವತ್ತೂ ಮುಖ ನೆರಿಗೆ ಮಾಡಿಕೊಂಡಿರುವ ಆಕೆಯಲ್ಲಿ ಈ ಹದಿವಯಸ್ಸಿನಲ್ಲಿ ಇರಬೇಕಾದ ತುಂಟತನ, ನಗು, ನಾಚಿಕೆ, ಕೀಟಲೆ, ಹಾಸ್ಯಗಳು ಇಲ್ಲದ್ದಕ್ಕೆ ಕಾರಣ ಗೊತ್ತಾಗುತ್ತಿರಲಿಲ್ಲ. ಒಮ್ಮೆ ತಾಯಿ ಕುರಿತ ವಿಷಯ ಬಂದಾಗ ನಾನು ಒಂದಿಷ್ಟು ಭಾವುಕವಾಗಿ ಪಾಠ ಮಾಡಿಬಿಟ್ಟೆ. ಆಗ ಆಕೆ ದಳದಳ ಅತ್ತದ್ದು ನಿಜ. ನಂತರ ಕರೆದು ಮಾತಾಡಿಸಿದಾಗ ಮೌನವೇ ಉತ್ತರ.

ಮತ್ತೆ ಕಂಬನಿಯ ಮುಂದುವರಿಕೆ. ಸರಿ ಇರಲಿ ಬಿಡು ಕಂದ. ನಿನಗೆ ಹೇಳಬೇಕು ಅನಿಸಿದರೆ ಮಾತ್ರ ಹೇಳು ಪರವಾಗಿಲ್ಲ. ಆದರೆ ಈ ವಯಸ್ಸಿನಲ್ಲಿ ನಗುವೇ ಇಲ್ಲದೆ ಯಾಕೆ ಹೀಗೆ ಇರುತ್ತೀಯ? ನನಗಂತೂ ಅರ್ಥವಾಗುತ್ತಿಲ್ಲ. ಏನು ನಿನ್ನ ಕಷ್ಟ ಎಂದು ವಿಚಾರಿಸಿದೆ. ಮತ್ತೆ ಮಾತಿಲ್ಲ. ನಾನು ಸುಮ್ಮನಾದೆ. ಅವಳು ಓದಿನಲ್ಲಿ ಜಾಣೆ. ಹೇಳಿದ ಕೆಲಸಗಳನ್ನು ಚಾಚು ತಪ್ಪದೆ ಮಾಡುತ್ತಿದ್ದಳು. ಒಳ್ಳೆಯ ಅಂಕಗಳನ್ನೂ ಪಡೆಯುತ್ತಿದ್ದಳು. ಆದರೆ ನಗು ಮಾತ್ರ ನಾಪತ್ತೆ. ಅವಳ ಓರಗೆಯ ಮಕ್ಕಳೆಲ್ಲಾ ನಲಿದು ಕುಣಿದು ಕುಪ್ಪಳಿಸಿ ಇವಳು ಮಾತ್ರ ಬಿಟ್ಟ ಕಣ್ಣು ಬಿಟ್ಟಂತೆ. ಅಲುಗಾಡದೆ ಕುಳಿತ ಹಣತೆಯಂತೆ.

ಕೊಂಚ ನಂಬಿಕೆ ಮೂಡಿದ ಮತ್ತೊಂದು ದಿನ ತಾನಾಗಿಯೇ ಬಂದು ನಿಂತಳು. ಹೇಳು ಪರ್ವಾಗಿಲ್ಲ ಎಂದೆ. ನಾನು ಯಾರ ಕರುಣೆಯನ್ನೂ ಗಿಟ್ಟಿಸಿಕೊಳ್ಳಲು ಇದನ್ನು ಹೇಳುತ್ತಿಲ್ಲ. ಮತ್ತೊಬ್ಬರು ತೋರಿಸುವ ಅನುಕಂಪ ನನ್ನ ಮನಸ್ಸನ್ನು ಸುಡುತ್ತದೆ. ಪರಿಸ್ಥಿತಿ ಏನೇ ಇರಲಿ ಇದರಿಂದ ನಾನು ಕಡಿಮೆ ಎಂದು ಯಾರಿಗೂ ಅನ್ನಿಸಬಾರದು ಎಂದಳು.

ಅಪರೂಪಕ್ಕೆ ಮಾತಾಡುವವರ ಚಮತ್ಕಾರವೇ ಇದು. ಇವರ ಮಾತನ್ನು ಅರಗಿಸಿಕೊಳ್ಳುವುದೇ ಕಷ್ಟ. ಕಬ್ಬಿಣದ ಚಾಣದಷ್ಟು ಮೊನಚು ಮತ್ತು ಪ್ರಬುದ್ಧ. ಈ ವಯಸ್ಸಿನ ಮಗು ಮಾತಾಡುವ ಪರಿ ಇದಲ್ಲ ಎಂದೆನಿಸಿತು. ಒಳಗೊಳಗೇ ಬೆಂದ ಜೀವದ ಭಾಷೆಗೆ ಅದೆಷ್ಟು ಶಕ್ತಿ! ಅದೆಂಥ ಹಿಡಿತ. ನನ್ನದೇನು ತಪ್ಪಿಲ್ಲದೆ ನಾನು ದುಃಖಿತಳು. ಕೂಸಿದ್ದಾಗಲೇ ಅವ್ವ ಅಪ್ಪನ ಕಳಕೊಂಡೆ. ಹಳ್ಳಿ ಜನ ದಿನಕ್ಕೊಬ್ಬರು ಊಟ ಹಾಕಿ ಸಾಕಿದರು. ಓದಿಸಿದರು. ಕೆಲವರು ಜರೆದರು; ಹಲವರು ಮುದ್ದಿಸಿದರು. ಊರ ಹಿರೀಕರೊಬ್ಬರು ಇನ್ನು ನೀ ಇಲ್ಲಿರುವುದು ಬೇಡವೆಂದು ಅನಾಥಶ್ರಮಕ್ಕೆ ಸೇರಿಸಿದರು ಎಂದು ಹೆಚ್ಚು ದೃಢವಾಗಿ ನಿಂತಳು.

ನೀನು ಇಷ್ಟೊಂದು ಪ್ರೌಢವಾಗಿ ಇರುವುದೇ ಸರಿ. ಧೈರ್ಯವಾಗಿ ಇರುವುದು ಕೂಡ ಹೆಮ್ಮೆ. ಆದರೆ ಈ ವಯಸ್ಸಿನಲ್ಲಿ ಸಿಗುವ ಸಣ್ಣ ಸಣ್ಣ ಸಂತೋಷಗಳನ್ನು ನೀನು ಅರ್ಥವಿಲ್ಲದೆ ಕಳೆದುಕೊಳ್ಳುತ್ತಿದ್ದೀಯ. ಸ್ನೇಹಿತರಿಂದ ಯಾವತ್ತೂ ದೂರವಿರಬೇಡ. ಪದೇ ಪದೇ ನಾನು ಅನಾಥ ಎಂದು ನೆನಪು ಮಾಡಿ ಕೊರಗುವುದು ನಿಲ್ಲಿಸು. ನೋಡು ನಾನು ನಿನ್ನಂತೆಯೇ ಅನಾಥ. ಆದರೆ ನಿನಗೆ ಹಾಗೆ ಅನ್ನಿಸುತ್ತಿದೆಯಾ? ಎಂದು ಕೇಳಿದೆ. ತನ್ನಂತವರೇ ಹಲವರು ಸುತ್ತಲೂ ಇದ್ದಾರೆ ಎಂಬುದು ಕೂಡ ಆಕೆಗೆ ಗೊತ್ತಿರಲಿಲ್ಲ. ಈ ಜಗತ್ತಿನಲ್ಲಿ ನಾನೊಬ್ಬಳೇ ಹೀಗೆ ಎಂದು ಆಕೆ ಭಾವಿಸಿದ್ದಳು. ಅವಳ ಅನಾಥಾಶ್ರಮದಲ್ಲಿ ಇದ್ದ ಕೆಲವರಿಗೆ ತಾಯಿ ಇರಲಿಲ್ಲ. ಹಲವರಿಗೆ ತಂದೆ ಇರಲಿಲ್ಲ. ಅಮ್ಮ ಅಪ್ಪ ಇಬ್ಬರೂ ಇಲ್ಲದ ಮಕ್ಕಳನ್ನು ಅವಳು ನೋಡಿಯೂ ಇರಲಿಲ್ಲ. ಪರರ ಅನುಕಂಪ ಅವಳಿಗೆ ಹಿಂಸೆ ಅನಿಸುತ್ತಿತ್ತು.

ಸ್ವಾಭಿಮಾನಿಯಾಗಿರು. ಆದರೆ ನಿನ್ನೊಳಗಿರುವ ನಗುವನ್ನು ನಾಶ ಮಾಡಿಕೊಳ್ಳಬೇಡ. ಪ್ರೀತಿಯ ಕೊರತೆ ಕಂಡ ನಾವೇ ಈ ಜಗತ್ತನ್ನು ಹೆಚ್ಚು ಪ್ರೀತಿಸಬೇಕು. ಅಪರಿಮಿತ ಗೆಳೆಯರನ್ನು ಸಂಪಾದಿಸಬೇಕು. ಹುಡುಕಿದರೆ ಕಳೆದು ಹೋದ ಅವ್ವ ಅಪ್ಪ ಖಂಡಿತಾ ಎಲ್ಲರಲ್ಲೂ ಇಷ್ಟಿಷ್ಟೇ ಸಿಗುತ್ತಾರೆ ಎಂದೆ. ಅವಳು ಸುಮ್ಮನೆ ನನ್ನ ದಿಟ್ಟಿಸಿದಳು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಆಗಸ್ಟ್ 16, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ಅಮಾವಾಸ್ಯೆ ಗಂ. 15-08, ನಕ್ಷತ್ರ: ಆಶ್ಲೇಷ ಗಂ. 16-57 ಯೋಗ: ವರಿಯಾನ್ ಗಂ. 18-30 ಕರಣ: ನಾಗವಾನ್ ಗಂ. 15-08, ಕರ್ಕಾಟಕ ಮಾಸದ 30 ನೇ ದಿನ, ಮಳೆನಕ್ಷತ್ರ: ಆಶ್ಲೇಷ 4.

ರಾಹುಕಾಲ : ಮಧ್ಯಾಹ್ನ 12-00 - 01-30

ಸೂರ್ಯೋದಯ : 06-22 ಸೂರ್ಯಾಸ್ತ : 06-48

ಮುಸ್ಲಿಂ ದಿನಾಂಕ : 27 ಮೊಹರಮ್

ದಿನ ವಿಶೇಷ : ಪಾರ್ಸಿ ಹೊಸ ವರ್ಷ ದಿನ, ಅದೃಷ್ಟ ಸಂಖ್ಯೆ : 6, 2

ಮೇಷ: ದಿನದ ಪ್ರಾರಂಭದಲ್ಲಿ ಕೆಲಸಗಳು ಕುಂಠಿತವಾಗಿ ಸಾಗಿದರೂ ಉತ್ತರಾರ್ಧದ ವೇಳೆಗೆ ಸಮರ್ಪಕವಾಗಿ ಮಾಡಿ ಮುಗಿಸಿದ ತೃಪ್ತಿ ಉಂಟಾಗಲಿದೆ. ಕೆಲಸಗಳಿಗಾಗಿ ಪರಸ್ಥಳದಲ್ಲಿ ಜೀವನ ನಡೆಸಬೇಕಾಗುವುದು.

ವೃಷಭ: ಮಂಗಳ ಕಾರ್ಯ ಸುಗಮವಾಗಿ ನಡೆಯಲೆಂದು ಮನೆ ದೇವರಿಗೆ ಪೂಜೆ ಸಲ್ಲಿಸುವಿರಿ. ಸಣ್ಣಪುಟ್ಟ ವಿಚಾರ ಉಪೇಕ್ಷಿಸದೆ ಮನೆಯವರೊಂದಿಗೆ ಮಾತನಾಡುವಿರಿ. ಬಂಧು-ಮಿತ್ರರ ಒಡನಾಟದಿಂದ ಸಂತೋಷ.

ಮಿಥುನ: ಲಾರಿ ಹಾಗೂ ಟ್ಯಾಂಕರ್‌ನಂಥ ದೊಡ್ಡ ಪ್ರಮಾಣದ ವಾಹನದ ಮಾಲೀಕರಿಗೆ ಇಂದು ಒಳ್ಳೆಯ ದಿನ. ತಂದೆ ತಾಯಿಯವರ ಜೊತೆಗೆ ಕಿರು ತಿರುಗಾಟ ಕೈಗೊಳ್ಳುವಿರಿ. ಹೆಂಡತಿಯ ಮಾತು ಮುಖ್ಯವೆನಿಸುತ್ತದೆ.

ಕರ್ಕಾಟಕ: ಮೊಬೈಲ್ ಫೋನ್‌ಗಳ ಮಾರಾಟಗಾರರಿಗೆ ಅಥವಾ ರಿಪೇರಿ ಮಾಡುವವರಿಗೆ ಹೆಚ್ಚಿನ ಆದಾಯ. ಸಾಧು ಸಂತರ ದರ್ಶನದಿಂದ ಮನಸ್ಸಿಗೆ ಹೆಚ್ಚಿನ ಸಮಾಧಾನ ಕಂಡುಬರಲಿದೆ. ಉದ್ವೇಗ ಕಂಡುಬಂದೀತು.

ಸಿಂಹ: ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವದಲ್ಲಿ ಒಳ್ಳೆಯ ಬದಲಾವಣೆಗಳಾಗುವುದು. ಕೆಲಸ ಕಾರ್ಯಗಳಲ್ಲಿ ಏಕಾಗ್ರತೆ ಅನಿವಾರ್ಯ. ಹಿರಿಯರ ಆರೋಗ್ಯ ಉತ್ತಮವಾಗುವುದು.

ಕನ್ಯಾ: ಅನಿರೀಕ್ಷಿತವಾಗಿ ರಾಜಕೀಯದಲ್ಲಿ ಸ್ಥಾನ ದೊರೆತು ರಾಜಕೀಯ ರಂಗದ ಉದ್ದ ಅಗಲದ ಅರಿವಾಗುತ್ತದೆ. ದುರಾಲೋಚನೆಗಳನ್ನು ಬದಲಿಸಿಕೊಳ್ಳುವ ಸಮಯ. ಗಾಯಗಳಾಗುವ ಸಾಧ್ಯತೆಗಳಿವೆ.

ತುಲಾ: ಬಂಧು ಮಿತ್ರರ ಸಹಾಯಗಳನ್ನು ಬಯಸದೆ ಸ್ವತಂತ್ರವಾಗಿ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಅಭ್ಯಾಸ ಮಾಡಿ. ಬಾಕಿ ಉಳಿಸಿಕೊಂಡಿರುವ ಕೆಲಸಗಳನ್ನು ಬೇಗ ಮುಗಿಸಿಕೊಳ್ಳುವಂಥ ಪ್ರಯತ್ನ ಆಗಲಿ.

ವೃಶ್ಚಿಕ: ಸಹೋದರನ ಮೂಲಕ ಜಮೀನಿನ ಖರೀದಿ ವಿಚಾರದ ಮಾತುಕತೆಗಳು ಜರುಗುವುದು. ಕೆಲಸಗಳನ್ನು ಶ್ರದ್ಧೆಯಿಂದ ಮಾಡಿ ಮುಗಿಸುವಿರಿ. ಮೋಸ ಮಾಡುವ ಮನಸ್ಥಿತಿ ದೂರಮಾಡಿಕೊಳ್ಳಿರಿ.

ಧನು: ಸತ್ಯನಾರಾಯಣ ಸ್ವಾಮಿಯ ಸೇವೆ ಮಾಡುವುದರಿಂದ ಜಟಿಲ ಸಮಸ್ಯೆಗಳೂ ಸೌಹಾರ್ದಯುತವಾಗಿ ಬಗೆಹರಿಯಲಿದೆ. ವೈದ್ಯಕೀಯ ಖರ್ಚಿನ ಹಣವನ್ನು ಸಂಸ್ಥೆಯಿಂದ ಪಡೆದುಕೊಳ್ಳುವಂತಾಗುವುದು.

ಮಕರ: ದೇವಸ್ಥಾನದಲ್ಲಿನ ವಿಶೇಷ ಕಾರ್ಯಕ್ರಮಗಳಿಗೆ ಸಹಾಯ ಅಪೇಕ್ಷಿಸುವವರ ವಿಚಾರದಲ್ಲಿ ಮುಂಜಾಗ್ರತೆ ಇರಲಿ. ಯಾರ ನೆರವೂ ಇಲ್ಲದೆ ನಿಮ್ಮೆಲ್ಲ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವುದು ಉತ್ತಮ.

ಕುಂಭ: ಮನೆಯಲ್ಲಿ ದೈವಕಾರ್ಯವನ್ನು ನಡೆಸುವ ಬಗ್ಗೆ ಹಿರಿಯರೊಂದಿಗೆ ಚರ್ಚೆ ಮಾಡಿ ತೀರ್ಮಾನಿಸಿ. ಆಕಸ್ಮಿಕ ಧನಲಾಭದಿಂದ ಹರ್ಷ. ಬಹುಮುಖದ ಖರ್ಚುವೆಚ್ಚ ನಿರ್ವಹಿಸಬೇಕಾಗಬಹುದು.

ಮೀನ: ಪತ್ರಿಕಾ ವರದಿಗಾರರಿಂದ ತಪ್ಪುಗಳು ಸಂಭವಿಸುವ ಲಕ್ಷಣಗಳಿವೆ. ಹಾಗಾಗಿ ವಿಷಯವನ್ನು ಪರಾಮರ್ಶಿಸಿ ಸ್ಪಷ್ಟ ಪಡಿಸಿಕೊಂಡು ಪ್ರಕಟಿಸಿ. ವೃತ್ತಿಯಲ್ಲಿ ಪ್ರಗತಿ ಕಾಣಲಿರುವಿರಿ.

ಪದಬಂಧ 5412


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ದೇವ ಪೂಜಾ ತಂತ್ರವನ್ನು ತಿಳಿಸುವ ಶಾಸ್ತ್ರ (3)
5.ವಾದ್ಯ ನುಡಿಸುವವನು (3)
6.ಬಿಡದಿ ಹತ್ತಿರವಿರುವ ಹೆಂಡತಿ (3)
8.ಕ್ರೀಡೆಗೊಂದು ಪರ್ಯಾಯ ಪದ (2)
9.ತಿರುಗಿದ್ದಾಗ ವನದಲ್ಲಿ ಹೊಸದು ಕಂಡಿದೆ (2)
11.ಹರಾಹುರಿಯಲ್ಲಿರುವ ಹಗ್ಗ (2)
15.ಮನ್ಮಥನ ಇನ್ನೊಂದು ಹೆಸರು (2)
16.ಪೇಟ ಧರಿಸಿದ್ದಕ್ಕೇ ಈ ತೊಂದರೆ! (3)
17.ರಸ ಒಸರುವ ನಾಲಿಗೆ (3)
18.ಕಿಡಿ ಹಿಡಿಯುತ್ತಿರುವ ಈತ ಬಲು ತುಂಟ! (3)

ಮೇಲಿಂದ ಕೆಳಕ್ಕೆ

1.ಕಟ ಕಟ ಶಬ್ದ ಮಾಡದ ಬಾಗಿಲು (3)
2.ಆಳು ಹೊಡೆದುಕೊಂಡು ಬಂದಿರುವ ಹಸು (3)
3.ಮಾತೆ ಮತ್ತೆ ಮತ್ತೆ ತೋರುವ ಪ್ರೀತಿ (3)
4.ಒಳ್ಳೆಯ ದಿನ (3)
8.ಉದ್ದವಾದ ತೋಳು (5)
10.ಬಣ್ಣಗುಂದುವಿಕೆಯನ್ನು ಹೀಗೆನ್ನಿ (5)
12.ದುರಸ್ತಿಗೊಂದು ಪರ್ಯಾಯ ಪದ (3)
13.ವಾತಾಯನ ಇಲ್ಲಿದೆ (3)
14.ಕರ ಕಡಿಯಲು ಬಂದಿರುವ ಭಲ್ಲೂಕ (3)
15.ಮಾನವಿರುವ ಮನುಷ್ಯ! (3)



5411ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಲೆಮಾರಿ 3.ಆಘ್ರಾಣಿಸು
5.ದಿವ್ಯ 7.ತಿರುಕ
8.ಹರಿತ 9.ಸತ್ವ
10.ಅಸುರ 12.ಕರ
14.ಯಮಸುತ
15.ಪರಸ್ಪರ

ಮೇಲಿಂದ ಕೆಳಕ್ಕೆ
1.ಅಷ್ಟಪದಿ 2.ರಿಯಾಯಿತಿ
3.ಆಮುಷ್ಮಿಕ 4.ಸುರಕ್ಷಿತ
6.ವ್ಯಕ್ತಿತ್ವ 8.ಹರಿತಕ
9.ಸಮುದಾಯ 10.ಅನುಚಿತ
11.ರಜನಿಪ 13.ರತ್ನಾಕರ

ಸುಡೊಕು 5798

					7		1	
8		7	6		4	2		9
	2		3				5	
2	4			1		9		
						6	7	
7	5			9		3	4	
	8							3
			4		8	5		
9		4			2		6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5797 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಮುತ್ತಯ್ಯ ಮುರಳೀಧರನ್ ₹400 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಶ್ರೀಲಂಕಾದ ಮಾಜಿ ಕ್ರಿಕೆಟಿಗ ಮುತ್ತಯ್ಯ ಮುರಳೀಧರನ್ ಅವರು ಜಿಲ್ಲೆಯಲ್ಲಿ ಬೃಹತ್ ಉದ್ಯಮವೊಂದನ್ನು ಸ್ಥಾಪಿಸುತ್ತಿದ್ದು, ₹400 ಕೋಟಿ ಬಂಡವಾಳ ಹೂಡುತ್ತಿದ್ದಾರೆ.

ತಾಲ್ಲೂಕಿನ ಕೆಲ್ಲಂಬಳ್ಳಿ, ಬದನಗುಪ್ಪೆ ಕೈಗಾರಿಕಾ ಪ್ರದೇಶದ 46 ಎಕರೆ ಪ್ರದೇಶದಲ್ಲಿ ಪಾನೀಯ ತಯಾರಿಕಾ ಘಟಕವನ್ನು ಆರಂಭಿಸುತ್ತಿದ್ದಾರೆ. ಅದರಿಂದಾಗಿ 800 ಮಂದಿಗೆ ಉದ್ಯೋಗ ಸಿಗಲಿದೆ.

ಆರು ತಿಂಗಳ ಹಿಂದೆಯೇ ಅವರು ಜಮೀನು ಖರೀದಿಸಿದ್ದು, ರಾಜ್ಯಮಟ್ಟದಲ್ಲೇ ಯೋಜನೆಗೆ ಅನುಮತಿ ಸಿಕ್ಕಿದೆ. ಘಟಕ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ.

ಎಂ/ಎಸ್ ಮುತ್ತಯ್ಯ ಬೆವರೇಜ್ ಅಂಡ್ ಕನ್‌ಫೆಕ್ಷನರಿ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ ಕಾರ್ಖಾನೆ ಸ್ಥಾಪಿಸುತ್ತಿದ್ದು, ಅದು ತಂಪು ಪಾನೀಯ ಘಟಕ ಎಂದು ಕೈಗಾರಿಕಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ದೊಡ್ಡ ಪ್ರಮಾಣದ ಉದ್ದಿಮೆಯಾಗಿರುವುದರಿಂದ ರಾಜ್ಯ ಮಟ್ಟದಲ್ಲಿಯೇ ಭೂಮಿ ಹಂಚಿಕೆ ಸೇರಿದಂತೆ ಎಲ್ಲ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಅವರು ಜಿಲ್ಲೆಗೆ ಭೇಟಿ ಕೊಟ್ಟಿಲ್ಲ. ಆದರೆ, ಬೆಂಗಳೂರಿನ ಸಭೆಗಳಲ್ಲಿ ಭಾಗವಹಿಸಿದ್ದಾರೆ. ಅವರ ತಂಡದ ಸದಸ್ಯರು ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾರೆ’ ಎಂದು ಕೈಗಾರಿಕೆ ಇಲಾಖೆ ಉಪನಿರ್ದೇಶಕ ರಾಜೇಂದ್ರ ಪ್ರಸಾದ್ ಮಾಹಿತಿ ನೀಡಿದರು.

ಪರಿಷತ್‌ಗೆ ಉಮಾಶ್ರೀ, ಸೀತಾರಾಂ, ಸುಧಾಮ್: ಹೈಕಮಾಂಡ್ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವರಾದ ಉಮಾಶ್ರೀ, ಎಂ.ಆರ್. ಸೀತಾರಾಂ ಮತ್ತು ಜಾರಿ ನಿರ್ದೇಶನಾಲಯದ ಮಾಜಿ ಅಧಿಕಾರಿ ಸುಧಾಮ್ ದಾಸ್ ಅವರನ್ನು ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡಲು ಕಾಂಗ್ರೆಸ್ ಹೈಕಮಾಂಡ್ ಒಪ್ಪಿಗೆ ನೀಡಿದೆ.

ಸೀತಾರಾಂ, ಸುಧಾಮ್ ದಾಸ್ ಮತ್ತು ಎಐಸಿಸಿ ಕಾರ್ಯದರ್ಶಿ ಮನ್ಸೂರ್ ಅಲಿ ಖಾನ್ ಅವರನ್ನು ಪರಿಷತ್‌ಗೆ ನಾಮನಿರ್ದೇಶನ ಮಾಡುವ ಪ್ರಸ್ತಾವವಿತ್ತು. ಮನ್ಸೂರ್ ಹೆಸರನ್ನು ಕೈಬಿಟ್ಟು, ಉಮಾಶ್ರೀ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಉಮಾಶ್ರೀ ಅವರನ್ನು ಸಿನಿಮಾ ಕ್ಷೇತ್ರ, ಸೀತಾರಾಂ ಅವರನ್ನು ಶಿಕ್ಷಣ ಕ್ಷೇತ್ರ ಹಾಗೂ ಸುಧಾಮ್ ದಾಸ್ ಅವರನ್ನು ಸಮಾಜಸೇವೆ ಕ್ಷೇತ್ರದಿಂದ ನಾಮನಿರ್ದೇಶನಕ್ಕೆ ಆಯ್ಕೆಮಾಡಲಾಗಿದೆ. ಎಐಸಿಸಿ ಪಟ್ಟಿಗೆ ಅನುಮೋದನೆ ನೀಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿಫಾರಸು ಪತ್ರವನ್ನು ರಾಜ್ಯಪಾಲರಿಗೆ ಬುಧವಾರ ಕಳುಹಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹139
ಗುಡ್ ಲಾಟ್	₹122.50

(ಪ್ರತಿ ಕೆ.ಜಿಗೆ)

30 ವರ್ಷಗಳ ಸರಾಸರಿಗೆ ಹೋಲಿಸಿದರೆ ತಗ್ಗಿದ ಪ್ರಮಾಣ

ಕಾವೇರಿ: ಜಲಾಶಯಗಳಲ್ಲಿ ಕಡಿಮೆ ನೀರು ಸಂಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನೀರಿನ ಒಳಹರಿವು ಶೇ 42.54ರಷ್ಟು ಕುಸಿತ
- ಕೃಷಿಗೆ ತಮಿಳುನಾಡಿನಿಂದ ಹೆಚ್ಚುವರಿ ನೀರು ಬಳಕೆ

ನವದೆಹಲಿ: ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ, ದುರ್ಬಲ ಮುಂಗಾರಿನ ಕಾರಣ ಕರ್ನಾಟಕದಲ್ಲಿ ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟುಗಳಿಗೆ ನೀರಿನ ಒಳಹರಿವು ಶೇ 42.54ರಷ್ಟು ತಗ್ಗಿದೆ ಎಂದು ಕಾವೇರಿ ಜಲನಿರ್ವಹಣಾ ಪ್ರಾಧಿಕಾರವು (ಸಿಡಬ್ಲ್ಯುಎಂಎ) ತಿಳಿಸಿದೆ.

ಕಳೆದ ವಾರ ನಡೆದಿದ್ದ ಪ್ರಾಧಿಕಾರದ ಸಭೆಗೆ ಸಿದ್ಧಪಡಿಸಿದ್ದ ಕಾರ್ಯಸೂಚಿಯಲ್ಲಿ ಈ ಅಂಶವನ್ನು ಉಲ್ಲೇಖಿಸಲಾಗಿದೆ. ಆ ಪ್ರಕಾರ, ಜೂನ್ 1, 2023ರಿಂದ ಆಗಸ್ಟ್ 9, 2023ರವರೆಗೆ ಜಲಾನಯನ ಭಾಗದ ಅಣೆಕಟ್ಟುಗಳಾದ ಕಬಿನಿ, ಹಾರಂಗಿ, ಹೇಮಾವತಿ ಮತ್ತು ಕೆಆರ್‌ಎಸ್‌ನಲ್ಲಿ ಒಳ ಹರಿವಿನ ಪ್ರಮಾಣ ಕಳೆದ 30 ವರ್ಷಗಳ ಸರಾಸರಿಗೆ ಹೋಲಿಸಿದರೆ ಶೇ 42.54ರಷ್ಟು ಇಳಿಮುಖವಾಗಿದೆ ಎಂದು ವಿವರಿಸಿದೆ.

ಜೂನ್ 1 ರಿಂದ ಆಗಸ್ಟ್ 10ರ ಅವಧಿಯಲ್ಲಿ ಕೆಆರ್‌ಎಸ್ ವ್ಯಾಪ್ತಿಯ ಜಲಾನಯನ ಪ್ರದೇಶಗಳಲ್ಲಿ ಶೇ 23ರಷ್ಟು, ಕಬಿನಿ ವ್ಯಾಪ್ತಿಯಲ್ಲಿ ಶೇ 22ರಷ್ಟು ಮಳೆ ಕೊರತೆಯಾಗಿದೆ. ತಮಿಳುನಾಡು ಮತ್ತು ಕರ್ನಾಟಕ ಒಳಗೊಂಡು ಇಡೀ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಪ್ರಮಾಣ ವಾಡಿಕೆಗಿಂತಲೂ ಶೇ 19ರಷ್ಟು ಕಡಿಮೆಯಾಗಿದೆ ಎಂದು ಕಾರ್ಯಸೂಚಿಯಲ್ಲಿ ಉಲ್ಲೇಖಿಸಲಾಗಿದೆ.

ಕಾವೇರಿ ನದಿ ಪಾತ್ರದ ನಾಲ್ಕು ಜಲಾಶಯಗಳಲ್ಲಿ ಒಟ್ಟು 24.352 ಟಿಎಂಸಿ ಅಡಿ ನೀರಿನ ಸಂಗ್ರಹವಿದೆ. ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ 69.77 ಟಿಎಂಸಿ ಅಡಿಯಷ್ಟು ನೀರಿನ ಸಂಗ್ರಹವಿದೆ ಎಂದು ಕರ್ನಾಟಕ ಸರ್ಕಾರವು ಅಂದು ಸಭೆಯ ಗಮನಕ್ಕೆ ತಂದಿತ್ತು.

ತಮಿಳುನಾಡು ಸರ್ಕಾರ ಕೃಷಿ ಉದ್ದೇಶಕ್ಕಾಗಿ ಜೂನ್ 12ರಿಂದ ನೀರು ಹರಿಸಲು ಆರಂಭಿಸಿದ್ದರಿಂದ ಮೆಟ್ಟೂರು ಜಲಾಶಯದಲ್ಲಿ ಸಂಗ್ರಹವಿದ್ದ ನೀರಿನ ಪ್ರಮಾಣ ಆಗಸ್ಟ್ 7ರ ವೇಳೆಗೆ 22.86 ಟಿಎಂಸಿ ಅಡಿಗೆ ತಲುಪಿತ್ತು. ಮಾಪನ ಕೇಂದ್ರವಾದ ಬಿಳಿಗುಂಡ್ಲುವಿನಿಂದ ಮೆಟ್ಟೂರು ಜಲಾಶಯವರೆಗಿನ ಪ್ರದೇಶದಲ್ಲಿ ವಾಡಿಕೆಯಷ್ಟು ಮಳೆಯಾಗಿದೆ. ಹೀಗಾಗಿ, ತಮಿಳುನಾಡಿನ ಮೆಟ್ಟೂರು ಜಲಾಶಯಕ್ಕೆ ಹೆಚ್ಚುವರಿ ಅಂದರೆ, 83.83 ಟಿಎಂಸಿ ಅಡಿಗೂ ಹೆಚ್ಚು ನೀರು ಸೇರಿದೆ. ಆದರೆ, ತಮಿಳುನಾಡು ಸರ್ಕಾರ ಜೂನ್ 12 ರಿಂದ ಆಗಸ್ಟ್ 7ವರೆಗಿನ ಅವಧಿಯಲ್ಲಿ 60.97 ಟಿಎಂಸಿ ಅಡಿಗಿಂತಲೂ ಅಧಿಕ ನೀರನ್ನು ಬಳಕೆ ಮಾಡಿದೆ ಎಂಬ ಮಾಹಿತಿಯನ್ನು ಕರ್ನಾಟಕವು ಸಿಡಬ್ಲ್ಯುಎಂಎ ಗಮನಕ್ಕೆ ತಂದಿದೆ.

ತಮಿಳುನಾಡಿನಲ್ಲಿ 1,85,100 ಎಕರೆ ವಿಸ್ತೀರ್ಣದ ಭೂಮಿಯಲ್ಲಿನ ಕುರುವೈ ಬೆಳೆಗೆ ಒಟ್ಟು 32.27 ಟಿಎಂಸಿ ಅಡಿ ನೀರು ಅಗತ್ಯ ಎಂದು ಕಾವೇರಿ ಜಲವಿವಾದ ನ್ಯಾಯಮಂಡಳಿಯು ಹಂಚಿಕೆ ಮಾಡಿತ್ತು. ಆದರೆ, ತಮಿಳುನಾಡು ಸರ್ಕಾರ ಕುರುವೈ ಬೆಳೆಗೆ ಹಂಚಿಕೆ ಮಾಡಿದ್ದಕ್ಕಿಂತ ಎರಡು ಪಟ್ಟು ಹೆಚ್ಚು ನೀರು ಬಳಕೆ ಮಾಡಿದೆ ಎಂದು ಕರ್ನಾಟಕ ಪ್ರತಿಪಾದಿಸಿತ್ತು.

ಕರ್ನಾಟಕದಲ್ಲಿ ಕುಡಿಯುವ ನೀರು ಉದ್ದೇಶಕ್ಕೆ ಅಗತ್ಯವಿರುವ ನೀರನ್ನು ಹೊರತುಪಡಿಸಿ, ನ್ಯಾಯಮಂಡಳಿಯು ನಿಗದಿಪಡಿಸಿದ ನೀರಾವರಿ ಪ್ರದೇಶದ ಶೇ 50ರಷ್ಟು ಭೂಮಿಗೆ ಒದಗಿಸುವಷ್ಟು ನೀರು ಸಂಗ್ರಹದಲ್ಲಿಲ್ಲ. ಇದುವರೆಗೂ ಕೃಷಿ ಉದ್ದೇಶಗಳಿಗೆ ಕರ್ನಾಟಕದಲ್ಲಿ ನೀರು ಹರಿಸಿಲ್ಲ. ರೈತರು ಈಗಾಗಲೇ ಕಾಲುವೆಗಳ ಮೂಲಕ ನೀರು ಹರಿಸುವಂತೆ ಒತ್ತಡ ಹೇರುತ್ತಿದ್ದಾರೆ. ಹೀಗಾಗಿ, ಸೀಮಿತ ಪ್ರದೇಶಕ್ಕೆ ಅನ್ವಯಿಸಿ ನೀರಾವರಿ ಉದ್ದೇಶಕ್ಕಾಗಿ ನೀರು ಹರಿಸಲು ಚಿಂತನೆ ನಡೆಸಲಾಗುತ್ತಿದೆ ಎಂದು ಸರ್ಕಾರ ಸಿಡಬ್ಲ್ಯುಎಂಎಗೆ ಮಾಹಿತಿ ನೀಡಿತ್ತು.

ಸಿಡಬ್ಲ್ಯುಎಂಎ ತನ್ನ ಆದೇಶದಲ್ಲಿ ಆಗಸ್ಟ್ 12 ರಿಂದ ಜಾರಿಗೊಳಿಸಿ 15 ದಿನ ಕಾಲ ನಿತ್ಯ ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ 10 ಸಾವಿರ ಕ್ಯೂಸೆಕ್ ಹರಿವು ದಾಖಲಾಗುವಂತೆ ನೀರು ಹರಿಸಬೇಕು ಎಂದು ಸೂಚಿಸಿತ್ತು.

ಭಾರತದಲ್ಲಿ ಆ್ಯಪಲ್ ಏರ್‌ಪಾಡ್ ತಯಾರಿಕೆ

ನವದೆಹಲಿ (ಪಿಟಿಐ): ಆ್ಯಪಲ್ ಕಂಪನಿಯು ಏರ್‌ಪಾಡ್‌ಗಳನ್ನು ಫಾಕ್ಸ್‌ಕಾನ್ ಕಂಪನಿಯ ಹೈದರಾಬಾದ್‌ನ ಘಟಕದಲ್ಲಿ ತಯಾರಿಸಲಿದೆ ಎಂದು ಮೂಲಗಳು ಹೇಳಿವೆ.

2024ರ ಡಿಸೆಂಬರ್‌ಗೆ ಮುನ್ನ ಏರ್‌ಪಾಡ್‌ನ ಉತ್ಪಾದನೆಯು ದೊಡ್ಡ ಮಟ್ಟದಲ್ಲಿ ಶುರುವಾಗಬಹುದು ಎನ್ನಲಾಗಿದೆ. ಈ ವಿಚಾರವಾಗಿ ಆ್ಯಪಲ್ ಹಾಗೂ ಫಾಕ್ಸ್‌ಕಾನ್‌ನಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

ಕೆಫೆ ಕಾಫಿ ಡೇ: ₹24 ಕೋಟಿ ಲಾಭ

ನವದೆಹಲಿ (ಪಿಟಿಐ): ಕೆಫೆ ಕಾಫಿ ಡೇ (ಸಿಸಿಡಿ) ಮಳಿಗೆಗಳನ್ನು ನಡೆಸುವ ಕಾಫಿ ಡೇ ಗ್ಲೋಬಲ್ ಲಿಮಿಟೆಡ್ (ಸಿಡಿಜಿಎಲ್) ಕಂಪನಿಯು ಜೂನ್ ತ್ರೈಮಾಸಿಕದಲ್ಲಿ ₹24.57 ಕೋಟಿ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹11.73 ಕೋಟಿ ನಷ್ಟ ಅನುಭವಿಸಿತ್ತು. ಕಂಪನಿಯ ಕಾರ್ಯಾಚರಣೆ ವರಮಾನವು ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹189.63 ಕೋಟಿ ಇದ್ದಿದ್ದು ಈ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹223.20 ಕೋಟಿಗೆ ಏರಿಕೆ ಆಗಿದೆ.

ಸಿಡಿಜಿಎಲ್ ಕಂಪನಿಯು ಷೇರುಪೇಟೆಯಲ್ಲಿ ನೋಂದಾಯಿತ ಆಗಿಲ್ಲ. ಆದರೆ ಅದರ ಮಾತೃ ಸಂಸ್ಥೆಯಾಗಿರುವ ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್ (ಸಿಡಿಇಎಲ್) ಈ ವಿವರಗಳನ್ನು ಷೇರುಪೇಟೆಗೆ ಸಲ್ಲಿಸುತ್ತದೆ.



ಕಂಪನಿಯು ಹೊಂದಿರುವ ಸಿಸಿಡಿ ಮಳಿಗೆಗಳ ಸಂಖ್ಯೆಯು 467ಕ್ಕೆ ತಗ್ಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು 493 ಮಳಿಗೆಗಳನ್ನು ಹೊಂದಿತ್ತು.



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಗಿರೀಶ್ ಜೆತ್ತಪ್ಪ ಕೆ.ಕೆ.

- **ಪ್ರಶ್ನೆ: ನಾನು ಮ್ಯೂಚುವಲ್ ಫಂಡ್ ಎಸ್‌ಐಪಿ ಹೂಡಿಕೆ ಮಾಡಬೇಕು ಅಂದುಕೊಂಡಿದ್ದೇನೆ. ತಿಂಗಳಿಗೆ ಕನಿಷ್ಠ ₹10 ಸಾವಿರ ಹೂಡಿಕೆ ಮಾಡಿದರೆ ದೀರ್ಘಾವಧಿಯಲ್ಲಿ ಎಷ್ಟು ಲಾಭ ಸಿಗಬಹುದು, ಯಾವ ರೀತಿಯಲ್ಲಿ ಹೂಡಿಕೆ ಮಾಡಬೇಕು ಹಾಗೂ ಯಾವುದರಲ್ಲಿ ಹೂಡಿಕೆ ಮಾಡಬೇಕು? ನಾನು ಮೊದಲ ಬಾರಿಗೆ ಈ ಹೂಡಿಕೆ ಮಾಡುತ್ತಿದ್ದೇನೆ.**

ಉತ್ತರ: ನೀವು ನಿಮ್ಮ ಹೂಡಿಕೆಯ ಪಯಣದ ಆರಂಭದ ಹಂತದಲ್ಲಿದ್ದೀರಿ ಎಂಬುದನ್ನು ಪ್ರಶ್ನೆಯಲ್ಲಿ ತಿಳಿಸಿರುತ್ತೀರಿ. ಆರ್ಥಿಕ ಸ್ವಾತಂತ್ರ್ಯ ನಿಮ್ಮ ಕನಸು ಕೂಡ ಆಗಿರಬಹುದು. ಇಂದು ಅನೇಕ ಹೂಡಿಕೆ ಅವಕಾಶಗಳು ಲಭ್ಯವಿದ್ದರೂ, ಸಾಮಾನ್ಯವಾಗಿ ಮ್ಯೂಚುವಲ್ ಫಂಡ್‌ಗಳನ್ನೇ ಮೊದಲ ಆಯ್ಕೆಯಾಗಿ ಪರಿಗಣಿಸಲಾಗುತ್ತದೆ. ಇದಕ್ಕೆ ಸರಳ ಕಾರಣವೆಂದರೆ ಅವುಗಳನ್ನು ಎಸ್‌ಐಪಿ ರೀತಿಯಲ್ಲಿ ಹಾಗೂ ಮ್ಯೂಚುವಲ್ ಫಂಡ್ ಕಂಪನಿಗಳ ಪರಿಣತರ ಮೂಲಕ ನಿರ್ವಹಿಸಲಾಗುತ್ತಿರುವುದು. ಮಾತ್ರವಲ್ಲದೆ ಆರಂಭದ ಹಂತದ ಹೂಡಿಕೆದಾರರಿಗೆ ಇದು ಅನುಭವ ಕೊಡುವ ಕ್ಷೇತ್ರವಾದರೆ, ದೊಡ್ಡ ಹೂಡಿಕೆದಾರರಿಗೆ ಇದು ಲಾಭ ಒದಗಿಸಿಕೊಡುವ ಕ್ಷೇತ್ರ. ನೀವು ಮೊದಲ ಬಾರಿಗೆ ಹೂಡಿಕೆ ಮಾಡುತ್ತಿರುವುದರಿಂದ, ಈ ಕೆಳಗಿನ ಅಂಶಗಳನ್ನು ಗಮನಿಸಿ.

1. ಮ್ಯೂಚುವಲ್ ಫಂಡ್‌ಗಳಲ್ಲಿನ ಒಂದು ಉತ್ತಮ ವಿಚಾರವೆಂದರೆ, ₹100ರಿಂದಲೂ ಹೂಡಿಕೆ ಆರಂಭಿಸಬಹುದು. ತಿಂಗಳ ಎಸ್‌ಐಪಿ ಮೂಲಕ ಹೂಡಿಕೆ ಆರಂಭಿಸಬಹುದು. ಹೀಗಾಗಿ ಮೊದಲ ಹಂತದ ಹೂಡಿಕೆ ಅನುಭವಕ್ಕೆ ಇದೊಂದು ದೊಡ್ಡ ಪ್ರಯೋಗಾಲಯವೇ ಸರಿ. ಹೀಗಾಗಿ ಯಾವುದೇ ನಷ್ಟದ ಅಂಜಿಕೆ ಬೇಡ.
2. ನಂತರದ ಹಂತದ ಹೂಡಿಕೆ ಅನುಭವ ಪಡೆಯಲು ಇಂಡೆಕ್ಸ್ ಫಂಡ್‌ಗಳು ಉತ್ತಮ. ಪ್ರತಿದಿನ ಪ್ರಮುಖ ಸೂಚ್ಯಂಕಗಳಲ್ಲಾಗುವ ಏರಿಕೆ, ಇಳಿಕೆಯ ಅನುಸಾರ ಇಂಡೆಕ್ಸ್ ಫಂಡ್ ಯೂನಿಟ್ ಮೌಲ್ಯವೂ ಬದಲಾಗುತ್ತದೆ. ನಿಮ್ಮ ಕೆಲವು ಎಸ್‌ಐಪಿ ಹೂಡಿಕೆಗಳು ಇದರಲ್ಲಿ ಇರಲಿ. ಮಾರುಕಟ್ಟೆ ಪದೇ ಪದೇ ಕೆಳ ಹಂತವನ್ನು ಪ್ರವೇಶಿಸುತ್ತಿದ್ದಂತೆ ಹೆಚ್ಚುವರಿ ಹೂಡಿಕೆಯನ್ನು ಮಾಡಬಹುದು. ಇಂಡೆಕ್ಸ್ ಫಂಡ್‌ಗಳು ಒಟ್ಟಾರೆ ಮಾರುಕಟ್ಟೆಯನ್ನು ಯಥಾವತ್ ಪ್ರತಿಬಿಂಬಿಸುವ ಕಾರಣ ಲಾಭ-ನಷ್ಟ ಅದೇ ಪ್ರಮಾಣದಲ್ಲಿರುತ್ತದೆ.
3. ವಿವಿಧ ವರ್ಗಗಳ ಹೂಡಿಕೆಗಳಲ್ಲಿ ಬೇರೆ ಬೇರೆ ಮಟ್ಟದ ಆರ್ಥಿಕ ರಿಸ್ಕ್‌ಗಳು ಹಾಗೂ ಅದಕ್ಕೆ ತಕ್ಕಂತೆ ಲಾಭ-ನಷ್ಟ ಇರುತ್ತವೆ. ಉದಾಹರಣೆಗೆ, ಈಕ್ವಿಟಿ ಫಂಡ್, ಬ್ಯಾಲೆನ್ಸ್ಡ್ ಫಂಡ್, ಡೆಟ್ ಫಂಡ್, ಲಿಕ್ವಿಡ್ ಫಂಡ್, ಇಂಡೆಕ್ಸ್ ಫಂಡ್ ಇತ್ಯಾದಿಗಳು ವಿವಿಧ ವರ್ಗಗಳ ಹೂಡಿಕೆದಾರರನ್ನು ಉದ್ದೇಶಿಸಿ ರೂಪಿತವಾಗಿವೆ. ಈಕ್ವಿಟಿ, ಇಂಡೆಕ್ಸ್ ಹಾಗೂ ಬ್ಯಾಲೆನ್ಸ್ಡ್ ಫಂಡ್‌ಗಳು ಮಾರುಕಟ್ಟೆಯ ಗತಿಗೆ ಹೆಚ್ಚು ಸ್ಪಂದಿಸುತ್ತವೆ.
4. ನೀವು ಪ್ರತಿ ತಿಂಗಳು ₹10,000 ಹೂಡಿಕೆ ಮಾಡುವ ನಿರ್ಧಾರ ಕೈಗೊಂಡಿದ್ದೀರಿ. ಮುಂದಿನ ಹಂತದಲ್ಲಿ ಈ ಮೊತ್ತವನ್ನು ವಿವಿಧ ವರ್ಗಗಳ ಹೂಡಿಕೆಗಳಲ್ಲಿ ಹಂಚಿಕೆ ಮಾಡಿ. ಅದಕ್ಕಾಗಿ ಮೇಲಿನ ಮಾಹಿತಿಯಂತೆ ಹೂಡಿಕೆ ಮಾಡಿ ಗಳಿಸಿದ ಅನುಭವವನ್ನೇ ಇನ್ನಷ್ಟು ವಿಸ್ತಾರವಾಗಿ ಈ ಹಂತದಲ್ಲಿ ಬಳಸಿಕೊಳ್ಳಿ. ಪ್ರತಿ ಏರಿಳಿತದ ಕಾರಣಗಳನ್ನು ಗಮನಿಸಿ ಹಾಗೂ ದಾಖಲಿಸಿ. ಇದು ಮುಂದಿನ ಹೂಡಿಕೆಗೆ ಮಹತ್ವದ ತಿರುವು ಕೊಡುತ್ತದೆ.
5. ಪ್ರತಿ ಹೂಡಿಕೆದಾರನೂ ತನ್ನ ವೈಯಕ್ತಿಕ ಆರ್ಥಿಕ ರಿಸ್ಕ್ ಸಾಮರ್ಥ್ಯ, ಹೂಡಿಕೆಗಳ ಒಟ್ಟಾರೆ ಗುರಿ ಮತ್ತು ಎಷ್ಟು ಸಮಯದವರೆಗೆ ಹಣವನ್ನು ತೊಡಗಿಸಲಾಗುತ್ತದೆ ಎಂಬ ಬಗ್ಗೆ ಅರಿವು ಹೊಂದಿರಬೇಕಾಗುತ್ತದೆ. ಇದಿಲ್ಲದಿದ್ದರೆ, ಮಾಡುವ ಹೂಡಿಕೆ ಸರಿಯಾಗದು.
6. ಎಸ್‌ಐಪಿ ಮಾರ್ಗವು ಪ್ರತಿದಿನವೂ ಮಾರುಕಟ್ಟೆಯ ಗತಿಯನ್ನು ವಿಶ್ಲೇಷಿಸಿ ಹೂಡಿಕೆ ಮಾಡುವ ತತ್ವಕ್ಕೆ ಸರಿಹೊಂದದ ಹೂಡಿಕೆ ತಂತ್ರವಾದರೂ, ನಮ್ಮಲ್ಲಿ ಇದು ಹೂಡಿಕೆ ಬಗೆಗೆ ಇರುವ ಬದ್ಧತೆಯನ್ನು ಹೆಚ್ಚಿಸುತ್ತದೆ. ಕೆಲವು ಬಾರಿ ಮಾರುಕಟ್ಟೆ ಕೆಳಮಟ್ಟ ತಲುಪಿದಾಗ ನಮ್ಮದೇ ಹೂಡಿಕೆಗಳಿಗೆ ಬಲ ತುಂಬಲು ಹೆಚ್ಚುವರಿ ಹಣ ಹೂಡಿಕೆ ಮಾಡಬಹುದು. ಅದಕ್ಕಾಗಿ ಮಾರುಕಟ್ಟೆಯ ಬಗ್ಗೆ ಒಂದಷ್ಟು ನಿಗಾ ಬೇಕು ಹಾಗೂ ಸತತ ಅಧ್ಯಯನ ಬೇಕು. ಇದುವೇ ನಿಮ್ಮ ಮುಂದಿನ ಗುರಿ ಹಾಗೂ ಲಾಭವನ್ನು ನಿರ್ಧರಿಸುತ್ತದೆ.

ಶಶಿಕಲಾ, ಕೆಂಗೇರಿ, ಬೆಂಗಳೂರು

- **ಪ್ರಶ್ನೆ: ನಾನು ಜನವರಿಯಿಂದ ಖಾಸಗಿ ಸಂಸ್ಥೆಯೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಮಾಸಿಕ ₹62,000 ವೇತನ ಪಡೆಯುತ್ತಿದ್ದೇನೆ. ತಿಂಗಳಿಗೆ ₹1,800 ಪಿಎಫ್ ಹಾಗೂ ₹200 ವೃತ್ತಿ ತೆರಿಗೆ ಕಡಿತವಾಗುತ್ತಿದೆ. ಆರೋಗ್ಯ ವಿಮೆ ₹5,000, ಬ್ಯಾಂಕಿನ ಪಿಪಿಎಫ್ ಮಾಸಿಕ ₹5,000 ಇದೆ. ಆದಾಯ ತೆರಿಗೆ ಬರದಂತೆ ಬೇರೆ ಏನು ಉಳಿತಾಯ ಮಾಡಬಹುದು?**

ಉತ್ತರ: ನೀವು ತಿಳಿಸಿರುವ ಮಾಹಿತಿಯಂತೆ ನಿಮ್ಮ ವಾರ್ಷಿಕ ವೇತನ ₹7.44 ಲಕ್ಷ. ಉಳಿದಂತೆ ಪಿಎಫ್, ವಿಮಾ ಪಾವತಿ, ಪಿಪಿಎಫ್ ಇತ್ಯಾದಿಗಳು ಹೆಚ್ಚುವರಿ ಹೂಡಿಕೆಗಳು. ಪ್ರಸ್ತುತ ಆರ್ಥಿಕ ವರ್ಷದಿಂದ ಎಲ್ಲ ವೇತನದಾರರಿಗೆ ಅನ್ವಯವಾಗುವಂತೆ, ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡಿದರೂ, ₹50,000 ಸ್ಟ್ಯಾಂಡರ್ಡ್ ಡಿಡಕ್ಷನ್ ಇರುತ್ತದೆ. ಮಾತ್ರವಲ್ಲದೆ, ಸೆಕ್ಷನ್ 87ಎ ಅಡಿಯಲ್ಲಿ ವಿನಾಯಿತಿಯಾಗಿ ₹7 ಲಕ್ಷದವರೆಗಿನ ತೆರಿಗೆ ಆದಾಯ ಹೊಂದಿರುವ ನಿವಾಸಿ ವ್ಯಕ್ತಿಗಳಿಗೆ ₹25,000ದತನಕ ತೆರಿಗೆ ವಿನಾಯಿತಿ ಇದೆ.

ಈ ಅಂಶವನ್ನು ಗಮನಿಸಿದರೆ, ನಿಮ್ಮ ಆದಾಯ ₹7 ಲಕ್ಷಕ್ಕಿಂತ ತುಸು ಕಡಿಮೆಯಾಗಿಯೇ ಇರಲಿದೆ. ಹೀಗಾಗಿ ಈ ವರ್ಷಕ್ಕೆ ಸಂಬಂಧಿಸಿ ಹೊಸ ತೆರಿಗೆ ಪದ್ಧತಿ ಅನುಸರಿಸಿದರೆ ತೆರಿಗೆ ಇರುವುದಿಲ್ಲ. ಆದರೆ ಮುಂದಿನ ವರ್ಷಗಳಲ್ಲಿ ಆದಾಯ ವೃದ್ಧಿಯಾಗುವ ನಿರೀಕ್ಷೆ ಇದ್ದರೆ, ಸೆಕ್ಷನ್ 80ಸಿ ಅಡಿ ಮಾನ್ಯ ಮಾಡಲಾದ ₹1.50 ಲಕ್ಷದ ತನಕದ ಹೂಡಿಕೆ ಹಾಗೂ ಸೆಕ್ಷನ್ 80 ಸಿಸಿಡಿ(1ಬಿ) ಅಡಿ ಎನ್‌ಪಿಎಸ್‌ನಲ್ಲಿ ₹50,000 ಹೂಡಿಕೆ ಮಾಡಿ ಹೆಚ್ಚುವರಿ ವಿನಾಯಿತಿ ಪಡೆಯಬಹುದು. ಈ ಸಂದರ್ಭದಲ್ಲಿ ಹಳೆಯ ತೆರಿಗೆ ಪದ್ಧತಿ ಆಯ್ಕೆ ಮಾಡುವುದು ಅನುಕೂಲವಾಗಬಹುದು. ಇದಕ್ಕಾಗಿ ನಿಖರ ಆದಾಯದೊಂದಿಗೆ ಮತ್ತೊಮ್ಮೆ ತೆರಿಗೆ ಸಲಹೆ ಅನಿವಾರ್ಯ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಜಾಗತಿಕ ಮಾರುಕಟ್ಟೆಗೆ ಮಹೀಂದ್ರ ‘ಒಜಾ’

● ಯತೀಶ್ ಕುಮಾರ್ ಜಿ.ಡಿ.

ಕೇಪ್‌ಟೌನ್ (ದಕ್ಷಿಣ ಆಫ್ರಿಕಾ): ಕಡಿಮೆ ತೂಕ ಹಾಗೂ ಅಧಿಕ ಕಾರ್ಯಕ್ಷಮತೆಯ 4X4 ಟ್ರ್ಯಾಕ್ಟರ್ ‘ಒಜಾ’ವನ್ನು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಜಾಗತಿಕ ಮಾರುಕಟ್ಟೆಗೆ ಇಲ್ಲಿ ಮಂಗಳವಾರ ಬಿಡುಗಡೆ ಮಾಡಿತು. ಇದರೊಂದಿಗೆ ಬ್ಯಾಟರಿ ಚಾಲಿತ ‘ಥಾರ್’ ಹಾಗೂ ಪಿಕಪ್ ವಾಹನವನ್ನು ಕೂಡ ಪರಿಚಯಿಸಿತು.

ಸಂಗೀತ ಮಾಂತ್ರಿಕ ಎ.ಆರ್. ರೆಹಮಾನ್ ಸಮ್ಮುಖದಲ್ಲಿ ಕಂಪನಿಯು ಈ ವಾಹನಗಳನ್ನು ಬಿಡುಗಡೆ ಮಾಡಿತು. ರೆಹಮಾನ್ ಸಂಯೋಜನೆಯ ಸಂಗೀತವನ್ನು ಕಾರುಗಳಲ್ಲಿ ಬಳಸಲು ಕಂಪನಿಯು ಒಪ್ಪಂದ ಮಾಡಿಕೊಂಡಿದೆ. ‘ಹರ್ಮನ್’ ಮತ್ತು ‘ಡಾಲ್ಬಿ’ ಉತ್ಪನ್ನಗಳನ್ನು ಮಹೀಂದ್ರ ತನ್ನ ಹೊಸ ಮಾದರಿಯ ಕಾರುಗಳಲ್ಲಿ ಬಳಸುವ ಒಡಂಬಡಿಕೆ ಮಾಡಿಕೊಂಡಿರುವುದಾಗಿ ಕಂಪನಿಯ ಅಧಿಕಾರಿಗಳು ತಿಳಿಸಿದರು.

ಜಪಾನ್‌ನಲ್ಲಿರುವ ಮಿಟ್ಸುಬಿಷಿ ಮಹೀಂದ್ರ ಕೃಷಿ ಯಂತ್ರೋಪಕರಣ ಕಂಪನಿ ಮೂಲಕ ಅಭಿವೃದ್ಧಿಪಡಿಸಲಾದ ‘ಒಜಾ’ ಟ್ರ್ಯಾಕ್ಟರ್‌ನ ಏಳು ಮಾದರಿಗಳು ಭಾರತದಲ್ಲಿ ಲಭ್ಯ. ಜತೆಗೆ ಈ ಟ್ರ್ಯಾಕ್ಟರ್‌ಗಳು ಆರು ಖಂಡಗಳಿಗೆ ಪೂರೈಕೆ ಆಗಲಿವೆ ಎಂದು ಕಂಪನಿ ಹೇಳಿದೆ.



ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿ ಅನಾವರಣ ಮಾಡಿರುವ ಥಾರ್ ಇ.ವಿ. ಕಾನ್ಸೆಪ್ಟ್

ಈ ಕುರಿತು ಮಾಹಿತಿ ನೀಡಿದ ಕಂಪನಿ ಕೃಷಿ ವಿಭಾಗದ ಸಿಇಒ ವಿಕ್ರಂ ವಾಘಾ, ‘ಸಂಸ್ಕೃತದ ಓಜಸ್ ಪದದಿಂದ ಪ್ರೇರಣೆ ಪಡೆದು ಈ ಟ್ರ್ಯಾಕ್ಟರ್‌ಗೆ ಈ ಹೆಸರಿಡಲಾಗಿದೆ. ಇವುಗಳಲ್ಲಿ ಹೊಸ ತಂತ್ರಜ್ಞಾನ ಅಳವಡಿಸಲಾಗಿದೆ. ಭಾರತದಲ್ಲಿರುವ ಮಹೀಂದ್ರ ಸಂಶೋಧನಾ ಕೇಂದ್ರ ಹಾಗೂ ಜಪಾನ್‌ನಲ್ಲಿರುವ ಮಿಟ್ಸುಬಿಷಿ ಮಹೀಂದ್ರ ಕೃಷಿ ಯಂತ್ರೋಪಕರಣ ಸಂಶೋಧನಾ ಕೇಂದ್ರದಲ್ಲಿನ ವಿಜ್ಞಾನಿಗಳು ಜಂಟಿಯಾಗಿ ಇದನ್ನು ಅಭಿವೃದ್ಧಿಪಡಿಸಿದ್ದಾರೆ’ ಎಂದರು.

‘20ರಿಂದ 40 ಅಶ್ವಶಕ್ತಿ ಸಾಮರ್ಥ್ಯದ ಈ ಟ್ರ್ಯಾಕ್ಟರ್ ನಾಲ್ಕೂ ಚಕ್ರಗಳಿಗೆ ಶಕ್ತಿ ನೀಡುವ ಸಾಮರ್ಥ್ಯ ಹೊಂದಿದೆ. ಅಧಿಕ ಶಕ್ತಿ, ಯಾವುದೇ ಬಗೆಯ ನೆಲದ ಮೇಲೂ ನಿಯಂತ್ರಣ ಸಾಧಿಸುವ ಟ್ರ್ಯಾಕ್ಷನ್, ಇಂಧನ ಕ್ಷಮತೆ ಕಾಯ್ದುಕೊಂಡು ಅಧಿಕ ಶಕ್ತಿ ಉತ್ಪಾದಿಸುವ ಅತ್ಯಾಧುನಿಕ ಎಂಜಿನ್, ಚಾಲಕನ ಹಿತಕ್ಕೆ ಅನುಗುಣವಾಗುವಂತೆ ಟಿಲ್ಟ್ ಸೌಲಭ್ಯವಿರುವ ಟೆಲಿಸ್ಕೋಪಿಕ್ ಸ್ಟಿಯರಿಂಗ್, ಕಡಿಮೆ ನಿರ್ವಹಣಾ ವೆಚ್ಚ ಹೊಂದಿದೆ’ ಎಂದು ವಿವರಿಸಿದರು.

‘ಅಮೆರಿಕ, ಆಸಿಯಾನ್ ರಾಷ್ಟ್ರಗಳು, ಬ್ರೆಜಿಲ್, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಯುರೋಪ್ ಹಾಗೂ ಸಾರ್ಕ್ ದೇಶಗಳ ರೈತರ ಅಗತ್ಯಗಳನ್ನು ಇದು ಪೂರೈಸಲಿದೆ. 2024ರಲ್ಲಿ ಥಾಯ್ಲೆಂಡ್ ಅನ್ನೂ ಕಂಪನಿ ಪ್ರವೇಶಿಸಲಿದೆ. ಪುಣೆಯಲ್ಲಿ ಮಹೀಂದ್ರ ಒಜಾ ಟ್ರ್ಯಾಕ್ಟರ್‌ಗಳ ಬೆಲೆ ₹5.64ಲಕ್ಷದಿಂದ ₹7.35ಲಕ್ಷದವರೆಗಿದೆ’ ಎಂದು ವಿಕ್ರಂ ತಿಳಿಸಿದರು.

ಐದು ಬಾಗಿಲುಳ್ಳ ಹೊಸ ಮಾದರಿಯ ಥಾರ್ ಇ.ವಿ. ಕಾನ್ಸೆಪ್ಟ್ ಮಾದರಿಯನ್ನು ಮಹೀಂದ್ರ ಅಭಿವೃದ್ಧಿಪಡಿಸಿದೆ. ಮರುಬಳಕೆಯ ಪ್ಲಾಸ್ಟಿಕ್ ಹಾಗೂ ಇತರ ಬಿಡಿ ಭಾಗಗಳ ಬಳಕೆಯ ಜತೆಗೆ ಹಲವು ಹೊಸತುಗಳನ್ನು ಇದರಲ್ಲಿ ಅಳವಡಿಸಲಾಗಿದೆ. ಇದರ ಜತೆಗೆ ಪಿಕಪ್ ವಾಹನದ ಕಾನ್ಸೆಪ್ಟ್ ಮಾದರಿಯನ್ನು ಕೂಡ ಇದೇ ವೇದಿಕೆಯಲ್ಲಿ ಮಹೀಂದ್ರ ಪರಿಚಯಿಸಿತು.

(ಕಂಪನಿ ಆಹ್ವಾನದ ಮೇರೆಗೆ ಪ್ರತಿನಿಧಿ ಕೇಪ್‌ಟೌನ್‌ಗೆ ತೆರಳಿದ್ದಾರೆ)

ಭರ್ತಿಯಾಗದ 200ಕ್ಕೂ ಹೆಚ್ಚು ಹುದ್ದೆ

ಒಂದನೇ ಪುಟದಿಂದ

ಕರ್ನಾಟಕದಲ್ಲಿ ತಹಶೀಲ್ದಾರ್‌ಗಳ ಶ್ರೇಣಿ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ಸಮನಾಗಿದೆ. ತಹಶೀಲ್ದಾರ್ ದಂಡಾಧಿಕಾರಿಗಳೂ ಆಗಿರುವುದರಿಂದ ಶಿಷ್ಟಾಚಾರದ ಪ್ರಕಾರ ತಾಲ್ಲೂಕಿನ ಅಧಿಕಾರಿಗಳ ಪಟ್ಟಿಯಲ್ಲಿ ಮೊದಲಿರುತ್ತಾರೆ. ಹಾಗಾಗಿ, ಅವರಿಗೆ ಗ್ರೂಪ್ ‘ಎ’ ಸ್ಥಾನ ನೀಡಬೇಕು. ತಹಶೀಲ್ದಾರ್ ಗ್ರೇಡ್-1, ಗ್ರೇಡ್-2 ಎನ್ನುವ ವಿಭಜನೆ ಕೈಬಿಡಬೇಕು ಎಂದು ವರದಿ ಹೇಳಿದೆ.

ಕಿರಿಯರಿಗೆ ಮೇಲಿನ ಹುದ್ದೆ: ತಹಶೀಲ್ದಾರ್ ಗ್ರೇಡ್-2ನಿಂದ ವಿವಿಧ ಹಂತಗಳಿಗೆ ಕಾಲಕಾಲಕ್ಕೆ ಬಡ್ತಿಗಳನ್ನು ನೀಡಿದರೂ, ಬಡ್ತಿಗೆ ತಕ್ಕಂತೆ ವ್ಯವಸ್ಥಿತ ಶ್ರೇಣಿ ಪದ್ಧತಿ ಅನುಸರಿಸದ ಕಾರಣ ಸ್ಥಾನಮಾನಗಳಲ್ಲಿ ವ್ಯತ್ಯಾಸಗಳಾಗಿವೆ. ಕೆಲ ಕಿರಿಯ ಅಧಿಕಾರಿಗಳು ಪ್ರಭಾವ ಬಳಸಿ ಉನ್ನತ ಸ್ಥಾನ ಅಲಂಕರಿಸಿದ್ದಾರೆ. ಹಿರಿಯ ಅಧಿಕಾರಿಗಳು ಕೆಳ ಹಂತದ ಹುದ್ದೆಗಳಲ್ಲೇ ಕೆಲಸ ಮಾಡುತ್ತಿದ್ದಾರೆ. ವರ್ಗಾವಣೆ ಸಮಯದಲ್ಲಿ ಪ್ರಭಾವ ಬಳಸಿಕೊಳ್ಳುವ ಕೆಲ ಕೆಎಎಸ್ ಅಧಿಕಾರಿಗಳು ಸದಾ ಕಾರ್ಯನಿರ್ವಾಹಕ ಹುದ್ದೆಗಳನ್ನೇ ಪಡೆಯುತ್ತಿದ್ದಾರೆ. ಪ್ರತಿಭಾವಂತರು ‘ನಾನ್ ಎಕ್ಸಿಕ್ಯೂಟಿವ್’ನಲ್ಲೇ ಸೇವೆಯನ್ನು ಪೂರೈಸುತ್ತಿದ್ದಾರೆ. ರಾಜಕೀಯ ಪ್ರಭಾವ, ಪಕ್ಷಪಾತ, ಹಣಕಾಸಿನ ವ್ಯವಹಾರಗಳು ವರ್ಗಾವಣೆಯಲ್ಲಿ ಪ್ರಭಾವ ಬೀರಿವೆ ಎನ್ನುವುದನ್ನು ವರದಿ ಒತ್ತಿ ಹೇಳಿದೆ. ವರ್ಗಾವಣೆಯ ನಂತರ ಆ ಸ್ಥಾನದಲ್ಲಿ ಇರಬೇಕಾದ ಅವಧಿಯೂ ಅನಿಶ್ಚಿತವಾಗಿದೆ. ಇದರಿಂದ ಅಧಿಕಾರಿಗಳು ತಮ್ಮ ಸ್ಥಾನಕ್ಕೆ ನ್ಯಾಯ ಸಲ್ಲಿಸಲು ಆಗುತ್ತಿಲ್ಲ. ಆಡಳಿತದಲ್ಲಿ ದಕ್ಷತೆಯ ಕುಸಿತಕ್ಕೂ ಇದು ದಾರಿಮಾಡಿಕೊಟ್ಟಿದೆ ಎನ್ನುವುದನ್ನು ಅನಾವರಣ ಮಾಡಿದೆ.

ಮಂಜೂರಾದ ಹುದ್ದೆ	ವರ್ಷ	ಖಾಲಿ ಹುದ್ದೆಗಳು
590	2011	379
	2014	359
	2017	315
	2019	327
	2022	393

ಕೈತಪ್ಪಿದ ಹುದ್ದೆಗಳು	ಸಂಖ್ಯೆ
ತಾ.ಪಂ ಇಒ	70
ಉಪ ಕಾರ್ಯದರ್ಶಿ	28
ಸಹಾಯಕ ಕಾರ್ಯದರ್ಶಿ	28
ಸಿಇಒ	12

ಶ್ರೇಣಿ ವ್ಯವಸ್ಥೆ ಸರಿಯಾಗಿ ನಿರ್ವಹಿಸದ ಕಾರಣ ಬಡ್ತಿ ಪಡೆದವರಿಗೂ ಅರ್ಹತೆಗೆ ತಕ್ಕ ಹುದ್ದೆ ಸಿಗುತ್ತಿಲ್ಲ. ಶೇ 50ರಷ್ಟು ಐಎಎಸ್ ಹುದ್ದೆ ಕೆಎಎಸ್‌ನವರಿಗೆಗೆ ಮೀಸಲಿಡಬೇಕೆಂಬ ಬೇಡಿಕೆ ಈಡೇರಿಲ್ಲ.
–**ರವಿ ಎಂ. ತಿರ್ಲಾಪೂರ,** ಅಧ್ಯಕ್ಷ, ರಾಜ್ಯ ಕೆಎಎಸ್ ಅಧಿಕಾರಿಗಳ ಸಂಘ

ತಹಶೀಲ್ದಾರ್‌ಗಳನ್ನು ಗ್ರೂಪ್ ‘ಎ’ಗೆ ನೇಮಕ ಮಾಡಿಕೊಳ್ಳಬೇಕು. ಈಗಿರುವ 56 ಉಪ ವಿಭಾಗಗಳನ್ನು ದುಪ್ಪಟ್ಟುಗೊಳಿಸಬೇಕು.
–**ಡಾ.ಬಿ.ಆರ್.ಹರೀಶ್ ನಾಯ್ಕ್,** ಕಾರ್ಯದರ್ಶಿ, ರಾಜ್ಯ ಕೆಎಎಸ್ ಅಧಿಕಾರಿಗಳ ಸಂಘ.

ಕೃಷ್ಣಾರೆಡ್ಡಿಗಾಗಿ ಪ್ರತ್ಯೇಕ ಪ್ರಾಧಿಕಾರ

ಒಂದನೇ ಪುಟದಿಂದ

ಅದರ ಬದಲು, ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದವರ ಪ್ರಸ್ತಾವನೆ ಆಧರಿಸಿ ‘ಕರ್ನಾಟಕ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ(ಕೆಆರ್‌ಆರ್‌ಡಿಎ)’ ರಚಿಸಿರುವುದು ಇಲಾಖೆಯಲ್ಲಿ ಚರ್ಚೆ ಹುಟ್ಟುಹಾಕಿದೆ.

ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಂಡ ಒಂದೇ ವಾರದೊಳಗೆ ಈ ಹುದ್ದೆಗೆ ಕೆ.ಎಸ್. ಕೃಷ್ಣಾರೆಡ್ಡಿ ಅವರನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ (ಸಿಇಒ) ನೇಮಕ ಮಾಡಲಾಗಿದೆ. ನಿವೃತ್ತರಾಗುವಾಗ ಕಾರ್ಯದರ್ಶಿ ಹುದ್ದೆ ನಿಭಾಯಿಸಿದ್ದರೂ ಈಗ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯ (ಸಾಮಾನ್ಯವಾಗಿ ಐಎಎಸ್ ಅಧಿಕಾರಿಗಳಿಗೆ ನೀಡುವ ಹುದ್ದೆ) ಸೌಲಭ್ಯವನ್ನು ಒದಗಿಸುವಂತೆ ಆದೇಶಿಸಲಾಗಿದೆ.

‘ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ (ಪಿಪಿಪಿ) ಅಡಿ ರಸ್ತೆ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಪ್ರಾಧಿಕಾರ ರಚಿಸುವ ಬಗ್ಗೆ ಸಚಿವ ಸಂಪುಟದ ಮುಂದೆ ಪ್ರಸ್ತಾವನೆ ಸಲ್ಲಿಕೆಯಾಗಿತ್ತು. ವಿದೇಶಿ ಅಥವಾ ಸ್ವದೇಶಿ ಸಂಸ್ಥೆಗಳ ನೆರವಿನಿಂದ ಪಿಪಿಪಿ ಮಾದರಿಯಡಿ ಯೋಜನೆ ಜಾರಿ ಮಾಡಲು ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆ (ಕೆ ಶಿಪ್) ಅಸ್ತಿತ್ವದಲ್ಲಿದೆ. ರಾಜ್ಯದ ವಿವಿಧ ಜಿಲ್ಲೆಗಳನ್ನು ಸಂಪರ್ಕಿಸುವ ರಸ್ತೆಗಳನ್ನು ನಿರ್ಮಿಸಿ, ಟೋಲ್ ಸಂಗ್ರಹವನ್ನೂ ಮಾಡುತ್ತಿದೆ. ಹೀಗಿರುವಾಗ, ಮತ್ತೊಂದು ಪ್ರಾಧಿಕಾರ ಅನಗತ್ಯ ಎಂದು ತೀರ್ಮಾನಿಸಿ, ವಿಷಯವನ್ನು ಕೈಬಿಡಲಾಗಿತ್ತು. ಕೃಷ್ಣಾರೆಡ್ಡಿಯವರು ವಿಶೇಷ ಪ್ರಭಾವ ಬೀರಿ, ಮತ್ತೊಂದು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ಅನುಮೋದನೆ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ಹೇಳಿದರು.

ರಸ್ತೆ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಲೋಕೋಪಯೋಗಿ ಇಲಾಖೆ ಇದ್ದು, ಅದಕ್ಕೆ ಪ್ರಧಾನ ಕಾರ್ಯದರ್ಶಿ(ಐಎಎಸ್), ಕಾರ್ಯದರ್ಶಿ, ವಿಭಾಗಕ್ಕೆ ಒಬ್ಬರಂತೆ ನಾಲ್ವರು ಮುಖ್ಯ ಎಂಜಿನಿಯರ್ ಇದ್ದಾರೆ. ರಾಜ್ಯ ಹೆದ್ದಾರಿಗಳ ನಿರ್ವಹಣೆಗಾಗಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ(ಎಸ್‌ಎಚ್‌ಡಿಪಿ) ಕೆಲಸ ನಿರ್ವಹಿಸುತ್ತಿದ್ದು, ಮುಖ್ಯ ಎಂಜಿನಿಯರ್ ಶ್ರೇಣಿಯ ಅಧಿಕಾರಿ ಇದರ ಉಸ್ತುವಾರಿಯಲ್ಲಿದ್ದಾರೆ. ಇದರ ಜತೆಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ(ಕೆಆರ್‌ಡಿಸಿಎಲ್) ಹಾಗೂ ಕೆ ಶಿಪ್ ಚಾಲ್ತಿಯಲ್ಲಿವೆ.

ತಾಂತ್ರಿಕ ಪರಿಣತಿ ಇಲ್ಲ: ಪಿಪಿಪಿ ಮಾದರಿಯಡಿ ಬಂಡವಾಳ ಹೂಡಿಕೆ ಮಾಡಿಸಬೇಕೆಂದೇ ನಿಗಮ ಮಾಡುವುದಾದಲ್ಲಿ, ಐಎಎಸ್ ಅಧಿಕಾರಿಯನ್ನೇ ಸಿಇಒ ಹುದ್ದೆಗೆ ವರ್ಗಾವಣೆ ಮಾಡಬಹುದಿತ್ತು. ಅದರ ಬದಲು, ನಿವೃತ್ತ ಅಧಿಕಾರಿಗೆ ಮಹತ್ವದ ಹುದ್ದೆ ನೀಡಿರುವುದು ಸರಿಯಲ್ಲ ಎಂದು ಇಲಾಖೆಯ ಅಧಿಕಾರಿಗಳೇ ತಕರಾರು ತೆಗೆದಿದ್ದಾರೆ.

ಇಲಾಖೆಯವರನ್ನೇ ನೇಮಕ ಮಾಡಬಹುದಾಗಿದ್ದರೆ ಬಿ.ಇ. ಸಿವಿಲ್ ಅಭ್ಯಾಸ ಮಾಡಿ ತಾಂತ್ರಿಕ ಪರಿಣತಿ ಇರುವ, ಸದ್ಯ ಇಲಾಖೆಯಲ್ಲಿಯೇ ಇರುವ ಮುಖ್ಯ ಎಂಜಿನಿಯರ್ ಶ್ರೇಣಿಯವರನ್ನು ನೇಮಕ ಮಾಡಬಹುದಿತ್ತು. ನಿವೃತ್ತರಾದವರಲ್ಲೂ ಸಾಕಷ್ಟು ಮಂದಿ ಇದ್ದರು. ಅವರೆಲ್ಲರನ್ನೂ ಬಿಟ್ಟು ಬಿ.ಇ. ಮೆಕ್ಯಾನಿಕಲ್ ಅಭ್ಯಾಸ ಮಾಡಿರುವ ಕೃಷ್ಣಾರೆಡ್ಡಿಯವರಿಗೆ ಹುದ್ದೆ ನೀಡಿರುವುದು ಅನುಮಾನಕ್ಕೆ ಕಾರಣವಾಗಿದೆ.

ಮಹಿಳೆ ಒಬಿಸಿ ಕಲ್ಯಾಣಕ್ಕೆ ವಿಶ್ವಕರ್ಮ ಯೋಜನೆ, ನಗರ ವಸತಿ ಯೋಜನೆ ಪ್ರಕಟಿಸಿದ ಪ್ರಧಾನಿ

ಓಲೈಕೆಗೆ ₹ 15 ಸಾವಿರ ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯ ಸಾರ್ವತ್ರಿಕ ಚುನಾವಣೆ ಹತ್ತಿರವಾಗುತ್ತಿರುವ ಬೆನ್ನಲ್ಲೇ, ಮಹಿಳೆಯರು ಮತ್ತು ಇತರೆ ಹಿಂದುಳಿದ ವರ್ಗಗಳ ಜನರನ್ನು ಓಲೈಸುವ ಯತ್ನವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ₹15 ಸಾವಿರ ಕೋಟಿ ವೆಚ್ಚದ 'ವಿಶ್ವಕರ್ಮ ಯೋಜನೆ'ಯನ್ನು ಘೋಷಿಸಿದರು.

ಈ ಯೋಜನೆಯ ಕಾರ್ಯಕ್ರಮಗಳು ಹಣದುಬ್ಬರದ ಸಂದರ್ಭದಲ್ಲಿ ಜನರ ಮೇಲಿನ ಹೊರೆ ತಗ್ಗಿಸಲು ನೆರವಾಗಲಿದೆ ಎಂದು ತಿಳಿಸಿದರು. ಕೆಂಪು ಕೋಟೆಯಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ಮಾಡಿ ಅವರು ಮಾತನಾಡಿದರು.

15 ಸಾವಿರ ಮಹಿಳಾ ಸ್ವಸಹಾಯ ಗುಂಪುಗಳಿಗೆ ಡ್ರೋನ್ ನಿರ್ವಹಣೆ, ದುರಸ್ತಿ ತರಬೇತಿ ನೀಡುವ ಯೋಜನೆ ಹಾಗೂ ನಗರಗಳಲ್ಲಿನ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗಾಗಿ ವಸತಿ ಯೋಜನೆ ಜಾರಿಗೊಳಿಸುವ ತೀರ್ಮಾನವನ್ನು ಪ್ರಧಾನಿ ಪ್ರಕಟಿಸಿದರು.

90 ನಿಮಿಷಗಳ ಭಾಷಣದಲ್ಲಿ ಪ್ರಧಾನಿ ಹೇಳಿದ್ದು: 'ವಿಶ್ವಕರ್ಮ ಜಯಂತಿಯಂದು ವಿವಿಧ ಯೋಜನೆಗಳನ್ನು ಪ್ರಕಟಿಸಲಿದ್ದೇವೆ. ನೇಯ್ಗೆದಾರರು, ಅಕ್ಕಸಾಲಿಗರು, ಕಂಬಾರರು, ಅಗಸರು, ಕ್ಷೌರಿಕರು ಹಾಗೂ ಇಂತಹ ವಿವಿಧ ವರ್ಗದ ಕುಟುಂಬಗಳ ಆರ್ಥಿಕ ಸಬಲೀಕರಣ ವಿಶ್ವಕರ್ಮ ಯೋಜನೆಯ ಉದ್ದೇಶವಾಗಿದೆ.

–ಈ ಯೋಜನೆಯನ್ನು ಸೆಪ್ಟೆಂಬರ್ 17, 2023ರಂದು ವಿಶ್ವಕರ್ಮ ಜಯಂತಿ ದಿನದಂದು ಆರಂಭಿಸಲಾಗುವುದು. (ಕಾಕತಾಳೀಯ ಎಂಬಂತೆ ಆ ದಿನ ಅವರ ಜನ್ಮದಿನವು ಆಗಿದೆ. ಸೆ. 17ರಂದು ಮೋದಿ 73ನೇ ವರ್ಷಕ್ಕೆ ಪದಾರ್ಪಣೆ ಮಾಡುವರು).

–ಮಹಿಳಾ ಸ್ವಸಹಾಯ ಗುಂಪುಗಳಿಗೆ (ಎಸ್‌ಎಚ್‌ಜಿ) ಡ್ರೋನ್ ತರಬೇತಿ ನೀಡುವ ಯೋಜನೆ ಆರಂಭಿಸುತ್ತೇವೆ. 15,000 ಮಹಿಳಾ ಸ್ವಸಹಾಯ ಗುಂಪುಗಳಿಗೆ ಸಾಲ ನೀಡುವುದು, ಡ್ರೋನ್‌ನ ನಿರ್ವಹಣೆ, ದುರಸ್ತಿ ಕುರಿತು ತರಬೇತಿ ನೀಡಲಾಗುತ್ತದೆ.

ಹಣದುಬ್ಬರ, ಬೆಲೆ ಏರಿಕೆ ಉಲ್ಲೇಖ: ಅಗತ್ಯವಸ್ತುಗಳ ಬೆಲೆ ಏರಿಕೆಯನ್ನು ಭಾಷಣದಲ್ಲಿ ಉಲ್ಲೇಖಿಸಿದ ಅವರು, ಹಣದುಬ್ಬರಕ್ಕೆ ಕಡಿವಾಣ ಹಾಕಲು ಇನ್ನಷ್ಟು ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯವಾಗಿದೆ ಎಂದು ಒಪ್ಪಿಕೊಂಡರು.

ದೇಶದಲ್ಲಿ ಚಿಲ್ಲರೆ ಹಣದುಬ್ಬರ ದರ ಈಗ ಗರಿಷ್ಠ ಮಟ್ಟವನ್ನು ಮೀರಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಟಿಸಿದ ಮಾರನೇ ದಿನವೇ ಈ ಅಂಶವನ್ನು ಉಲ್ಲೇಖಿಸಿದ್ದಾರೆ.

–ಹಣದುಬ್ಬರ ತಡೆಯಲು, ದೇಶವಾಸಿಗಳ ಮೇಲಿನ ಹೊರೆ ತಪ್ಪಿಸಲು ನಾನು ಇನ್ನಷ್ಟು ಕ್ರಮ ಕೈಗೊಳ್ಳಬೇಕಾಗಿದೆ. ಈ ಬಗ್ಗೆ ನನ್ನ ಪ್ರಯತ್ನ ಮುಂದುವರಿಯಲಿದೆ. ಆದರೆ, ಹಣದುಬ್ಬರ ತಡೆಯುವಲ್ಲಿ ಹಿಂದಿನ ಅವಧಿಗೆ ಹೋಲಿಸಿದರೆ, ನಾವು ಸ್ವಲ್ಪ ಯಶಸ್ಸು ಕಂಡಿದ್ದೇವೆ.

–ಅಗತ್ಯ ವಸ್ತುಗಳ ದರ ಏರಿಕೆಗೆ ರಷ್ಯಾ –ಉಕ್ರೇನ್ ಯುದ್ಧ ಕಾರಣ. ಕೊರೊನಾದ ಪ್ರತಿಕೂಲ ಪರಿಣಾಮಗಳಿಂದ ಜಗತ್ತು ಇನ್ನು ಹೊರಬಂದಿಲ್ಲ. ಈಗ ಯುದ್ಧ ಹೆಚ್ಚುವರಿ ಸಮಸ್ಯೆಗಳನ್ನು ಸೃಷ್ಟಿಸಿದೆ

ಇದು, ಇಡೀ ಜಗತ್ತು ಹಣದುಬ್ಬರ ಸಮಸ್ಯೆ ಎದುರಿಸುತ್ತಿದೆ. ನಾವು ಕೆಲವನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಏರಿಕೆ ದರದಲ್ಲಿಯೇ ಇವುಗಳನ್ನು ಆಮದು ಮಾಡಿಕೊಳ್ಳಬೇಕಾಗಿದೆ.

ಮುಖ್ಯಾಂಶಗಳು
- ಬೆಲೆ ಏರಿಕೆಗೆ ಉಕ್ರೇನ್–ರಷ್ಯಾ ಯುದ್ಧ ಕಾರಣ
- ನಗರಗಳ ಬಡ, ಮಧ್ಯಮ ವರ್ಗದ ಕುಟುಂಬಗಳಿಗೆ ವಸತಿ ಯೋಜನೆ
- ಹಣದುಬ್ಬರ ತಡೆಗೆ ಇನ್ನಷ್ಟು ಕ್ರಮ ಕೈಗೊಳ್ಳುವ ಭರವಸೆ



ಪ್ರಧಾನಿ ನರೇಂದ್ರ ಮೋದಿ ಅವರು ಕೆಂಪುಕೋಟೆಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು (ಎಡಚಿತ್ರ). 2014 ರಿಂದ 2022ರವರೆಗಿನ ಪ್ರಧಾನಿ ಭಾಷಣದ ಭಾವಭಂಗಿಯ ನೋಟ. –ಪಿಟಿಐ ಚಿತ್ರ

ಕಾರ್ಯಕ್ರಮಕ್ಕೆ ಖರ್ಗೆ ಗೈರು

ಒಂದನೇ ಪುಟದಿಂದ

'ವಂಶಾಡಳಿತ ಹಾಗೂ ಪಕ್ಷವನ್ನು ಮೀರಿ ಕಾಂಗ್ರೆಸ್ ಪಕ್ಷ ದೇಶದ ಬಗ್ಗೆ ಚಿಂತನೆ ಮಾಡಲಾಗದು ಎಂಬುದನ್ನು ಖರ್ಗೆ ಅವರ ಗೈರು ಹಾಜರಿ ತೋರಿಸುತ್ತದೆ' ಎಂದು ಬಿಜೆಪಿಯು ಟೀಕಿಸಿದೆ.

ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ, 'ನೀವು ಕಲಿಯಲು ಹಾಗೂ ಉತ್ತಮ ಪಡಿಸಿಕೊಳ್ಳಲು ಇನ್ನೂ ಐದು ವರ್ಷ ಸಮಯವಿದೆ. ಕಾಂಗ್ರೆಸ್ ಪಕ್ಷವು ಪಕ್ಷ ಮತ್ತು ವಂಶಾಡಳಿತ ಮೀರಿ ದೇಶದ ಬಗ್ಗೆ ಚಿಂತನೆ ನಡೆಸಲಿದೆ ಎಂದು ಆಶಿಸುತ್ತೇವೆ' ಎಂದಿದ್ದಾರೆ. 'ನನಗೆ ಕಣ್ಣಿನ ಸಮಸ್ಯೆ ಇದೆ. ಅಲ್ಲದೆ, ಭದ್ರತೆಯ ಕಾರಣಗಳಿಂದಾಗಿ ಪೂರ್ವನಿಗದಿತ ಇತರೆ ಕಾರ್ಯಕ್ರಮಗಳಿಗೆ ಹೋಗಲಾಗದು ಎಂಬ ಕಾರಣದಿಂದ ಭಾಗವಹಿಸಲಿಲ್ಲ' ಎಂದು ಖರ್ಗೆ ಅವರು ತಮ್ಮ ಗೈರುಹಾಜರಿಗೆ ಕಾರಣವನ್ನು ನೀಡಿದ್ದಾರೆ.

ಖರ್ಗೆ ಅವರು ಮೊದಲು ತಮ್ಮ ನಿವಾಸ ಹಾಗೂ ನಂತರ ಎಐಸಿಸಿ ಕೇಂದ್ರ ಕಚೇರಿಯಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿದರು. ಪಕ್ಷದ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಹುಲ್‌ಗಾಂಧಿ ಹಾಗೂ ಇತರ ಪ್ರಮುಖರು ಭಾಗವಹಿಸಿದ್ದರು.

ಶ್ರಮಿಕರು ಸೇರಿ 1,800 'ವಿಶೇಷ ಅತಿಥಿ'ಗಳು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸತತ 10ನೇ ವರ್ಷ, ಸ್ವಾತಂತ್ರ್ಯೋತ್ಸವ ದಿನದಂದು ಕೆಂಪುಕೋಟೆಯಲ್ಲಿ ಧ್ವಜಾರೋಹಣ ನೆರವೇರಿಸಿ, ಭಾಷಣ ಮಾಡಿದರು.

- ರಾಜಸ್ಥಾನಿ ಭಾಂದನಿ ಮುದ್ರಣವಿದ್ದ ಬಹುವರ್ಣದ ರುಮಾಲು, ಬಿಳಿ ಬಣ್ಣದ ಪೂರ್ಣತೋಳಿನ ಕುರ್ತಾ, ಪೈಜಾಮ, ವಿ–ನೆಕ್ ವಿನ್ಯಾಸದ ಜಾಕೆಟ್ ಧರಿಸಿ ಗಮನಸೆಳೆದರು.
- ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಕ್ಷಣಾ ಖಾತೆ ರಾಜ್ಯ ಸಚಿವ ಅಜಯ್ ಭಟ್ ಪ್ರಧಾನಿ ಬರಮಾಡಿಕೊಂಡರು. ರಕ್ಷಣಾ ಕಾರ್ಯದರ್ಶಿ ಅವರು ಜನರಲ್ ಆಫೀಸರ್ ಕಮ್ಯಾಂಡಿಂಗ್ (ಜಿಒಸಿ) ದೆಹಲಿ, ಲೆಫ್ಟಿನಂಟ್ ಧೀರಜ್ ಸೇಠ್ ಅವರನ್ನು ಪ್ರಧಾನಿಗೆ ಪರಿಚಯಿಸಿದರು.
- ಪ್ರಧಾನಿ ಪಥಸಂಚಲನ ವೀಕ್ಷಿಸಿ ವಂದನೆ ಸ್ವೀಕರಿಸಿದ ನಂತರ, ಬೆಳಿಗ್ಗೆ 7.30ಕ್ಕೆ ಧ್ವಜಾರೋಹಣ ಮಾಡಿದರು. ಸೇನೆಯ ಮಹಿಳಾ ಅಧಿಕಾರಿಗಳಾದ ಮೇಜರ್ ನಿಖಿತಾ ನಾಯರ್, ಜಾಸ್ಮೀನ್ ಕೌರ್ ಧ್ವಜಾರೋಹಣಕ್ಕೆ ನೆರವಾದರು
- ಪೊಲೀಸ್ ಬ್ಯಾಂಡ್‌ನವರು ರಾಷ್ಟ್ರಗೀತೆ ನುಡಿಸುತ್ತಿದ್ದಂತೆ, 21 ಕುಶಾಲತೋಪು ಸಿಡಿಸಲಾಯಿತು. ಮೊದಲ ಬಾರಿಗೆ ಧ್ವಜವಂದನೆಗೆ ದೇಶಿ ತಯಾರಿಕೆಯ 105 ಎಂ.ಎಂ.ನ ಲೈಟ್ ಫೀಲ್ಡ್ ಗನ್ ಬಳಸಲಾಯಿತು.
- ವಾಯುಪಡೆಯ ಹೆಲಿಕಾಪ್ಟರ್‌ಗಳು ಪುಷ್ಪವೃಷ್ಟಿ ಮಾಡಿದವು. ಸಭಿಕರು ಚಪ್ಪಾಳೆ ಮೂಲಕ ಮೆಚ್ಚುಗೆ ಸೂಚಿಸಿದರು. ಪ್ರಧಾನಿ 90 ನಿಮಿಷ ಮಾತನಾಡಿದ್ದು, 10ನೇ ವರ್ಷವೂ ಬುಲೆಟ್ ಪ್ರೂಫ್‌ನ ಗಾಜಿನ ಕವಚದ ಬದಲಿಗೆ ಮುಕ್ತ ಪೋಡಿಯಂ ಬಳಸಿ ಭಾಷಣ ಮಾಡಿದರು.
- ವಿವಿಧೆಡೆಯಿಂದ 1,800 ಪ್ರಮುಖರನ್ನು 'ವಿಶೇಷ ಅತಿಥಿ'ಗಳಾಗಿ ಆಹ್ವಾನಿಸಲಾಗಿತ್ತು. ಇವರಲ್ಲಿ ಗ್ರಾಮಗಳ ಸರಪಂಚರು, ಮೀನುಗಾರರು, ಶುಶ್ರೂಷಕಿಯರು, ಸೆಂಟ್ರಲ್ ವಿಸ್ತಾದ ನಿರ್ಮಾಣ ಕಾರ್ಮಿಕರು ಸೇರಿದ್ದರು.
- ದೇಶದ ವಿವಿಧೆಡೆಯ 75 ಜೋಡಿಗಳು ಸಾಂಪ್ರದಾಯಿಕ ಉಡುಗೆಗಳಲ್ಲಿ ಭಾಗವಹಿಸಿ ಗಮನಸೆಳೆದರೆ, ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ತೋರಿದ 50 ಶಾಲಾ ಶಿಕ್ಷಕರನ್ನು ಶಿಕ್ಷಣ ಸಚಿವಾಲಯವು ವಿಶೇಷ ಅತಿಥಿಗಳಾಗಿ ಆಹ್ವಾನಿಸಿತ್ತು.
- ಭಾರತ ಮೂಲದ ಅಮೆರಿಕ ಸಂಸದ ರೊ ಖನ್ನಾ, ಮೈಖೇಲ್ ವಾಟ್ಜ್ ಸೇರಿದಂತೆ 50 ಸದಸ್ಯರ ಅಮೆರಿಕದ ನಿಯೋಗವು ಕಾರ್ಯಕ್ರಮಕ್ಕೆ ಸಾಕ್ಷಿಯಾಯಿತು.
- ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ಧರ್ಮೇಂದ್ರ ಪ್ರಧಾನ್, ನಿರ್ಮಲಾ ಸೀತಾರಾಮನ್, ನಿತಿನ್ ಗಡ್ಕರಿ, ಅನುರಾಗ್ ಠಾಕೂರ್, ಸ್ಮೃತಿ ಇರಾನಿ, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರೂ ಭಾಗವಹಿಸಿದ್ದರು.
- ಪುಷ್ಪಾಲಂಕಾರದಲ್ಲಿ ಜಿ20 ಲಾಂಛನವು ಸೇರಿತ್ತು. ಭಾಷಣದ ಬಳಿಕ ಪ್ರಧಾನಿ ಎನ್‌ಸಿಸಿ ಕೆಡೆಟ್‌ಗಳನ್ನು ಭೇಟಿ ಮಾಡಿದರು. ಪ್ರಧಾನಿ ಆಗಮಿಸಿದ ಕೂಡಲೇ 'ವಂದೇ ಮಾತರಂ', 'ಭಾರತ್ ಮಾತಾ ಕೀ ಜೈ' ಘೋಷಣೆಗಳು ಕೇಳಿಬಂದವು.

ಸಹಜ ಸ್ಥಿತಿಯತ್ತ ಮಣಿಪುರ: ಮೋದಿ

'ಬಿಕ್ಕಟ್ಟು: ಶಾಂತಿಯೊಂದೇ ಪರಿಹಾರ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ ಕೆಲ ತಿಂಗಳಿನಿಂದ ಹಿಂಸಾಚಾರದಿಂದ ನಲುಗಿದ್ದ ಮಣಿಪುರದಲ್ಲಿ ಸಹಜಸ್ಥಿತಿ ಮನೆ ಮಾಡುತ್ತಿದೆ. ಎಲ್ಲ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲ ಶಾಂತಿ ಮಾರ್ಗದಲ್ಲಿ ಸಾಗಲು ಈಶಾನ್ಯ ಜನರು ಮುಂದಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

'ಹಿಂಸಾಚಾರದಿಂದಾಗಿ ಮಣಿಪುರದಲ್ಲಿ ಹಲವರು ಪ್ರಾಣ ಕಳೆದುಕೊಂಡರು. ತಾಯಂದಿರ, ಪುತ್ರಿಯರ ಘನತೆಗೆ ಧಕ್ಕೆಯಾಯಿತು. ದೇಶದ ಇತರ ಭಾಗಗಳಲ್ಲಿಯೂ ಹಿಂಸಾಚಾರ ಕಂಡುಬಂತು. ಈಗ ಕಣಿವೆ ರಾಜ್ಯದಲ್ಲಿ ಶಾಂತಿ ನೆಲೆಸುತ್ತಿದ್ದು, ಇಡೀ ದೇಶವೇ ಮಣಿಪುರದೊಂದಿಗೆ ಇದೆ' ಎಂದರು.

ಮಣಿಪುರ ವಿದ್ಯಮಾನ ಕುರಿತು ಮೋದಿ ಮೂರನೇ ಬಾರಿಗೆ ಪ್ರಸ್ತಾಪಿಸಿದಂತಾಗಿದೆ. ಜುಲೈ 20ರಂದು ಮೊದಲ ಬಾರಿಗೆ ಈ ವಿಚಾರವಾಗಿ ಮಾತನಾಡಿದ್ದ ಅವರು, ನಂತರ, ಅವಿಶ್ವಾಸ ನಿರ್ಣಯಕ್ಕೆ ಉತ್ತರಿಸುವಾಗ ಆಗಸ್ಟ್ 10ರಂದು ಲೋಕಸಭೆಯಲ್ಲಿ ಮಾತನಾಡಿದ್ದರು.

ವಿಪಕ್ಷಗಳ ಅತೃಪ್ತಿ: ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿನ ಭಾಷಣದ ವೇಳೆ ಮಣಿಪುರ ಪರಿಸ್ಥಿತಿ ಕುರಿತು ಪ್ರಧಾನಿ ಮೋದಿ ಮಾತನಾಡಿದ್ದರ ಕುರಿತು ಕಾಂಗ್ರೆಸ್ ಅತೃಪ್ತಿ ವ್ಯಕ್ತಪಡಿಸಿದೆ.

'ಮಣಿಪುರದಲ್ಲಿ ನಡೆದ ಹಿಂಸಾಕೃತ್ಯಗಳನ್ನು ದೇಶದ ಯಾವುದೋ ಒಂದು ಭಾಗದಲ್ಲಿ ನಡೆದ ಸಣ್ಣ ಘಟನೆಗಳಿಗೆ ಹೋಲಿಕೆ ಮಾಡಿ ಪ್ರಧಾನಿ ಮಾತನಾಡಿದ್ದಾರೆ' ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆರೋಪಿಸಿದ್ದಾರೆ.

'ವೈಫಲ್ಯಗಳಿಂದಾಗಿಯೇ ಮಣಿಪುರದಲ್ಲಿ ಸಂಘರ್ಷ, ಹಿಂಸಾಚಾರ ಭುಗಿಲೆದ್ದಿದ್ದು, ಈ ಬಗ್ಗೆ ಮೋದಿ ಅವರು ದುಃಖ ವ್ಯಕ್ತಪಡಿಸಲಿಲ್ಲ. ಇಡೀ ದೇಶವೇ ಮಣಿಪುರದಲ್ಲಿ ಆಗಿರುವುದನ್ನು ನೋಡಿ ಮರುಗುತ್ತಿದ್ದಾಗ ಅಮೃತಕಾಲದಲ್ಲಿ ಭಾರತ ಮಾತೆಯ ಪುನರುತ್ಥಾನವಾಗುತ್ತಿದೆ ಎಂಬ ಬೀಡುಬೀಸು ಹೇಳಿಕೆ ನೀಡಿದರು' ಎಂದು ಟೀಕಿಸಿದ್ದಾರೆ.

'ಮಣಿಪುರದಲ್ಲಿ ಶಾಂತಿ ನೆಲೆಸುತ್ತಿದೆ ಎಂದಾದಲ್ಲಿ, ಕೆಂಪು ಕೋಟೆ ಮೇಲೆ ನಿಂತು ಭಾಷಣ ಮಾಡುವ ಬದಲು ಪ್ರಧಾನಿ ಮೋದಿ ಅವರು ಮಣಿಪುರಕ್ಕೇ ಹೋಗಿ, ಅಲ್ಲಿಂದಲೇ ಮಾತನಾಡಲಿ' ಎಂದು ಕಾಂಗ್ರೆಸ್‌ನ ಮತ್ತೊಬ್ಬ ನಾಯಕ, ಮಣಿಪುರ ಉಸ್ತುವಾರಿ ಭಕ್ತ ಚರಣ ದಾಸ್ ಪ್ರತಿಕ್ರಿಯಿಸಿದ್ದಾರೆ.



ಜಮ್ಮು ಸರಹದ್ದಿನ ವಿವಿಧ ಗಡಿ ಹೊರಠಾಣೆಗಳಲ್ಲಿ ಬಿಎಸ್‌ಎಫ್ ಯೋಧರು ಮತ್ತು ಪಾಕಿಸ್ತಾನದ ಯೋಧರು ಸಿಹಿ ಹಂಚಿಕೊಂಡು ಸಂಭ್ರಮಿಸಿದರು –ಪಿಟಿಐ ಚಿತ್ರ

'ಸಂವಿಧಾನ ರಕ್ಷಣೆಗೆ ಪ್ರತಿಜ್ಞೆ'

ನವದೆಹಲಿ (ಪಿಟಿಐ): 'ಪ್ರಸ್ತುತ ಅಪಾಯ ಎದುರಿಸುತ್ತಿರುವ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯುವ ಪ್ರತಿಜ್ಞೆ ನಮ್ಮದಾಗಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ಹೇಳಿದರು.

ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಅಭಿವೃದ್ಧಿಗಾಗಿ ಅಟಲ್ ಬಿಹಾರಿ ವಾಜಪೇಯಿ ಸೇರಿದಂತೆ ಮಾಜಿ ಪ್ರಧಾನಿಗಳ ಕೊಡುಗೆಯನ್ನು ಉಲ್ಲೇಖಿಸಿದ ಅವರು, ಇಂದು ಪ್ರಜಾಪ್ರಭುತ್ವ, ಸಂವಿಧಾನ, ವಿವಿಧ ಸ್ವಾಯತ್ತ ಸಂಸ್ಥೆಗಳು ದೊಡ್ಡ ಅಪಾಯ ಎದುರಿಸುತ್ತಿವೆ ಎಂದು ಅಭಿಪ್ರಾಯಪಟ್ಟರು.

ಪ್ರಜಾಪ್ರಭುತ್ವ ಮತ್ತು ಸಂವಿಧಾನ ದೇಶದ ಆತ್ಮಗಳು. ಸ್ವಾತಂತ್ರ್ಯೋತ್ಸವದ ಈ ಹೊತ್ತಿನಲ್ಲಿ ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಂವಿಧಾನದ ಏಕತೆ ಮತ್ತು ದೇಶದ ಸಾರ್ವಭೌಮತೆ, ಪ್ರೀತಿ, ಭ್ರಾತೃತ್ವ, ಸೌಹಾರ್ದವನ್ನು ಎತ್ತಿಹಿಡಿಯುವ ಪ್ರತಿಜ್ಞೆ ಮಾಡುತ್ತೇವೆ ಎಂದರು.

'ಇಂಡಿಯಾ' ಮೈತ್ರಿಕೂಟದ ಘೋಷವಾಕ್ಯವಾದ 'ಭಾರತ್ ಜುಡೇಗಾ, ಇಂಡಿಯಾ ಜೀತೆಗಾ' ಘೋಷಣೆಪುನರುಚ್ಚರಿಸಿದರು.

ಪ್ರತಿಪಕ್ಷಗಳ ಧ್ವನಿ ಅಡಗಿಸುವ ಕೆಲಸ ಇಂದು ನಡೆಯುತ್ತಿದೆ. ಸಿಬಿಐ, ಇ.ಡಿ., ಆದಾಯ ತೆರಿಗೆ ದಾಳಿಗಳಾಗುತ್ತಿವೆ. ಚುನಾವಣಾ ಆಯೋಗ ದುರ್ಬಲವಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ವಿಶ್ವದ ವಿವಿಧೆಡೆ ಸ್ವಾತಂತ್ರ್ಯೋತ್ಸವ

ವಾಷಿಂಗ್ಟನ್/ ಬೀಜಿಂಗ್ (ಪಿಟಿಐ): ಜಗತ್ತಿನಾದ್ಯಂತ ಭಾರತೀಯರು ತಾವಿರುವ ದೇಶಗಳ ಭಾರತೀಯ ರಾಯಭಾರ ಕಚೇರಿ ಬಳಿ ನೆರೆದು 77ನೇ ಸ್ವಾತಂತ್ರ್ಯ ದಿನವನ್ನು ಆಚರಿಸಿದರು. ಈ ವೇಳೆ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು ಮತ್ತು ದೇಶಭಕ್ತಿ ಗೀತೆಗಳನ್ನು ಹಾಡಿದರು.

ವಾಷಿಂಗ್ಟನ್‌ನಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ ಅಮೆರಿಕದ ಜೋ ಬೈಡನ್ ಆಡಳಿತವು ಭಾರತೀಯ ಸಮುದಾಯವನ್ನು ಜೊತೆಗೂಡಿತ್ತು. ಭಾರತ ಮತ್ತು ಅಮೆರಿಕದ ಸಂಬಂಧವು ಮೊದಲಿಗಿಂತ ಆಳವಾಗಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಅವರು ಹೇಳಿದ್ದಾರೆ.

ಚೀನಾದ ಬೀಜಿಂಗ್‌ನಲ್ಲಿ ಭಾರತ ರಾಯಭಾರ ಕಚೇರಿ ಸಿಬ್ಬಂದಿ ಮತ್ತು ಭಾರತೀಯ ಸಮುದಾಯದ ಸದಸ್ಯರು ಒಟ್ಟಾಗಿ ಸ್ವಾತಂತ್ರ್ಯ ದಿನ ಆಚರಿಸಿದರು. ಶಾಂಘೈನಲ್ಲಿಯ ಭಾರತೀಯ ಕಾನ್ಸುಲ್ ಕಚೇರಿಯಲ್ಲಿ ಕಾನ್ಸುಲ್ ಜನರಲ್ ಎನ್. ನಂದಕುಮಾರ್ ಅವರು ಧ್ವಜಾರೋಹಣ ನೆರವೇರಿಸಿದರು ಮತ್ತು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸ್ವಾತಂತ್ರ್ಯ ದಿನದ ಅಂಗವಾಗಿ ದೇಶವನ್ನುದ್ದೇಶಿಸಿ ಮಾಡಿದ್ದ ಭಾಷಣವನ್ನು ಓದಿದರು.

ಆಸ್ಟ್ರೇಲಿಯಾದ ಭಾರತ ರಾಯಭಾರಿ ಮನ್‌ಪ್ರೀತ್ ವೋಹ್ರಾ ಅವರು ಮುರ್ಮು ಅವರ ಭಾಷಣವನ್ನು ಓದಿದರು. ಸಿಂಗಪುರದ ಭಾರತದ ಪ್ರಭಾರಿ ರಾಯಭಾರಿ ಪೂಜಾ ಎಂ. ತಿಲ್ಲು ಅವರು 1,000ಕ್ಕೂ ಹೆಚ್ಚು ಭಾರತೀಯರನ್ನು ಭಾರತೀಯ ನೌಕಾಪಡೆಯ ಐಎನ್‌ಎಸ್ ಕುಲಿಶ್ ಬಳಿಗೆ ಕರೆದೊಯ್ದಿದ್ದರು. ಸಮರಾಭ್ಯಾಸಕ್ಕಾಗಿ ಸಿಂಗಪುರಕ್ಕೆ ಆಗಮಿಸಿರುವ ಐಎನ್‌ಎಸ್ ಕುಲಿಶ್‌ನಲ್ಲಿ ದೇಶಭಕ್ತಿ ಗೀತೆಗಳ ಗಾಯನ ಆಯೋಜಿಲಾಗಿತ್ತು.

ಶ್ರೀಲಂಕಾ ರಾಯಭಾರಿ ಕಚೇರಿ ಅಧಿಕಾರಿಗಳು ಭಾರತೀಯ ಶಾಂತಿ ರಕ್ಷಣಾ ಸೇನೆ (ಐಪಿಕೆಎಫ್) ಸ್ಮಾರಕಕ್ಕೆ ತೆರಳಿ ಆ ದೇಶದ ಶಾಂತಿ ಮತ್ತು ಏಕತೆಗಾಗಿ ಪ್ರಾಣ ತ್ಯಾಗ ಮಾಡಿದ ಯೋಧರಿಗೆ ಗೌರವ ಸಲ್ಲಿಸಿದರು.

ಚುನಾವಣೆ: ಪ್ರಧಾನಿ ಓಂಕಾರ

ಒಂದನೇ ಪುಟದಿಂದ

'ನಾನು ಬದುಕಿರುವವರೆಗೂ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುವೆ. ಇದು ನನ್ನ ಬದ್ಧತೆ. ವಿವಿಧ ಯೋಜನೆಗಳ ದುರ್ಬಳಕೆಗೆ ಕಾರಣವಾಗಿದ್ದ 10 ಕೋಟಿ ನಕಲಿ ಫಲಾನುಭವಿಗಳನ್ನು ನನ್ನ ಸರ್ಕಾರ ಕಿತ್ತೊಗೆದಿದೆ. ಜಪ್ತಿ ಮಾಡಿರುವ ಅಕ್ರಮ ಆಸ್ತಿಗಳ ಪ್ರಮಾಣ 20 ಪಟ್ಟುಗಳಷ್ಟು ಹೆಚ್ಚಿದೆ' ಎನ್ನುವ ಮೂಲಕ, ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ರಾಜಕೀಯ ಉದ್ದೇಶಕ್ಕೆ ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿದ್ದ ವಿಪಕ್ಷಗಳತ್ತ ಚಾಟಿ ಬೀಸಿದರು.

ತಮ್ಮ ನೇತೃತ್ವದ ಸರ್ಕಾರದ ಸಾಧನೆಗಳನ್ನು ವಿವರಿಸಿದ ಅವರು, ಮತ್ತೊಮ್ಮೆ ಅಧಿಕಾರ ನೀಡಿದಲ್ಲಿ ಮುಂದಿನ ಐದು ವರ್ಷಗಳ ಕಾಲ ಅಭೂತಪೂರ್ವ ಅಭಿವೃದ್ಧಿ ಸಾಧಿಸುವುದಾಗಿ ಭರವಸೆ ನೀಡಿದರು.

ಮೋದಿ ಭಾಷಣದ ಪ್ರಮುಖ ಅಂಶಗಳು
- ಸರಣಿ ಬಾಂಬ್ ಸ್ಫೋಟದಂತಹ ಘಟನೆಗಳು ಈಗ ಇತಿಹಾಸ ಮಾತ್ರ. ದೇಶದ ಜನರಲ್ಲಿ ಈಗ ಸುರಕ್ಷತೆಯ ಭಾವನೆ ಮೂಡಿದೆ
- ನಕ್ಸಲರಿಂದ ಬಾಧಿತ ಪ್ರದೇಶಗಳಲ್ಲಿಯೂ ಹಿಂಸಾಚಾರ ತಗ್ಗಿದೆ
- 'ಪ್ರಜಾಪ್ರಭುತ್ವ', 'ವೈವಿಧ್ಯ' ಹಾಗೂ 'ಜನಸಂಖ್ಯೆ' ದೇಶದ ಶಕ್ತಿ. ಈ 'ತ್ರಿವೇಣಿ'ಯು ಭಾರತದ ಪ್ರತಿಯೊಂದು ಕನಸನ್ನು ನನಸು ಮಾಡುವ ಶಕ್ತಿ ಹೊಂದಿದೆ

ಜನರ ನಂಬಿಕೆಗೆ ಅನುಸಾರ ನ್ಯಾಯ ಕಲ್ಪಿಸಲು ಒತ್ತು: ಸಿಜೆಐ ಚಂದ್ರಚೂಡ್

'ಸುಪ್ರೀಂ' ಸೇವೆ ವಿಸ್ತರಣೆಗೆ ಹೊಸ ಕಟ್ಟಡ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಸುಪ್ರೀಂ ಕೋರ್ಟ್‌ನ ಕಾರ್ಯ ಚಟುವಟಿಕೆಯನ್ನು ವಿಸ್ತರಿಸಲು ಹೊಸ ಕಟ್ಟಡ ನಿರ್ಮಿಸಲಾಗುತ್ತದೆ. ಈ ಕಟ್ಟಡದಲ್ಲಿ 27 ಹೆಚ್ಚುವರಿ ನ್ಯಾಯಾಲಯದ ಕೊಠಡಿಗಳು, ರಿಜಿಸ್ಟ್ರಾರ್ ಕೊಠಡಿಗಳು ಸೇರಿದಂತೆ ವಕೀಲರು ಮತ್ತು ದಾವೆದಾರರಿಗೆ ಅಗತ್ಯ ಸೌಕರ್ಯ ಕಲ್ಪಿಸಲಾಗುತ್ತದೆ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನ ವಕೀಲರ ಸಂಘವು ಮಂಗಳವಾರ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ನೂತನ ಕಟ್ಟಡವು ಸಾಂವಿಧಾನಿಕ ಆಶಯವನ್ನು ಪ್ರತಿಬಿಂಬಿಸಲಿದೆ. ಭಾರತೀಯ ನಾಗರಿಕರ ನಂಬಿಕೆ ಮತ್ತು ಆದ್ಯತೆಗೆ ಅನುಗುಣವಾಗಿ ನ್ಯಾಯ ಪಡೆಯಲು ಈ ಕಟ್ಟಡದ ಮೂಲಕ ಹೆಚ್ಚುವರಿ ಸ್ಥಳಾವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ ಎಂದರು.

ಎರಡು ಹಂತದಲ್ಲಿ ಕಟ್ಟಡ ನಿರ್ಮಾಣ ಪ್ರಕ್ರಿಯೆಯು ನಡೆಯಲಿದೆ. ಮೊದಲ ಹಂತದಲ್ಲಿ ಮ್ಯೂಸಿಯಂ ಮತ್ತು ಅದಕ್ಕೆ ಹೊಂದಿಕೊಂಡಿರುವ ಕಟ್ಟಡವನ್ನು ನೆಲಸಮಗೊಳಿಸಿ ಹೊಸ ಕಟ್ಟಡ ನಿರ್ಮಿಸಲಾಗುತ್ತದೆ. ಇದರಲ್ಲಿ 15 ಹೆಚ್ಚುವರಿ ನ್ಯಾಯಾಲಯದ ಕೊಠಡಿಗಳು ಇರಲಿವೆ. ಜೊತೆಗೆ, ಸುಪ್ರೀಂ ಕೋರ್ಟ್‌ನ ವಕೀಲರ ಸಂಘಕ್ಕೆ ಗ್ರಂಥಾಲಯ, ಸಂಘದ ಅಧಿಕಾರಿಗಳ ಕಚೇರಿ, ವಕೀಲರು ಮತ್ತು ದಾವೆದಾರರಿಗೆ ಕ್ಯಾಂಟೀನ್ ಹಾಗೂ ವಕೀಲೆಯರ ಸಂಘದ ಕೊಠಡಿ ಸೌಲಭ್ಯ ಕಲ್ಪಿಸಲಾಗುತ್ತದೆ ಎಂದು ವಿವರಿಸಿದರು.

ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದ ಪ್ರಸ್ತಾವಕ್ಕೆ ಅನುಗುಣವಾಗಿ ವಿಸ್ತೃತ ಯೋಜನೆ ಸಿದ್ಧಪಡಿಸಿ ಸಲ್ಲಿಸಲಾಗಿದೆ. ಎರಡನೇ ಹಂತದಲ್ಲಿ 12 ಹೆಚ್ಚುವರಿ ನ್ಯಾಯಾಲಯದ ಕೊಠಡಿಗಳು ಮತ್ತು ರಿಜಿಸ್ಟ್ರಾರ್ ಕೊಠಡಿಗಳು, ವಕೀಲರಿಗೆ ವಿಶ್ರಾಂತಿ ಕೊಠಡಿ ನಿರ್ಮಿಸಲಾಗುತ್ತದೆ ಎಂದರು.

ನ್ಯಾಯಾಂಗ ವ್ಯವಸ್ಥೆಯ ಪ್ರಕ್ರಿಯೆಯನ್ನು ಸುತ್ತುವರಿದಿರುವ ಅಸಮರ್ಥತೆಹಾಗೂಅಸ್ಪಷ್ಟತೆಯನ್ನುಹೋಗಲಾಡಿಸಲು ತಂತ್ರಜ್ಞಾನ ಬಹುಮುಖ್ಯ ಸಾಧನವಾಗಿದೆ. 3ನೇ ಹಂತದಲ್ಲಿ ಇ–ಕೋರ್ಟ್ ಯೋಜನೆ ಮೂಲಕ ಇದನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದರು.



ಸುಪ್ರೀಂ ಕೋರ್ಟ್‌ನಿಂದ ಇಲ್ಲಿಯವರೆಗೆ 35 ಸಾವಿರ ತೀರ್ಪುಗಳು ಪ್ರಕಟಗೊಂಡಿವೆ. ಎಲ್ಲವೂ ಪ್ರಾದೇಶಿಕ ಭಾಷೆಗಳಲ್ಲಿ ಜನರಿಗೆ ದೊರೆಯುವಂತೆ ಕ್ರಮವಹಿಸಲಾಗುವುದು

ಡಿ.ವೈ. ಚಂದ್ರಚೂಡ್, ಸಿಜೆಐ, ಸುಪ್ರೀಂ ಕೋರ್ಟ್

ಕಟ್ಟಡ ನೆಲಸಮಕ್ಕೆ ಸಿಜೆಐ ಆಕ್ಷೇಪ

'ಸ್ವೇಚ್ಛೆಯಾಗಿ ವ್ಯಕ್ತಿಗಳನ್ನು ಬಂಧಿಸುವುದು ಹಾಗೂ ಕಾನೂನುಬಾಹಿರವಾಗಿ ಕಟ್ಟಡಗಳನ್ನು ನೆಲಸಮಗೊಳಿಸುವವರ ವಿರುದ್ಧ ನ್ಯಾಯಾಧೀಶರು ಯಾವುದೇ ಮುಲಾಜಿಲ್ಲದೆ ಕ್ರಮಕೈಗೊಳ್ಳಬೇಕು. ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಕ್ರಮಗಳು ನೊಂದವರಿಗೆ ಸಮಾಧಾನ ತರುವಂತಿರಬೇಕು' ಎಂದು ಸಿಜೆಐ ಚಂದ್ರಚೂಡ್ ಹೇಳಿದ್ದಾರೆ. 'ಇಂತಹ ಯಾವುದೇ ಪ್ರಕರಣವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಸಂತ್ರಸ್ತರ ನೋವಿಗೆ ಸ್ಪಂದಿಸುವುದೇ ನ್ಯಾಯಾಂಗದ ಶ್ರೇಷ್ಠತೆಯಾಗಿದೆ' ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರೂ ಕಾರ್ಯಕ್ರಮದಲ್ಲಿ ಹೇಳಿದರು.

'ಸಾಮಾಜಿಕ ಮಾಧ್ಯಮಗಳ ಮೂಲಕವೂ ಹಂಚಿಕೊಳ್ಳುವುದು ಸೇರಿದಂತೆ ನನಗೆ ಸಲ್ಲಿಸುವ ಪ್ರತಿ ದೂರು, ಪತ್ರಗಳ ಕುರಿತು ವೈಯಕ್ತಿಕವಾಗಿ ಗಮನ ಹರಿಸಿ, ಕ್ರಮ ಕೈಗೊಳ್ಳುವೆ' ಎಂದು ಚಂದ್ರಚೂಡ್ ಹೇಳಿದರು.

ಉತ್ತರ ಪ್ರದೇಶ, ಮಧ್ಯಪ್ರದೇಶದಲ್ಲಿ ಅಲ್ಲಿನ ಸ್ಥಳೀಯ ಆಡಳಿತವು ಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳಿಗೆ ಸಂಬಂಧಿಸಿದ ಸ್ವತ್ತುಗಳನ್ನು ನೆಲಸಮಗೊಳಿಸಿದೆ. ಹರಿಯಾಣದ ನೂಹ್‌ನಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರ ಪ್ರಕರಣದಲ್ಲಿ ಭಾಗಿಯಾದ ಆರೋಪ ಸಂಬಂಧ ಬಂಧಿಸಿದ್ದ ಆರೋಪಿಗಳ ಸ್ವತ್ತುಗಳನ್ನೂ ಕೆಡವಲಾಗಿದೆ.

ಬಿಜೆಪಿ ನೇತೃತ್ವದ ಸರ್ಕಾರಗಳಿರುವ ರಾಜ್ಯಗಳಲ್ಲಿ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ಇಂತಹ ಧೋರಣೆ ತಳೆಯಲಾಗುತ್ತಿದೆ ಎನ್ನಲಾಗಿದೆ. ಈ ನಡುವೆಯೇ ಸಿಜೆಐ ಅವರ ಈ ಸೂಚನೆಯು ಮಹತ್ವ ಪಡೆದಿದೆ.

ಪ್ರಾದೇಶಿಕ ಭಾಷೆಗೆ 9,423 ತೀರ್ಪುಗಳ ಭಾಷಾಂತರ

'ಇಲ್ಲಿಯವರೆಗೂ ಸುಪ್ರೀಂ ಕೋರ್ಟ್‌ನ 9,423 ತೀರ್ಪುಗಳನ್ನು ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರಿಸಲಾಗಿದೆ' ಎಂದು ಸಿಜೆಐ ಚಂದ್ರಚೂಡ್ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯೋತ್ಸವದ ಸಂದೇಶದಲ್ಲಿ ಸ್ಥಳೀಯ ಭಾಷೆಗಳಿಗೆ ತೀರ್ಪುಗಳನ್ನು ಭಾಷಾಂತರಿಸುವ ಸುಪ್ರೀಂ ಕೋರ್ಟ್‌ನ ನಡೆಯನ್ನು ಶ್ಲಾಘಿಸಿದ್ದನ್ನು ಉಲ್ಲೇಖಿಸಿದ ಚಂದ್ರಚೂಡ್ ಅವರು, 'ಸುಪ್ರೀಂ ಕೋರ್ಟ್‌ನ ಎಲ್ಲಾ ತೀರ್ಪುಗಳನ್ನು ದೇಶದ 15 ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರಿಸಲಾಗುತ್ತಿದೆ' ಎಂದರು. ಸದ್ಯ ಹಿಂದಿಯಲ್ಲಿ 8,977, ತಮಿಳು 128, ಗುಜರಾತಿ 86, ಮಲಯಾಳ 50, ಒಡಿಯಾ 50, ತೆಲುಗು 33, ಬೆಂಗಾಳಿ 31, ಕನ್ನಡ 24, ಮರಾಠಿ 20, ಪಂಜಾಬಿ 20, ಅಸ್ಸಾಮಿ 4, ನೇಪಾಳಿ 4, ಉರ್ದು 3 ಸೇರಿದಂತೆ ಗಾರೋ ಮತ್ತು ಖಾಸಿ ಭಾಷೆಯಲ್ಲಿ ತಲಾ ಒಂದು ತೀರ್ಪು ಲಭ್ಯವಿದೆ ಎಂದು ವಿವರಿಸಿದರು.


ಶಾಂತಿ–ಸ್ಥಿರತೆಗೆ ಚೀನಾ, ಭಾರತ ಒಪ್ಪಿಗೆ

ಬೀಜಿಂಗ್ (ರಾಯಿಟರ್ಸ್): ಲಡಾಖ್‌ಗೆ ಹೊಂದಿಕೊಂಡಿರುವ ಗಡಿಯಲ್ಲಿ ಶಾಂತಿ ಮತ್ತು ಸ್ಥಿರತೆ ಕಾಪಾಡುವ ಸಂಬಂಧ ಚೀನಾ ಮತ್ತು ಭಾರತ ನಡುವೆ 19ನೇ ಸುತ್ತಿನ ಮಾತುಕತೆ ಸೋಮವಾರ ನಡೆಯಿತು.

ಗಡಿಯಲ್ಲಿ ಶಾಂತಿ–ಸ್ಥಿರತೆ ಕಾಪಾಡಲು ಮಿಲಿಟರಿ ಕಮಾಂಡರ್‌ಗಳ ಮಟ್ಟದ ಮಾತುಕತೆಯಲ್ಲಿ ಉಭಯ ದೇಶಗಳು ಸಮ್ಮತಿಸಿದವು ಎಂದು ಚೀನಾ ರಕ್ಷಣಾ ಸಚಿವಾಲಯ ಮಂಗಳವಾರ ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಪಶ್ಚಿಮ ಸೆಕ್ಟರ್‌ನಲ್ಲಿ ವಾಸ್ತವ ನಿಯಂತ್ರಣ ರೇಖೆಗುಂಟ (ಎಲ್‌ಎಸಿ) ಬಾಕಿ ಇರುವ ವಿಷಯಗಳ ಇತ್ಯರ್ಥಕ್ಕಾಗಿ ರಚನಾತ್ಮಕ ಮತ್ತು ಸಮಗ್ರ ಚರ್ಚೆ ನಡೆಯಿತು. ಬಿಕ್ಕಟ್ಟನ್ನು ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗಗಳ ಮೂಲಕ ಬಗೆಹರಿಸಿಕೊಳ್ಳಲು ಸಮ್ಮತಿಸಲಾಯಿತು ಎಂದು ಸಚಿವಾಲಯ ತಿಳಿಸಿದೆ.

ನಟ ಅಕ್ಷಯ್ ಕುಮಾರ್‌ಗೆ ಭಾರತೀಯ ಪೌರತ್ವ



ಮುಂಬೈ (ಪಿಟಿಐ): ನಟ ಅಕ್ಷಯ್ ಕುಮಾರ್ ಅವರು ಮತ್ತೆ ಭಾರತೀಯ ಪೌರತ್ವವನ್ನು ಪಡೆದುಕೊಂಡಿದ್ದಾರೆ. 'ನಾನು ಭಾರತೀಯ ಪ್ರಜೆ ಆಗಿದ್ದೇನೆ' ಎಂದು ಮಂಗಳವಾರ 'ಎಕ್ಸ್' ಜಾಲತಾಣದಲ್ಲಿ ಅವರು ಟ್ವೀಟ್ ಮಾಡಿದ್ದು, ಪೌರತ್ವ ಪ್ರಮಾಣಪತ್ರವನ್ನು ಹಂಚಿಕೊಂಡಿದ್ದಾರೆ.

'ಹೃದಯ ಮತ್ತು ಪೌರತ್ವ, ಈಗ ಎರಡೂ ಭಾರತೀಯ. ಸ್ವಾತಂತ್ರ್ಯೋತ್ಸವದ ಶುಭಾಶಯಗಳು. ಜೈ ಹಿಂದ್' ಎಂದು 55 ವರ್ಷ ವಯಸ್ಸಿನ ಅವರು ತಮ್ಮ ಟ್ವೀಟ್‌ನಲ್ಲಿ ಸಂತಸ ಹಂಚಿಕೊಂಡಿದ್ದಾರೆ.

ಈವರೆಗೂ ಅವರು ಕೆನಡಾದ ಪ್ರಜೆಯಾಗಿದ್ದರು. 1990ರ ದಶಕದಲ್ಲಿ ನನ್ನ 15 ಚಿತ್ರಗಳು ಸತತವಾಗಿ ವಿಫಲವಾಗಿದ್ದವು. ವೃತ್ತಿ ಬದುಕಿನಲ್ಲಿ ಪ್ರಗತಿ ಇರಲಿಲ್ಲ. ಇದರಿಂದ ನೊಂದು ನಾನು ಕೆನಡಾದ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಿದ್ದೇನೆ ಎಂದು ಅಕ್ಷಯ್ ಕುಮಾರ್ ಆಗ ಕಾರಣ ನೀಡಿದ್ದರು. 2019ರಲ್ಲಿ ಚುನಾವಣೆಗೆ ಮೊದಲು ಪ್ರಧಾನಿ ಮೋದಿ ಅವರೊಂದಿಗೆ ರಾಜಕೀಯಯೇತರ ಸಂದರ್ಶನ ನಡೆಸಿದ್ದರು. ಆದರೆ, ಚುನಾವಣೆಯಲ್ಲಿ ಮತದಾನ ಮಾಡಿರಲಿಲ್ಲ. ಇದು, ಚರ್ಚೆಗೆ ಗ್ರಾಸವಾಗಿತ್ತು.

ಆಗ, ನಾನು ಭಾರತೀಯ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸಿರುವುದಾಗಿ ಹೇಳಿದ್ದರು. ಸದ್ಯ ಅವರು ನಟಿಸಿರುವ ಚಿತ್ರ 'ಒಎಂಜಿ 2' ಕಳೆದ ವಾರ ತೆರೆಕಂಡಿದ್ದು, ಪಂಕಜ್ ತ್ರಿಪಾಠಿ, ಯಾಮಿ ಗೌತಮ್ ಸಹನಟರಾಗಿದ್ದಾರೆ.

'ಸುಲಭ್ ಇಂಟರ್‌ನ್ಯಾಷನಲ್' ಸಂಸ್ಥಾಪಕ ಬಿಂದೇಶ್ವರ್ ಪಾಠಕ್ ನಿಧನ



ನವದೆಹಲಿ (ಪಿಟಿಐ): ಸಾಮಾಜಿಕ ಸೇವಾ ಸಂಸ್ಥೆ 'ಸುಲಭ್ ಇಂಟರ್‌ನ್ಯಾಷನಲ್'ನ ಸಂಸ್ಥಾಪಕ ಬಿಂದೇಶ್ವರ್ ಪಾಠಕ್ (80) ಅವರು ಹೃದಯ ಸ್ತಂಭನದಿಂದ ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ಮಂಗಳವಾರ ಮಧ್ಯಾಹ್ನ 1.42ಕ್ಕೆ ನಿಧನರಾದರು ಎಂದು ಅವರ ಆಪ್ತ ಸಹಾಯಕರೊಬ್ಬರು ತಿಳಿಸಿದ್ದಾರೆ.

ಅವರಿಗೆ ಪತ್ನಿ, ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ ಇದ್ದಾರೆ.

ಸ್ವಾತಂತ್ರ್ಯ ದಿನದ ಅಂಗವಾಗಿ ಸುಲಭ್ ಇಂಟರ್‌ನ್ಯಾಷನಲ್‌ನ ಮುಖ್ಯಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿದ ಪಾಠಕ್ ಅವರು ಕುಸಿದು ಬಿದ್ದರು. ಕೂಡಲೇ ಅವರನ್ನು ಏಮ್ಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ಸಹಾಯಕರು ಹೇಳಿದ್ದಾರೆ.

ಆಸ್ಪತ್ರೆಗೆ ಕರೆತರುವ ವೇಳೆಗಾಗಲೇ ಅವರು ಮೃತಪಟ್ಟಿದ್ದರು ಎಂದು ಆಸ್ಪತ್ರೆ ಮೂಲಗಳು ಮಾಹಿತಿ ನೀಡಿವೆ.

ದೇಶವನ್ನು ಬಯಲು ಶೌಚಮುಕ್ತಗೊಳಿಸುವ ಉದ್ದೇಶದಿಂದ 'ಸುಲಭ್ ಇಂಟರ್‌ನ್ಯಾಷನಲ್' ಸಂಸ್ಥೆಯನ್ನು ಪಾಠಕ್ ಅವರು 1970ರಂದು ಸ್ಥಾಪಿಸಿದರು. ಮಾನವ ಹಕ್ಕುಗಳು, ಪರಿಸರ ನೈರ್ಮಲ್ಯ, ತ್ಯಾಜ್ಯ ನಿರ್ವಹಣೆ ಮತ್ತು ಶಿಕ್ಷಣದ ಮೂಲಕ ಸಮಾಜ ಸುಧಾರಣೆಯಂಥ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ದೇಶದಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಿದವರಲ್ಲಿ ಪಾಠಕ್ ಅವರು ಮೊದಲಿಗರು.

ಬಿಂದೇಶ್ವರ್ ಪಾಠಕ್ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಸಂತಾಪ ಸೂಚಿಸಿದ್ದಾರೆ. 'ಬಿಂದೇಶ್ವರ್ ಅವರ ನಿಧನವು ದೇಶಕ್ಕೆ ತುಂಬಲಾರದ ನಷ್ಟ. ಸ್ವಚ್ಛ ಭಾರತವನ್ನು ನಿರ್ಮಿಸುವ ಗುರಿಯನ್ನು ಅವರು ಹೊಂದಿದ್ದರು. ಸ್ವಚ್ಛ ಭಾರತ ಅಭಿಯಾನಕ್ಕೆ ಅವರು ನೀಡಿದ್ದ ಬೆಂಬಲ ಸ್ಮರಣೀಯ. ಅವರ ಕೆಲಸವು ಹಲವರಿಗೆ ಸ್ಫೂರ್ತಿಯಾಗಿದೆ. ಅವರ ಕುಟುಂಬ ಮತ್ತು ಸ್ನೇಹಿತರಿಗೆ ನನ್ನ ಸಂತಾಪಗಳು' ಎಂದು ಎಕ್ಸ್ (ಟ್ವಿಟರ್) ವೇದಿಕೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಧಾರಾಕಾರ ಮಳೆಯಿಂದ 11 ಜಿಲ್ಲೆಗಳಲ್ಲಿ ಜನಜೀವನ ಅಸ್ತವ್ಯಸ್ತ

ಹಿಮಾಚಲ ಪ್ರದೇಶ: ಮೃತರ ಸಂಖ್ಯೆ 56ಕ್ಕೆ ಏರಿಕೆ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದಲ್ಲಿ ಮಳೆ ಸಂಬಂಧಿತ ಅವಘಡಗಳಿಗೆ ಸಿಲುಕಿ ಮೃತಪಟ್ಟವರ ಸಂಖ್ಯೆ 56ಕ್ಕೇರಿದೆ.

ಭಾನುವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ವಿವಿಧೆಡೆ ಭೂಕುಸಿತ ಸಂಭವಿಸಿದ್ದು, ನೂರಾರು ಮನೆಗಳು ಕುಸಿದು ಬಿದ್ದಿವೆ. ಶಿಮ್ಲಾದ ಸಮ್ಮರ್ ಹಿಲ್ ಹಾಗೂ ಫಗ್ಲಿ ಪ್ರದೇಶದಲ್ಲಿ ಸುಮಾರು 10 ಜನರು ಅವಶೇಷಗಳಡಿ ಜೀವಂತ ಸಮಾಧಿಯಾಗಿರುವ ಸಾಧ್ಯತೆ ಇದೆ. ಮೃತದೇಹಗಳನ್ನು ಹೊರತೆಗೆಯುವ ಕಾರ್ಯಾಚರಣೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ನೇತೃತ್ವದಡಿ ಸೇನೆ, ಪೊಲೀಸರು ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಸಿಬ್ಬಂದಿ ಕೈಗೊಂಡಿದ್ದ ರಕ್ಷಣೆ ಹಾಗೂ ಪರಿಹಾರ ಕಾರ್ಯಾಚರಣೆಗೆ ಮಳೆ ಅಡ್ಡಿಪಡಿಸಿತು. ಹಾಗಾಗಿ, ಸೋಮವಾರ ರಾತ್ರಿ ಸ್ಥಗಿತಗೊಳಿಸಿದ್ದ ಕಾರ್ಯಾಚರಣೆಯನ್ನು ಮಂಗಳವಾರ ಬೆಳಿಗ್ಗೆ ಮತ್ತೆ ಆರಂಭಿಸಲಾಗಿದೆ ಎಂದು ಶಿಮ್ಲಾ ಜಿಲ್ಲಾಧಿಕಾರಿ ಆದಿತ್ಯ ನೇಗಿ ತಿಳಿಸಿದ್ದಾರೆ.

'ನೆಲಸಮಗೊಂಡಿರುವ ಶಿವ ದೇಗುಲದ ಅವಶೇಷಗಳಡಿಯಿಂದ 11 ಹಾಗೂ ಫಗ್ಲಿಯಲ್ಲಿ ಐವರ ಮೃತದೇಹಗಳನ್ನು ಹೊರತೆಗೆಯಲಾಗಿದೆ' ಎಂದು ತಿಳಿಸಿದ್ದಾರೆ.

ತರಗತಿಗಳಿಗೆ ರಜೆ: ಭೂಕುಸಿತ ಹಾಗೂ ರಸ್ತೆ ಸಂಪರ್ಕ ಸ್ಥಗಿತಗೊಂಡಿರುವುದರಿಂದ ಹಿಮಾಚಲ ಪ್ರದೇಶ ವಿಶ್ವವಿದ್ಯಾಲಯವು ಆಗಸ್ಟ್ 19ರವರೆಗೆ ತರಗತಿಗಳಿಗೆ ರಜೆ ಘೋಷಿಸಿದೆ. ವಿ.ವಿಯ ಗ್ರಂಥಾಲಯ ಸೇವೆಯೂ ಆಗಸ್ಟ್ 20ರವರೆಗೆ ಬಂದ್ ಆಗಿದೆ. ಆದರೆ, ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ಎಂದಿನಂತೆ ವಿ.ವಿ ಕಚೇರಿಗಳಿಗೆ ಹಾಜರಾಗಲಿದ್ದಾರೆ ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

11 ಜಿಲ್ಲೆಯಲ್ಲಿ ಅವಾಂತರ: ರಾಜ್ಯದ 12 ಜಿಲ್ಲೆಗಳ ಪೈಕಿ 11 ಜಿಲ್ಲೆಗಳಲ್ಲಿ ಮಳೆ ಸಂಬಂಧಿತ ಅವಘಡಗಳು ಸಂಭವಿಸಿವೆ.

'ಸೋಮವಾರ ಮಂಡಿ ಜಿಲ್ಲೆಯಲ್ಲೂ 19 ಜನರು ಮೃತಪಟ್ಟಿದ್ದಾರೆ. ಸೆಗ್ಲಿ ಪಂಚಾಯಿತಿ ವ್ಯಾಪ್ತಿಯ ಸಂಭಾಲ್‌ನಲ್ಲಿ ಮನೆ ಕುಸಿತದಿಂದ ಒಂದೇ ಕುಟುಂಬದ ಏಳು ಮಂದಿ ಅಸುನೀಗಿದ್ದಾರೆ.



ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಯಲ್ಲಿ ತೊಡಗಿರುವ ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡದ ಸಿಬ್ಬಂದಿ –ಪಿಟಿಐ ಚಿತ್ರ

ಸಂಕಷ್ಟದಲ್ಲಿ ಚಿತ್ರದುರ್ಗದ ಯಾತ್ರಿಕರು

ಚಿತ್ರದುರ್ಗ: ಕೇದಾರನಾಥಕ್ಕೆ ತೆರಳಿದ್ದ ಜಿಲ್ಲೆಯ ಮಹಿಳಾ ಯಾತ್ರಿಕರು ವಿಪರೀತ ಮಳೆ ಹಾಗೂ ಗುಡ್ಡ ಕುಸಿತದಿಂದ ಅಪಾಯಕ್ಕೆ ಸಿಲುಕಿದ್ದು, ರಕ್ಷಣೆಗಾಗಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಬಿಜೆಪಿ ಮುಖಂಡರಾದ ರತ್ನಮ್ಮ, ಅಂಬಿಕಾ, ಗೀತಾ ಮತ್ತು ಇತರರು ವಾರದ ಹಿಂದೆ ಯಾತ್ರೆಗೆ ತೆರಳಿದ್ದರು. ಕೇದಾರನಾಥದಿಂದ 30 ಕಿ.ಮೀ ದೂರದಲ್ಲಿ ಇರುವಾಗ ಗುಡ್ಡ ಕುಸಿತ ಉಂಟಾಗಿದೆ. ಇದರಿಂದಾಗಿ ಕೇದಾರನಾಥಕ್ಕೆ ತೆರಳಲು ಆಗದೆ, ರಾಜ್ಯಕ್ಕೆ ಹಿಂತಿರುಗಲೂ ಸಾಧ್ಯವಾಗದೆ ಪರಿತಪಿಸುತ್ತಿದ್ದಾರೆ.

'ಯಾತ್ರಿಕರು ಕೇದಾರನಾಥದಲ್ಲಿ ಸಿಲುಕಿರುವ ಮಾಹಿತಿ ಸಿಕ್ಕಿದೆ. ಈ ಬಗ್ಗೆ ಗೃಹ ಸಚಿವ ಜಿ.ಪರಮೇಶ್ವರ ಅವರೊಂದಿಗೆ ಮಾತನಾಡಿದ್ದೇನೆ. ಮರಳಿ ಕರೆತರುವ ವ್ಯವಸ್ಥೆ ಮಾಡಲಾಗುತ್ತಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಮಂಗಳವಾರ ತಿಳಿಸಿದ್ದಾರೆ.

ರಾಜ್ಯಪಟ್ಟಿಗೆ ಶಿಕ್ಷಣ ಸೇರಿಸಿ: ಸ್ಟಾಲಿನ್

ಪ್ರಜಾವಾಣಿ ವಾರ್ತೆ

ಚೆನ್ನೈ: ಶಿಕ್ಷಣದ ವಿಷಯವನ್ನು ಮರಳಿ ರಾಜ್ಯಪಟ್ಟಿಗೆ ಸೇರಿಸಬೇಕು. ಇಂಥ ಕ್ರಮದಿಂದ ಮಾತ್ರ ನೀಟ್(ವೈದ್ಯಕೀಯ ಅರ್ಹತಾ ಪರೀಕ್ಷೆ)ನಂಥ ಪರೀಕ್ಷೆಗಳಿಗೆ ಅಂತ್ಯ ಹಾಡಲು ಸಾಧ್ಯ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ. ಕೆ ಸ್ಟಾಲಿನ್ ಅಭಿಪ್ರಾಯಪಟ್ಟಿದ್ದಾರೆ.

ವೈದ್ಯನಾಗಬೇಕೆಂಬ ಹಂಬಲ ಹೊಂದಿದ್ದ ತಮಿಳುನಾಡಿನ 19 ವರ್ಷದ ವಿದ್ಯಾರ್ಥಿಯೊಬ್ಬರು ನೀಟ್‌ನಲ್ಲಿ ಎರಡನೇ ಬಾರಿಯೂ ವಿಫಲವಾಗಿದ್ದಕ್ಕೆ ಆತ್ಮಹತ್ಯೆಗೆ ಶರಣಾಗಿದ್ದರು. ಮಗ ಮೃತಪಟ್ಟ ಒಂದು ದಿನದ ಬಳಿಕ ಅವರ ತಂದೆಯೂ ಆತ್ಮಹತ್ಯೆ ಮಾಡಿಕೊಂಡಿದ್ದರು. ಹೀಗಾಗಿ ತಮಿಳುನಾಡಿನಲ್ಲಿ ನೀಟ್ ಅಗತ್ಯದ ಬಗ್ಗೆ ಪ್ರಶ್ನೆಗಳೆದ್ದಿವೆ.

ಮಂಗಳವಾರ ಧ್ವಜಾರೋಹಣ ನೆರವೇರಿಸಿ ಸ್ವಾತಂತ್ರ್ಯೋತ್ಸವ ಭಾಷಣ ಮಾಡಿದ ಸ್ಟಾಲಿನ್ ನೀಟ್‌ನ ಔಚಿತ್ಯ ಮತ್ತು ಶಿಕ್ಷಣದ ವಿಷಯಗಳನ್ನು ಪ್ರಸ್ತಾಪಿಸಿದರು.

ಮಹಾರಾಜ ಟ್ರೋಫಿ ಕ್ರಿಕೆಟ್: ಮಂಗಳೂರು ಡ್ರ್ಯಾಗನ್ಸ್‌ಗೆ ಜಯ

ಶರತ್ ಅಬ್ಬರದ ಶತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕೆಟ್‌ಕೀಪರ್ –ಬ್ಯಾಟರ್ ಬಿ.ಆರ್. ಶರತ್ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಅಬ್ಬರದ ಶತಕ ಬಾರಿಸಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಶರತ್ (ಅಜೇಯ 111; 61ಎ) ಆಟದಿಂದ ಮಂಗಳೂರು ಡ್ರ್ಯಾಗನ್ಸ್ ತಂಡವು 5 ವಿಕೆಟ್‌ಗಳಿಂದ ಮೈಸೂರು ವಾರಿಯರ್ಸ್ ವಿರುದ್ಧ ಗೆದ್ದಿತು. ಮಂಗಳೂರಿಗೆ ಇದು ಮೊದಲ ಜಯ. ಸೋಮವಾರದ ಪಂದ್ಯದಲ್ಲಿ ಸೋತಿತ್ತು.

ಟಾಸ್ ಗೆದ್ದ ಮಂಗಳೂರು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೈಸೂರು ತಂಡದ ನಾಯಕ ಕರುಣ್ ನಾಯರ್ (77; 39ಎ, 4X9, 6X2) ಅಮೋಘ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 201 ರನ್ ಗಳಿಸಿತು. ಈ ಕಠಿಣ ಗುರಿಯನ್ನು ಮಂಗಳೂರು ತಂಡವು ಇನಿಂಗ್ಸ್‌ನಲ್ಲಿ ಇನ್ನೂ 7 ಎಸೆತಗಳು ಬಾಕಿಯಿರುವಾಗಲೇ ಮುಟ್ಟಿತು.

ಅದಕ್ಕೆ ಕಾರಣವಾಗಿದ್ದು ಶರತ್ ಬ್ಯಾಟಿಂಗ್. ಮೊದಲ ಓವರ್‌ನಲ್ಲಿಯೇ ನವೀನ್ ಎಂ.ಜಿ. ಔಟಾದಾಗ ಕ್ರೀಸ್‌ಗೆ ಬಂದ ಶರತ್, ತಂಡವನ್ನು ಗೆಲುವಿನ ಗಡಿ ಮುಟ್ಟಿಸಿದರು. ಕ್ರೀಸ್‌ನಲ್ಲಿದ್ದ ರೋಹನ್ ಪಾಟೀಲ ಮತ್ತು ಶರತ್ ಸೇರಿ ತಂಡದ ಆತಂಕ ದೂರ ಮಾಡಿದರು. ಕೇವಲ 32 ಎಸೆತಗಳಲ್ಲಿ ಅರ್ಧಶತಕ ಹೊಡೆದ ಶರತ್, ತಾವೆದುರಿಸಿದ 57ನೇ ಎಸೆತದಲ್ಲಿ ನೂರರ ಗಡಿ ಮುಟ್ಟಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 96 ರನ್ ಸೇರಿಸಿದರು. ಒಂಬತ್ತು ಬೌಂಡರಿ ಮತ್ತು ಐದು ಸಿಕ್ಸರ್‌ಗಳನ್ನೂ ಗಳಿಸಿದರು. ಹತ್ತನೇ ಓವರ್‌ನಲ್ಲಿ ರೋಹನ್ (54; 27ಎ, 4X5, 6X3) ವಿಕೆಟ್ ಗಳಿಸಿದ ಎಡಗೈ ಸ್ಪಿನ್ನರ್ ಜೆ. ಸುಚಿತ್ ಸಂಭ್ರಮಿಸಿದರು.

ಸಂಕ್ಷಿಪ್ತ ಸ್ಕೋರು: ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 201 (ಸಿ.ಎ. ಕಾರ್ತಿಕ್ 29, ಕರುಣ್ ನಾಯರ್ 77, ರಾಹುಲ್ ರಾವತ್ 24, ತುಷಾರ್ ಸಿಂಗ್ 20, ಮನೋಜ್ ಭಾಂಡಗೆ ಔಟಾಗದೆ 26, ಆದಿತ್ಯ ಗೋಯಲ್ 49ಕ್ಕೆ1, ಪ್ರತೀಕ್ ಜೈನ್ 35ಕ್ಕೆ1, ನವೀನ್ ಎಂ.ಜಿ. 42ಕ್ಕೆ1, ಕೆ. ಗೌತಮ್ 30ಕ್ಕೆ1) **ಮಂಗಳೂರು ಡ್ರ್ಯಾಗನ್ಸ್:** 18.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 202 (ರೋಹನ್ ಪಾಟೀಲ 54, ಬಿ.ಆರ್. ಶರತ್ ಔಟಾಗದೆ 111, ಕೆ.ವಿ. ಸಿದ್ಧಾರ್ಥ್ 14, ಎಂ. ವೆಂಕಟೇಶ್ 36ಕ್ಕೆ2, ಜೆ. ಸುಚಿತ್ 37ಕ್ಕೆ2) **ಫಲಿತಾಂಶ:** ಮಂಗಳೂರು ಡ್ರ್ಯಾಗನ್ಸ್‌ಗೆ 5 ವಿಕೆಟ್‌ಗಳ ಜಯ. **ಪಂದ್ಯಶ್ರೇಷ್ಠ:** ಬಿ.ಆರ್. ಶರತ್.

ಶಿವಮೊಗ್ಗ ಲಯನ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 201 (ರೋಹನ್ ಕದಂ 70, ನಿಹಾಲ್ ಉಳ್ಳಾಲ 40, ಅಭಿನವ್ ಮನೋಹರ್ 31, ಕ್ರಾಂತಿಕುಮಾರ್ 25, ಟಿ. ಪ್ರದೀಪ್ 45ಕ್ಕೆ2, ಎಲ್.ಆರ್. ಕುಮಾರ್ 38ಕ್ಕೆ2) **ಬೆಂಗಳೂರು ಬ್ಲಾಸ್ಟರ್ಸ್:** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 165 (ಜೆಸ್ವಂತ್ ಆಚಾರ್ಯ 29, ಪವನ್ ದೇಶಪಾಂಡೆ 32, ಶುಭಾಂಗ್ ಹೆಗಡೆ 22, ಆಶಿಶ್ ಮಹೇಶ್ ಔಟಾಗದೆ 30, ಲೋಚನ್ ಅಪ್ಪಣ್ಣ 17, ಎಲ್.ಆರ್. ಕುಮಾರ್ ಔಟಾಗದೆ 16, ಶ್ರೇಯಸ್ ಗೋಪಾಲ್ 11ಕ್ಕೆ1, ವಿ. ಕೌಶಿಕ್ 23ಕ್ಕೆ1) **ಫಲಿತಾಂಶ:** ಶಿವಮೊಗ್ಗ ಲಯನ್ಸ್‌ಗೆ 36 ರನ್‌ಗಳ ಜಯ. **ಪಂದ್ಯಶ್ರೇಷ್ಠ:** ರೋಹನ್ ಕದಂ.


ಶತಕ ಗಳಿಸಿದ ಬಿ.ಆರ್. ಶರತ್ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್.


ರೋಹನ್, ನಿಹಾಲ್ ಆಟಕ್ಕೆ ಒಲಿದ ಜಯ

ರೋಹನ್ ಕದಂ ಮತ್ತು ನಿಹಾಲ್ ಉಳ್ಳಾಲ ಅವರ ಆರಂಭಿಕ ಜೊತೆಯಾಟದ ನೆರವಿನಿಂದ ಶಿವಮೊಗ್ಗ ಲಯನ್ಸ್ ತಂಡವು 36 ರನ್‌ಗಳಿಂದ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಜಯಿಸಿತು. ತಂಡಕ್ಕೆ ಇದು ಸತತ ಎರಡನೇ ಗೆಲುವು.

ದಿನದ ಎರಡನೇ ಪಂದ್ಯದಲ್ಲಿ ಟಾಸ್ ಗೆದ್ದ ಬೆಂಗಳೂರು ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶಿವಮೊಗ್ಗ ತಂಡದ ಆರಂಭಿಕ ಜೋಡಿ ರೋಹನ್ (70; 47ಎ) ಮತ್ತು ನಿಹಾಲ್ (40; 17ಎ) ಮೊದಲ ವಿಕೆಟ್ ಜೊತೆ ಯಾಟದಲ್ಲಿ 65 ರನ್ ಸೇರಿಸಿದರು. ಈ ಅಡಿಪಾಯದ ಮೇಲೆ ತಂಡವು 20 ಓವರ್ ಗಳಲ್ಲಿ 5 ವಿಕೆಟ್‌ಗಳಿಗೆ 201 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 165 ರನ್ ಗಳಿಸಲಷ್ಟೇ ಶಕ್ತವಾಯಿತು.

ಇಂದಿನ ಪಂದ್ಯಗಳು

ಬೆಂಗಳೂರು ಬ್ಲಾಸ್ಟರ್ಸ್–ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ 1)
ಮೈಸೂರು ವಾರಿಯರ್ಸ್–ಗುಲ್ಬರ್ಗ ಮಿಸ್ಟಿಕ್ಸ್ (ಸಂಜೆ 5.30)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್ ಆ್ಯಪ್


ವಣಿಂದು ಹಸರಂಗಾ

ಟೆಸ್ಟ್ ಕ್ರಿಕೆಟ್‌ಗೆ ಹಸರಂಗಾ ವಿದಾಯ

ಕೊಲಂಬೊ (ಪಿಟಿಐ): ಶ್ರೀಲಂಕಾ ತಂಡದ ಆಲ್‌ರೌಂಡರ್ ವಣಿಂದು ಹಸರಂಗಾ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ. ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ದೀರ್ಘ ಕಾಲ ಆಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದ್ದಾರೆ.

26 ವರ್ಷದ ಹಸರಂಗಾ ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಪ್ರತಿನಿಧಿಸುತ್ತಾರೆ.

‘ಹಸರಂಗಾ ಅವರ ನಿರ್ಧಾರವನ್ನು ಗೌರವಿಸುತ್ತೇವೆ. ಸೀಮಿತ ಓವರ್‌ಗಳ ಮಾದರಿಯಲ್ಲಿ ನಾವು ರೂಪಿಸಿಕೊಂಡಿರುವ ಯೋಜನೆಗಳಿಗೆ ಅವರ ನಿರ್ಧಾರ ಪೂರಕವಾಗಿದೆ. ಅವರು ತಮ್ಮ ಸಂಪೂರ್ಣ ಸಾಮರ್ಥ್ಯ ಮತ್ತು ಸಮಯವನ್ನು ನಿಗದಿಯ ಓವರ್‌ಗಳ ಕ್ರಿಕೆಟ್‌ಗೆ ಸಮರ್ಪಿಸಲು ಸಾಧ್ಯವಾಗಲಿದೆ’ ಎಂದು ಶ್ರೀಲಂಕಾ ಕ್ರಿಕೆಟ್ (ಎಸ್‌ಎಲ್‌ಸಿ) ಸಿಇಒ ಆಷ್ಲೆ ಡಿಸಿಲ್ವಾ ಹೇಳಿದ್ದಾರೆ.

2020ರಲ್ಲಿ ದಕ್ಷಿಣ ಆಫ್ರಿಕಾ ಎದುರು ಸೆಂಚುರಿಯನ್‌ನಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ ಹಸರಂಗಾ ಪದಾರ್ಪಣೆ ಮಾಡಿದ್ದರು. ನಾಲ್ಕು ಟೆಸ್ಟ್‌ಗಳಲ್ಲಿ 196 ರನ್ ಗಳಿಸಿ, 4 ವಿಕೆಟ್ ಪಡೆದಿದ್ದಾರೆ.

48 ಏಕದಿನ ಪಂದ್ಯಗಳಲ್ಲಿ ಆಡಿರುವ ಅವರು 67 ವಿಕೆಟ್ ಪಡೆದಿದ್ದು, 832 ರನ್ ಸೇರಿಸಿದ್ದಾರೆ. 58 ಟ್ವೆಂಟಿ–20 ಪಂದ್ಯಗಳನ್ನೂ ಆಡಿ 533 ರನ್ ಗಳಿಸಿದ್ದು, 91 ವಿಕೆಟ್ ಪಡೆದಿದ್ದಾರೆ.

ಚೊಚ್ಚಲ ಫೈನಲ್‌ಗೆ ಸ್ಪೇನ್

ಮಹಿಳಾ ವಿಶ್ವಕಪ್ ಫುಟ್‌ಬಾಲ್: ಸ್ವೀಡನ್ ತಂಡಕ್ಕೆ ಆಘಾತ

ಆಕ್ಲೆಂಡ್ (ಎಎಫ್‌ಪಿ): ಓಲ್ಗಾ ಕರ್ಮೋನಾ ಅವರು ಪಂದ್ಯ ಕೊನೆಗೊಳ್ಳಲು ಕೆಲವೇ ನಿಮಿಷಗಳಿರುವಾಗ ಗಳಿಸಿದ ಗೋಲಿನ ನೆರವಿನಿಂದ ಸ್ವೀಡನ್ ತಂಡಕ್ಕೆ ಆಘಾತ ನೀಡಿದ ಸ್ಪೇನ್, ಫಿಫಾ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಆಕ್ಲೆಂಡ್‌ನ ಈಡನ್ ಪಾರ್ಕ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಸೆಮಿಫೈನಲ್ ಪಂದ್ಯವನ್ನು ಸ್ಪೇನ್ 2–1 ಗೋಲುಗಳಿಂದ ಗೆದ್ದುಕೊಂಡು ಇದೇ ಮೊದಲ ಬಾರಿ ಫೈನಲ್‌ಗೆ ಲಗ್ಗೆಯಿಟ್ಟಿತು. ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಕರ್ಮೋನಾ ಬಳಗ ಆಸ್ಟ್ರೇಲಿಯಾ ಅಥವಾ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಆರಂಭದಿಂದಲೂ ಪ್ರಬಲ ಪೈಪೋಟಿ ನಡೆದ ಸೆಮಿಫೈನಲ್ ಪಂದ್ಯದ ಮೂರೂ ಗೋಲುಗಳು ಕೊನೆಯ 10 ನಿಮಿಷಗಳಲ್ಲಿ ಬಂದವು. ಪಂದ್ಯ ಇನ್ನೇನು ಹೆಚ್ಚುವರಿ ಅವಧಿಗೆ ವಿಸ್ತರಿಸಲಿದೆ ಎನ್ನುವಷ್ಟರಲ್ಲಿ ಸಲ್ಮಾ ಪರಲುಯೆಲೊ (81ನೇ ನಿ.) ಅವರು ಸ್ಪೇನ್‌ಗೆ ಮುನ್ನಡೆ ತಂದಿತ್ತರು.

ಮರುಹೋರಾಟ ನಡೆಸಿದ ಸ್ವೀಡನ್ ತಂಡಕ್ಕೆ ರೆಬೆಕಾ ಬ್ಲೋಮ್‌ಕ್ವಿಸ್ಟ್ (88ನೇ ನಿ.) ಸಮಬಲದ ಗೋಲು ತಂದಿತ್ತರು. ಇದರಿಂದ ಪಂದ್ಯದ ರೋಚಕತೆ ಹೆಚ್ಚಿತು. ಗೆಲುವಿನ ಗೋಲಿಗಾಗಿ ಉಭಯ ತಂಡಗಳೂ ಜಿದ್ದಿನಿಂದ ಹೋರಾಡಿದವು. 89ನೇ ನಿಮಿಷದಲ್ಲಿ ಫುಲ್‌ಬ್ಯಾಕ್ ಆಟಗಾರ್ತಿ ಕರ್ಮೋನಾ ಅವರಿಂದ ಗೆಲುವಿನ ಗೋಲು ದಾಖಲಾಯಿತು. ಕಾರ್ನರ್ ಕಿಕ್‌ನಲ್ಲಿ ಲಭಿಸಿದ ಚೆಂಡನ್ನು ಗೋಲು ವಲಯದ ಅಲ್ಪ ಹೊರಭಾಗದಲ್ಲಿ ನಿಯಂತ್ರಣಕ್ಕೆ ತೆಗೆದುಕೊಂಡ ಕರ್ಮೋನಾ ಸೊಗಸಾದ ರೀತಿಯಲ್ಲಿ ಗುರಿ ಸೇರಿಸಿದರು. ಅವರು ಒದ್ದ ಚೆಂಡು ಸ್ವೀಡನ್ ಗೋಲ್‌ಕೀಪರ್ ಜೆಸಿರಾ ಮುಸೋವಿಚ್ ಅವರನ್ನು ದಾಟಿಕೊಂಡು ಕ್ರಾಸ್‌ಬಾರ್‌ಗೆ ಬಡಿದು ಗೋಲುಲೈನ್ ಒಳಗೆ ಬಿತ್ತು.

ಸ್ಪೇನ್ ಆಟಗಾರ್ತಿಯರು ಚೊಚ್ಚಲ ಫೈನಲ್ ಪ್ರವೇಶದ ಸಂಭ್ರಮ ಆಚರಿಸಿದರೆ, ನಾಲ್ಕರಘಟ್ಟದಲ್ಲಿ ಮತ್ತೊಮ್ಮೆ ಎಡವಿದ ಸ್ವೀಡನ್ ಆಟಗಾರ್ತಿಯರು ನಿರಾಸೆಗೆ ಒಳಗಾದರು. ಈ ತಂಡ ಕಳೆದ ನಾಲ್ಕು ವಿಶ್ವಕಪ್ ಟೂರ್ನಿಗಳಲ್ಲಿ ಮೂರನೇ ಬಾರಿ ಸೆಮಿಯಲ್ಲಿ ಸೋತು ಹೊರಬಿದ್ದಿತು.

ಮಾತ್ರವಲ್ಲ, ಕಳೆದ ವರ್ಷ ನಡೆದಿದ್ದ ಯೂರೋಪಿಯನ್ ಚಾಂಪಿಯನ್‌ಷಿಪ್‌ನಲ್ಲೂ ಸೆಮಿಯಲ್ಲಿ ಎಡವಿತ್ತು. ಟೋಕಿಯೊ ಒಲಿಂಪಿಕ್ಸ್ ಫೈನಲ್‌ನಲ್ಲಿ ಕೆನಡಾ ಎದುರು ಸೋತು ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟುಕೊಂಡಿತ್ತು.

ಸ್ಪೇನ್ ತಂಡ ಈ ಹಿಂದೆ ಒಮ್ಮೆಯೂ ವಿಶ್ವಕಪ್‌ನಲ್ಲಿ 16ರ ಘಟ್ಟ ದಾಟಿರಲಿಲ್ಲ. ಈ ಬಾರಿ ಪ್ರಶಸ್ತಿ ಸುತ್ತು ತಲುಪಿದ್ದು, ಐತಿಹಾಸಿಕ ಸಾಧನೆಯ ಹೊಸ್ತಿಲಲ್ಲಿದೆ.

ಇಂದಿನ ಸೆಮಿಫೈನಲ್ ಪಂದ್ಯ
ಆಸ್ಟ್ರೇಲಿಯಾ– ಇಂಗ್ಲೆಂಡ್
(ಆರಂಭ: ಮಧ್ಯಾಹ್ನ 3.30)
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್


ಸ್ಪೇನ್ ತಂಡದ ಗೆಲುವಿನ ಗೋಲು ಗಳಿಸಿದ ಓಲ್ಗಾ ಕರ್ಮೋನಾ (19) ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಫಿಡೆ ವಿಶ್ವಕಪ್ ಚೆಸ್: ಅರ್ಜುನ್‌ಗೆ ಗೆಲುವು

ಕಾರ್ಲ್‌ಸನ್‌ಗೆ ಮಣಿದ ಗುಕೇಶ್

ಬಾಕು, ಅಜರ್‌ಬೈಜಾನ್ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಫಿಡೆ ವಿಶ್ವಕಪ್ ಚೆಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಹಣಾಹಣಿಯ ಮೊದಲ ಪಂದ್ಯದಲ್ಲಿ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಎದುರು ಸೋತರು.

ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ ಕಾರ್ಲ್‌ಸನ್, ‘ಎಂಡ್ ಗೇಮ್’ನಲ್ಲಿ ಚಾಣಾಕ್ಷತನ ತೋರಿ 17 ವರ್ಷದ ಗುಕೇಶ್ ಅವರನ್ನು ಮಣಿಸಿ 1–0 ಯಿಂದ ಮುನ್ನಡೆ ಸಾಧಿಸಿದರು.


ಸೆಮಿಫೈನಲ್ ಪ್ರವೇಶದ ಕನಸು ಜೀವಂತವಾಗಿರಿಸಿ ಕೊಳ್ಳಬೇಕಾದರೆ ಗುಕೇಶ್, ಬುಧವಾರ ನಡೆಯಲಿರುವ 2ನೇ ಪಂದ್ಯದಲ್ಲಿ ಗೆಲ್ಲಲೇಬೇಕು. ಕಾರ್ಲ್‌ಸನ್ ಅವರು ಡ್ರಾ ಮಾಡಿಕೊಂಡರೂ ಸೆಮಿ ಪ್ರವೇಶಿಸಲಿದ್ದಾರೆ. ಒಂದು ವೇಳೆ ಗುಕೇಶ್ ಗೆದ್ದರೆ, ಟೈಬ್ರೇಕರ್‌ನಲ್ಲಿ ವಿಜೇತರನ್ನು ನಿರ್ಣಯಿಸಲಾಗುತ್ತದೆ.

ಭಾರತದ ಇಬ್ಬರು ಗ್ರ್ಯಾಂಡ್‌ಮಾಸ್ಟರ್‌ಗಳ ನಡುವಣ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ 19 ವರ್ಷದ ಅರ್ಜುನ್ ಇರಿಗೇಶಿ ಅವರು 53 ನಡೆಗಳಲ್ಲಿ ಆರ್. ಪ್ರಜ್ಞಾನಂದ ಅವರನ್ನು ಮಣಿಸಿದರು. ಕಪ್ಪು ಕಾಯಿಗಳೊಂದಿಗೆ ಆಡಿದ ಅರ್ಜುನ್, ಚತುರ ನಡೆಗಳ ಮೂಲಕ ಮೇಲುಗೈ ಸಾಧಿಸಿದರು.

ಭಾರತದ ಇನ್ನೊಬ್ಬ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಸಂತೋಷ್ ಗುಜರಾತಿ ಅವರು ಅಜರ್‌ಬೈಜಾನ್‌ನ ನಿಜಾತ್ ಅಬಸೊವ್ ವಿರುದ್ಧದ ಮೊದಲ ಪಂದ್ಯವನ್ನು ಡ್ರಾ ಮಾಡಿಕೊಂಡರು. ಐದು ಗಂಟೆಗೂ ಹೆಚ್ಚು ಕಾಲ ನಡೆದ ಹೋರಾಟದಲ್ಲಿ ವಿದಿತ್, ಎಲ್ಲ ತಂತ್ರಗಳನ್ನು ಪ್ರಯೋಗಿಸಿದರೂ ಗೆಲುವು ದಕ್ಕಲಿಲ್ಲ. 108 ನಡೆಗಳ ನಂತರ ಇಬ್ಬರೂ ಪಾಯಿಂಟ್ ಹಂಚಿಕೊಳ್ಳಲು ನಿರ್ಧರಿಸಿದರು.

ಫ್ಯಾಬಿಯಾನೊ ಕರುವಾನ ಮತ್ತು ಡೊಮಿನಿಗ್ವೆಜ್ ಪೆರೆಜ್ ಲೆನಿಯೆರ್ ನಡುವಣ ಮೊದಲ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು.

ಐತಿಹಾಸಿಕ ಕ್ಷಣ: ಆನಂದ್



ನವದೆಹಲಿ (ಪಿಟಿಐ): ಫಿಡೆ ವಿಶ್ವಕಪ್ ಚೆಸ್ ಟೂರ್ನಿಯಲ್ಲಿ ಭಾರತದ ನಾಲ್ವರು ಸ್ಪರ್ಧಿಗಳು ಕ್ವಾರ್ಟರ್ ಫೈನಲ್ ಪ್ರವೇಶಿಸಿರುವುದು ‘ಐತಿಹಾಸಿಕ ಕ್ಷಣ’ ಎಂದು ದಿಗ್ಗಜ ಆಟಗಾರ ವಿಶ್ವನಾಥನ್ ಆನಂದ್ ಶ್ಲಾಘಿಸಿದ್ದಾರೆ.

‘ಭಾರತದ ಚೆಸ್ ಕ್ರೀಡೆಯಲ್ಲಿ ಇದು ಐತಿಹಾಸಿಕ ಕ್ಷಣ. ಏಕೆಂದರೆ ವಿಶ್ವಕಪ್‌ನಂತಹ ಪ್ರಮುಖ ಟೂರ್ನಿಗಳಲ್ಲಿ ಪ್ರಶಸ್ತಿಯ ಸನಿಹ ತಲುಪಬಲ್ಲ ಹಲವು ಸ್ಪರ್ಧಿಗಳು ನಮ್ಮಲ್ಲಿದ್ದಾರೆ’ ಎಂದು ಚೆಸ್ ಡಾಟ್ ಕಾಮ್‌ಗೆ ನೀಡಿದ ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

‘ಫಿಡೆ ವಿಶ್ವಕಪ್‌ನಲ್ಲಿ ಒಬ್ಬರು ಅಥವಾ ಇಬ್ಬರು ಕ್ವಾರ್ಟರ್ ಫೈನಲ್ ಪ್ರವೇಶಿಸಬಹುದು ಎಂದು ಭಾವಿಸಿದ್ದೆ. ಆದರೆ ನಾಲ್ವರು ಕ್ವಾರ್ಟರ್ ಫೈನಲ್ ಹಂತ ತಲುಪಿದ್ದಾರೆ. ಆದ್ದರಿಂದ ಭಾರತದ ಚೆಸ್‌ಗೆ ಇದು ಸಂತಸದ ಸಮಯ. ಈ ಸಾಧನೆ ಖುಷಿ ನೀಡಿದೆ’ ಎಂದು 5 ಬಾರಿಯ ವಿಶ್ವ ಚಾಂಪಿಯನ್ ಹೇಳಿದ್ದಾರೆ.

ಫುಟ್‌ಬಾಲ್ ದಿಗ್ಗಜ ಹಬೀಬ್ ನಿಧನ



ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಮೊಹಮ್ಮದ್ ಹಬೀಬ್ (74) ಅವರು ತಮ್ಮ ಹುಟ್ಟೂರು ಹೈದರಾಬಾದ್‌ನಲ್ಲಿ ಮಂಗಳವಾರ ನಿಧನರಾದರು.

ಕಳೆದ ಕೆಲ ವರ್ಷಗಳಿಂದ ಅವರು ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿದ್ದರು. ಅವರಿಗೆ ಪತ್ನಿ ಹಾಗೂ ಮೂವರು ಪುತ್ರಿಯರು ಇದ್ದಾರೆ.

ಮಿಡ್‌ಫೀಲ್ಡರ್ ಆಗಿದ್ದ ಅವರು 1970ರ ಬ್ಯಾಂಕಾಕ್ ಏಷ್ಯನ್ ಗೇಮ್ಸ್‌ನಲ್ಲಿ ಕಂಚು ಜಯಿಸಿದ್ದ ಭಾರತ ತಂಡದಲ್ಲಿ ಆಡಿದ್ದರು. 1960ರ ದಶಕದ ಕೊನೆ ಮತ್ತು 70ರ ದಶಕದಲ್ಲಿ ಮೋಹನ್ ಬಾಗನ್, ಈಸ್ಟ್ ಬೆಂಗಾಲ್ ಮತ್ತು ಮಹಮಡನ್ ಸ್ಪೋರ್ಟಿಂಗ್ ತಂಡಗಳನ್ನು ಪ್ರತಿನಿಧಿಸಿದ್ದರು.

ಫುಟ್‌ಬಾಲ್ ದಂತಕತೆ ಬ್ರೆಜಿಲ್‌ನ ಪೆಲೆ ಅವರನ್ನೊಳಗೊಂಡ ನ್ಯೂಯಾರ್ಕ್ ಕಾಸ್ಮೋಸ್ ತಂಡದ ವಿರುದ್ಧ 1977ರಲ್ಲಿ ನಡೆದಿದ್ದ ಪ್ರದರ್ಶನ ಪಂದ್ಯದಲ್ಲಿ ಅವರು ಮೋಹನ್ ಬಾಗನ್ ತಂಡದಲ್ಲಿ ಆಡಿದ್ದರು. ಆ ಪಂದ್ಯದಲ್ಲಿ ಒಂದು ಗೋಲು ಗಳಿಸಿದ್ದ ಅವರ ಆಟವನ್ನು ಪೆಲೆ ಕೊಂಡಾಡಿದ್ದರು.

ಆಟಗಾರನಾಗಿದ್ದ ಅವಧಿಯಲ್ಲಿ ಹಬೀಬ್ ಅವರನ್ನು ಅರಸಿಕೊಂಡು ಹಲವು ಉದ್ಯೋಗಾವಕಾಶಗಳು ಬಂದಿದ್ದರೂ, ಎಲ್ಲವನ್ನೂ ತಿರಸ್ಕರಿಸಿದ್ದರು. ಇದರಿಂದ ದೇಶದ ಮೊದಲ ‘ನೈಜ ವೃತ್ತಿಪರ ಫುಟ್‌ಬಾಲ್ ಆಟಗಾರ’ ಎಂಬ ಹೆಸರಿನಿಂದಲೂ ಗುರುತಿಸಿಕೊಂಡಿದ್ದರು. ನಿವೃತ್ತಿಯ ಬಳಿಕ ಅವರು ಟಾಟಾ ಫುಟ್‌ಬಾಲ್ ಅಕಾಡೆಮಿ ಮತ್ತು ಪಶ್ಚಿಮ ಬಂಗಾಳದ ಹಲ್ದಿಯಾದಲ್ಲಿರುವ ಭಾರತ ಫುಟ್‌ಬಾಲ್ ಸಂಸ್ಥೆ ಅಕಾಡೆಮಿಯಲ್ಲಿ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು.

ಏಷ್ಯನ್ ಗೇಮ್ಸ್: ಹಿಂದೆ ಸರಿದ ವಿನೇಶಾ

ನವದೆಹಲಿ (ಪಿಟಿಐ): ಕುಸ್ತಿಪಟು ವಿನೇಶಾ ಫೋಗಟ್ ಅವರು ಮುಂದಿನ ತಿಂಗಳು ನಡೆಯಲಿರುವ ಏಷ್ಯನ್ ಕ್ರೀಡಾಕೂಟದಿಂದ ಹಿಂದೆ ಸರಿದಿದ್ದಾರೆ.

‘ಮೊಣಕಾಲಿಗೆ ಗಾಯವಾಗಿದ್ದು ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಎಂದು ವೈದ್ಯರು ಹೇಳಿದ್ದಾರೆ. ಆದ್ದರಿಂದ ಕ್ರೀಡಾಕೂಟದಲ್ಲಿ ಸ್ಪರ್ಧಿಸುವುದಿಲ್ಲ’ ಎಂದು ವಿನೇಶಾ ಮಂಗಳವಾರ ಹೇಳಿದ್ದಾರೆ.

ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸಲು ವಿನೇಶಾ ಮತ್ತು ಬಜರಂಗ್ ಪೂನಿಯಾ ಅವರಿಗೆ ನೇರಪ್ರವೇಶ ನೀಡಲಾಗಿತ್ತು. ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಡ್‌ಹಾಕ್ ಸಮಿತಿಯ ತೀರ್ಮಾನವು ಟೀಕೆಗೊಳಗಾಗಿತ್ತು. ಈ ನಿರ್ಧಾರಕ್ಕೆ ಆಕ್ಷೇಪಿಸಿದ್ದ ಯುವ ಕುಸ್ತಿಪಟು ಅಂತಿಮ ಪಂಘಾಲ್ ಅವರು ದೂರು ಕೂಡ ನೀಡಿದ್ದರು. ಇದೀಗ ವಿನೇಶಾ ಅವರು ಹಿಂದೆ ಸರಿದಿರುವುದರಿಂದ ಅಂತಿಮ ಅವರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

‘ದುಃಖಕರ ಸುದ್ದಿಯನ್ನು ಹಂಚಿಕೊಳ್ಳುತ್ತಿದ್ದೇನೆ. ಆಗಸ್ಟ್ 13ರಂದು ತಾಲೀಮು ನಡೆಸಿದ ಸಂದರ್ಭದಲ್ಲಿ ನನ್ನ ಎಡ ಮೊಣಕಾಲಿಗೆ ಗಾಯವಾಯಿತು. ಸ್ಕ್ಯಾನಿಂಗ್ ಆದ ನಂತರ ಶಸ್ತ್ರಚಿಕಿತ್ಸೆಯ ಅಗತ್ಯವಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಗಾಯದಿಂದ ಗುಣಮುಖವಾಗಲು ಶಸ್ತ್ರಚಿಕಿತ್ಸೆಯೊಂದೇ ನನ್ನ ಮುಂದಿರುವ ದಾರಿ. ಇದು ದುರದೃಷ್ಟಕರ’ ಎಂದು ವಿನೇಶಾ ಎಕ್ಸ್ (ಟ್ವಿಟರ್) ಖಾತೆಯಲ್ಲಿ ಬರೆದಿದ್ದಾರೆ.

‘ಇದೇ 17ರಂದು ಮುಂಬೈನಲ್ಲಿ ಶಸ್ತ್ರಚಿಕಿತ್ಸೆ ನಡೆಯಲಿದೆ. 2018ರ ಜಕಾರ್ತಾ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದಿದ್ದೆ. ಅದನ್ನು ಈ ಕ್ರೀಡಾಕೂಟದಲ್ಲಿಯೂ ಉಳಿಸಿಕೊಳ್ಳುವ ಛಲವಿತ್ತು. ಆದರೆ ಗಾಯದಿಂದಾಗಿ ಆ ಕನಸು ಕೈಗೂಡುವುದಿಲ್ಲ’ ಎಂದೂ ವಿನೇಶಾ ಬೇಸರ ವ್ಯಕ್ತಪಡಿಸಿದ್ದಾರೆ.

ಸಂಬಂಧಪಟ್ಟ ಎಲ್ಲ ಅಧಿಕಾರಿಗಳು ಮತ್ತು ಸಂಸ್ಥೆಗಳಿಗೆ ತಿಳಿಸಿರುವುದಾಗಿಯೂ ಅವರು ಹೇಳಿದ್ದಾರೆ.

ಅಂತಿಮ ಪಂಘಾಲ್ 20 ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್ ಆಗಿದ್ದಾರೆ. ಹೋದ ಶನಿವಾರ ನಡೆದ ಟ್ರಯಲ್ಸ್‌ನಲ್ಲಿಯೂ ಅವರು ಗೆದ್ದಿದ್ದಾರೆ. ಆದ್ದರಿಂದ ತಂಡದಲ್ಲಿ ಅವರನ್ನು ಮೀಸಲು ಆಟಗಾರ್ತಿಯಾಗಿ ನೇಮಕ ಮಾಡಲಾಗಿತ್ತು.

‘ನನ್ನ ಎಲ್ಲ ಅಭಿಮಾನಿಗಳು ಮತ್ತು ಹಿತಚಿಂತಕರು ತಮ್ಮ ಬೆಂಬಲವನ್ನು ಹೀಗೆಯೇ ಮುಂದುವರಿಸಬೇಕು ಎಂದು ಕೋರುತ್ತೇನೆ. ನಾನು ಮತ್ತೆ ಸದೃಢಳಾಗಿ ಕಣಕ್ಕೆ ಮರಳುವೆ. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವೆ’ ಎಂದೂ ವಿನೇಶಾ ತಮ್ಮ ಪೋಸ್ಟ್‌ನಲ್ಲಿ ಬರೆದಿದ್ದಾರೆ.


ವಿನೇಶಾ ಫೋಗಟ್

ಉತ್ಸಾಹ ಕಳೆದುಕೊಂಡಿದ್ದೇನೆ: ದೀಪಾ

ನವದೆಹಲಿ (ಪಿಟಿಐ): ಮುಂಬರುವ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ತಂಡದಲ್ಲಿ ತಮಗೆ ಸ್ಥಾನ ನೀಡದ್ದಕ್ಕೆ, ಜಿಮ್ನಾಸ್ಟ್ ಸ್ಪರ್ಧಿ ದೀಪಾ ಕರ್ಮಾಕರ್ ಅವರು ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಮತ್ತು ಕ್ರೀಡಾ ಸಚಿವಾಲಯದ ವಿರುದ್ಧ ಹರಿಹಾಯ್ದಿದ್ದಾರೆ.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ದೀಪಾ, ಏಷ್ಯನ್ ಗೇಮ್ಸ್‌ಗೆ ತಂಡದ ಆಯ್ಕೆಗೆ ಈಚೆಗೆ ನಡೆದಿದ್ದ ಟ್ರಯಲ್ಸ್‌ನಲ್ಲಿ ಅಗ್ರಸ್ಥಾನ ಗಳಿಸಿದ್ದರು. ಆದರೆ ಕಳೆದ 12 ತಿಂಗಳ ಅವಧಿಯಲ್ಲಿ ಏಷ್ಯಾದ ಸ್ಪರ್ಧೆಗಳಲ್ಲಿ ಅಗ್ರ ಎಂಟರೊಳಗೆ ಸ್ಥಾನ ಪಡೆದಿರಬೇಕು ಎಂಬ ಮಾನದಂಡವನ್ನು ಪೂರೈಸದ ಕಾರಣ ಅವರನ್ನು ಏಷ್ಯನ್ ಗೇಮ್ಸ್‌ಗೆ ಪರಿಗಣಿಸಿಲ್ಲ.

‘ಸ್ವಾತಂತ್ರ್ಯ ದಿನದಂದು, ನಾನು ನನ್ನ ವಾಕ್ ಸ್ವಾತಂತ್ರ್ಯ ಬಳಸಿಕೊಂಡು ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಚರ್ಚಿಸುತ್ತೇನೆ. ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವುದನ್ನು ಕಳೆದ ಎರಡು ವರ್ಷಗಳಿಂದ ಎದುರು ನೋಡುತ್ತಿದ್ದೆ. ಆದರೆ ಅವಕಾಶ ಸಿಗದಿರುವುದು ನನ್ನನ್ನು ದುರ್ಬಲ ಮತ್ತು ನಿರುತ್ಸಾಹಗೊಳಿಸಿದೆ’ ಎಂದು ‘ಎಕ್ಸ್’ (ಟ್ವಿಟರ್) ಖಾತೆಯಲ್ಲಿ ಮಂಗಳವಾರ ಬರೆದುಕೊಂಡಿದ್ದಾರೆ.


ತಮಗೆ ಆಗಿರುವ ಅನ್ಯಾಯದ ಬಗ್ಗೆ ಕ್ರೀಡಾ ಇಲಾಖೆ ಮತ್ತು ಎಸ್‌ಎಐ ಮೌನ ವಹಿಸಿರುವುದಕ್ಕೆ ದೀಪಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಪ್ರಮುಖ ಕೂಟಕ್ಕಾಗಿ ನಾವು ಮಾಡುವ ಕಠಿಣ ಪರಿಶ್ರಮ ಮತ್ತು ತ್ಯಾಗವನ್ನು ಯಾರೂ ಗಮನಿಸದಿರುವುದು ನೋವಿನ ವಿಚಾರ. ಎಲ್ಲ ಕ್ರೀಡೆಗಳಲ್ಲಿ ಆಯ್ಕೆಯ ಮಾನದಂಡಗಳು ಪಾರದರ್ಶಕವಾಗಿರಬೇಕು’ ಎಂದು ಆಗ್ರಹಿಸಿದ್ದಾರೆ.

‘ಟ್ರಯಲ್ಸ್‌ನಲ್ಲಿ ಗೆದ್ದು ಆಯ್ಕೆಯ ಮಾನದಂಡಗಳನ್ನು ಪೂರೈಸಿದ್ದರೂ ನನಗೆ ಅವಕಾಶ ನೀಡದಿರುವುದು ಅಚ್ಚರಿ ಮೂಡಿಸಿದೆ. ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳಲು ದೊರೆತ ಅವಕಾಶವನ್ನು ನನ್ನಿಂದ ಕಸಿದುಕೊಳ್ಳಲಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.


ದೀಪಾ

ಭಾರತ ವಿರುದ್ಧದ ಸರಣಿಗೆ ವಾಪಸಾಗುವ ವಿಶ್ವಾಸದಲ್ಲಿ ಕಮಿನ್ಸ್



ಸಿಡ್ನಿ: ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ನಾಯಕ ಪ್ಯಾಟ್ ಕಮಿನ್ಸ್, ಸೆಪ್ಟೆಂಬರ್ ಅಂತ್ಯದಲ್ಲಿ ನಡೆಯುವ ಭಾರತ ವಿರುದ್ಧದ ಮೂರು ಏಕದಿನ ಪಂದ್ಯಗಳ ಸರಣಿಗೆ ವಾಪಸಾಗುವ ವಿಶ್ವಾಸವನ್ನು ಮಂಗಳವಾರ ವ್ಯಕ್ತಪಡಿಸಿದ್ದಾರೆ.

ಜುಲೈ 27ರಿಂದ 31ರವರೆಗೆ ನಡೆದ ಆ್ಯಷಸ್ ಸರಣಿಯ ಐದನೇ ಪಂದ್ಯದ ವೇಳೆ ವೇಗದ ಬೌಲರ್ ಆಗಿರುವ ಕಮಿನ್ಸ್ ಅವರ ಎಡಗೈ ಮಣಿಕಟ್ಟಿಗೆ ಗಾಯವಾಗಿತ್ತು. ಹೀಗಾಗಿ, ಅವರಿಗೆ ಆರು ವಾರಗಳ ವಿಶ್ರಾಂತಿಗೆ ಸಲಹೆ ನೀಡಲಾಗಿದೆ. ಹೀಗಾಗಿ, ಸೆ.7ರಿಂದ 17ರ ನಡುವೆ ನಡೆಯುವ ದಕ್ಷಿಣ ಆಫ್ರಿಕಾ ವಿರುದ್ಧದ ಐದು ಏಕದಿನ ಸರಣಿಗೆ ಅವರು ಅಲಭ್ಯರಾಗಿದ್ದಾರೆ.

ಸೆ.22, 24 ಮತ್ತು 27ರಂದು ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ಮೂರು ಏಕದಿನ ಪಂದ್ಯಗಳು ನಿಗದಿಯಾಗಿದ್ದು, ಆ ಸರಣಿಯಲ್ಲಿ ತಂಡವನ್ನು ಮುನ್ನಡೆಸುವ ವಿಶ್ವಾಸದಲ್ಲಿದ್ದಾರೆ.

‘ಕೆಲ ವಾರಗಳಲ್ಲಿ ಸಂಪೂರ್ಣವಾಗಿ ಚೇತರಿಸಿಕೊಳ್ಳಲಿದ್ದೇನೆ. ವಿಶ್ವಕಪ್‌ಗೆ ಮುನ್ನ ನಡೆಯುವ ಭಾರತ ವಿರುದ್ಧದ ಏಕದಿನ ಸರಣಿ ಹಾಗೂ ಭಾರತದಲ್ಲಿ ನಡೆಯುವ ಏಕದಿನ ವಿಶ್ವಕಪ್ ಟೂರ್ನಿ ಆಡಲು ಎದುರು ನೋಡುತ್ತಿದ್ದೇನೆ’ ಎಂದು ಕಮಿನ್ಸ್ ಹೇಳಿದ್ದಾರೆ.


ಐರ್ಲೆಂಡ್‌ನಲ್ಲಿ ಆಗಸ್ಟ್ 18ರಿಂದ 23ರವರೆಗೆ ನಡೆಯಲಿರುವ ಟಿ20 ಕ್ರಿಕೆಟ್ ಸರಣಿಯಲ್ಲಿ ಭಾಗವಹಿಸಲು ಭಾರತ ತಂಡದ ಆಟಗಾರರು ಮಂಗಳವಾರ ಪ್ರಯಾಣ ಬೆಳೆಸಿದರು. ತಂಡ ನಾಯಕ ಜಸ್‌ಪ್ರೀತ್ ಬೂಮ್ರಾ, ಕನ್ನಡಿಗ ಪ್ರಸಿದ್ಧ ಕೃಷ್ಣ, ಋತುರಾಜ್ ಗಾಯಕವಾಡ ಇದ್ದರು –ಬಿಸಿಸಿಐ ಎಕ್ಸ್ (ಟ್ವಿಟರ್) ಚಿತ್ರ

ಯಂಗ್ ಓರಿಯನ್ಸ್ ಕ್ಲಬ್‌ಗೆ ಜಯ

ಬೆಂಗಳೂರು: ಯಂಗ್ ಓರಿಯನ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು ಪ್ರೊ.ಎನ್.ಸಿ. ಪರಪ್ಪ ಸ್ಮಾರಕ ಎವರ್ ರೋಲಿಂಗ್ ಟ್ರೋಫಿಯ ರಾಜ್ಯ ‘ಎ’ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 100–37ರಿಂದ ಎಸ್. ಬ್ಲೂಸ್ ತಂಡವನ್ನು ಮಣಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಆರನ್ (28) ಮತ್ತು ಗೌತಮ್ (13) ಅವರ ಆಟದ ಬಲದಿಂದ ಯಂಗ್ ಓರಿಯನ್ಸ್ ತಂಡ 63 ಪಾಯಿಂಟ್‌ಗಳ ಅಂತರದ ಜಯ ಸಾಧಿಸಿತು.

ಇತರ ಪಂದ್ಯಗಳಲ್ಲಿ ಬ್ಯಾಂಕ್ ಆಫ್ ಬರೋಡಾ ತಂಡವು 84–75ರಿಂದ ಮಂಗಳೂರು ಬಿ.ಸಿ ತಂಡವನ್ನು ಸೋಲಿಸಿತು. ಮಧ್ಯಂತರದ ವೇಳೆಗೆ 36–39ರಿಂದ ಹಿನ್ನಡೆಯಲ್ಲಿದ್ದ ಬರೋಡಾ ತಂಡ ನಂತರ ಪುಟಿದೆದ್ದಿತು. ಬರೋಡಾ ತಂಡದ ಅನಿಲ್ ಕುಮಾರ್ (32), ಅರವಿಂದ್ (22) ಮಿಂಚಿದರು. ಮಂಗಳೂರು ತಂಡದ ಅಶ್ವಿಜ್ (24) ಗಮನ ಸೆಳೆದರು. ಶಶಿಧರ್ (25) ಅವರ ಆಟದ ನೆರವಿನಿಂದ ಡಿವೈಇಎಸ್ ಬೆಂಗಳೂರು ತಂಡವು 73–69ರಿಂದ ಐಬಿಬಿಸಿ ತಂಡದ ವಿರುದ್ಧ ಜಯಿಸಿತು. ಮತ್ತೊಂದು ಪಂದ್ಯದಲ್ಲಿ ಮಂಗಳೂರು ಬಿ.ಸಿ ತಂಡವು 73–62ರಿಂದ ಭಾರತ್ ಎಸ್.ಯು ತಂಡವನ್ನು ಪರಾಭವಗೊಳಿಸಿತು. ಮಂಗಳೂರು ತಂಡದ ರಜತ್ (29) ಮಿಂಚಿದರೆ, ಭಾರತ್ ತಂಡದ ಅಕ್ಷಯ್ (32) ಗಮನ ಸೆಳೆದರು.

ಸೌತ್ ಯುನೈಟೆಡ್ ತಂಡಕ್ಕೆ ಜಯ

ಬೆಂಗಳೂರು: ಸೌತ್ ಯುನೈಟೆಡ್ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–1ರಿಂದ ರೆಬೆಲ್ಸ್ ಎಫ್.ಸಿ ತಂಡದವರನ್ನು ಮಣಿಸಿದರು.

ಮಂಗಳವಾರ ನಡೆದ ಮೊದಲ ಪಂದ್ಯದಲ್ಲಿ ಬಿಬಿನ್ ಬಾಬು 6ನೇ ನಿಮಿಷದಲ್ಲೇ ಗೋಲಿನ ಖಾತೆ ತೆರೆದು ರೆಬೆಲ್ಸ್ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ, ಸೌತ್ ಯುನೈಟೆಡ್‌ನ ವಿ.ಎಸ್. ತೋಟ್ಕಥರ್ ಜಿಮಿಕ್ ಅವರು 13ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ ಗೋಲನ್ನು ಸಮಬಲ ಗೊಳಿಸಿದರು. 38ನೇ ನಿಮಿಷದಲ್ಲಿ ಎಂ.ಡಿ. ಅಲ್ತಾಬ್ ಹುಸೇನ್ ನಿರ್ಣಾಯಕ ಗೋಲು ತಂದಿತ್ತು, ಸೌತ್ ಯುನೈಟೆಡ್‌ನ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮತ್ತೊಂದು ಪಂದ್ಯದಲ್ಲಿ ಕಿಕ್ ಸ್ಟಾರ್ಟ್ ಎಫ್.ಸಿ ತಂಡವು 4–0ಯಿಂದ ಅಗ್ನಿಪುತ್ರ ತಂಡವನ್ನು ಸೋಲಿಸಿತು. ಕಿಕ್‌ಸ್ಟಾರ್ಟ್ ತಂಡದ ಪರವಾಗಿ ಆರ್. ಸೊಲೈಮಲೈ (48 ಮತ್ತು 62ನೇ), ಬೆಂಜಮಿನ್ ಲುಫೆಂಗ್ (80ನೇ), ಅಭಿಷೇಕ್ ಪವರ್ (84ನೇ) ಗೋಲು ಗಳಿಸಿದರು.


ಸೌತ್ ಯುನೈಟೆಡ್ ಎಫ್‌ಸಿ ತಂಡದ ಅಲ್ತಾಬ್ ಹುಸೇನ್ (ಮಧ್ಯ) ಗೋಲು ಗಳಿಸಲು ಯತ್ನಿಸುತ್ತಿರುವುದು –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

‘ಕೋಣೆ ತುಂಬುವಷ್ಟು ಪದಕಗಳ ಗುರಿ’

ಗುವಾಹಟಿ (ಪಿಟಿಐ): ಆಟದಿಂದ ನಿವೃತ್ತಿಯಾಗುವ ಮುನ್ನ ತಮ್ಮ ಮನೆಯ ಕೋಣೆ ತುಂಬುವಷ್ಟು ಪದಕಗಳನ್ನು ಜಯಿಸುವುದೇ ಗುರಿ ಎಂದು ಬ್ಯಾಡ್ಮಿಂಟನ್ ಆಟಗಾರ ಚಿರಾಗ್ ಶೆಟ್ಟಿ ಹೇಳಿದ್ದಾರೆ.

ಪುರುಷರ ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿಯವರೊಂದಿಗೆ ಆಡುವ ಅವರು ಹೋದ ವರ್ಷ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದಿದ್ದರು. ಪ್ರಸಕ್ತ ಋತುವಿನಲ್ಲಿ ಇಂಡೊನೇಷ್ಯಾ ಓಪನ್, ಏಷ್ಯಾ ಚಾಂಪಿಯನ್‌ಷಿಪ್, ಸ್ವಿಸ್ ಓಪನ್ ಮತ್ತು ಕೊರಿಯಾ ಓಪನ್ ಪ್ರಶಸ್ತಿ ಗೆದ್ದಿದ್ದರು.

‘ಕೆಲವು ವರ್ಷಗಳ ನಂತರ ನಾವು ನಿವೃತ್ತರಾಗುತ್ತೇವೆ. ಅಷ್ಟರಲ್ಲಿ ನನ್ನ ಕೋಣೆಯಲ್ಲಿ ಪದಕಗಳು ತುಂಬಿರಬೇಕು. ಬ್ಯಾಡ್ಮಿಂಟನ್ ಕ್ರೀಡೆಯ ಎಲ್ಲ ಪ್ರತಿಷ್ಠಿತ ಪ್ರಶಸ್ತಿಗಳೂ ಅಲ್ಲಿರಬೇಕು’ ಎಂದು ಚಿರಾಗ್ ಅವರು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.


ಚಿರಾಗ್ ಶೆಟ್ಟಿ

ಜಪಾನ್: ಶಾಂತಿ ಸ್ಥಾಪನೆಗೆ ಶಪಥ ಮಾಡಿದ ಕಿಶಿದಾ

ಟೋಕಿಯೊ (ಎಪಿ): ಎರಡನೇ ಜಾಗತಿಕ ಮಹಾಯುದ್ಧದಲ್ಲಿ ಜಪಾನ್ ಪರಾಭವಗೊಂಡಿದ್ದರ ನೆನಪಿಗಾಗಿ ಮಂಗಳವಾರ ನಡೆದ 78ನೇ ವರ್ಷದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ಫುಮಿಯೊ ಕಿಶಿದಾ, ಶಾಂತಿ ಸ್ಥಾಪನೆಗಾಗಿ ಶ್ರಮಿಸುವ ಶಪಥ ಮಾಡಿದರು.

ಮಹಾಯುದ್ಧದ ಸಂದರ್ಭದಲ್ಲಿ ಏಷ್ಯಾದಲ್ಲಿ ಜಪಾನ್ ಅನುಸರಿಸಿದ್ದ ಆಕ್ರಮಣಕಾರಿ ನಡೆಯನ್ನು ಕೂಡ ಅವರು ಪ್ರಸ್ತಾಪಿಸಲಿಲ್ಲ. ಆದರೆ, ‘ಯುದ್ಧದಿಂದಾದ ಅನಾಹುತಗಳನ್ನು ಪುನರಾವರ್ತನೆಯಾಗದಂತೆ ನೋಡಿಕೊಳ್ಳುವ ನಮ್ಮ ನಿರ್ಧಾರಕ್ಕೆ ಜಪಾನ್ ಈಗಲೂ ಬದ್ಧವಾಗಿದೆ’ ಎಂದು ಕಿಶಿದಾ ಹೇಳಿದರು.

ಯುದ್ಧದಿಂದಾದ ಹಾನಿ, ಅದರಲ್ಲೂ ಹಿರೋಶಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ಅಮೆರಿಕದ ಅಣುಬಾಂಬ್ ದಾಳಿಯಿಂದಾದ ಸಾವು–ನೋವಿನ ಬಗ್ಗೆ ಕಿಶಿದಾ ಪ್ರಸ್ತಾಪಿಸಿದರು.

ಕಿಶಿದಾ ಅವರ ಸಂಪುಟದ ಕೆಲ ಸಚಿವರು, ಮೂವರು ಮಾಜಿ ಸಚಿವರು ಯುದ್ಧಸ್ಮಾರಕಕ್ಕೆ ತೆರಳಿ, ಗೌರವ ಸಲ್ಲಿಸಿದ್ದಾರೆ. ಸಚಿವರ ಈ ನಡೆಯು, ಜಪಾನ್‌ನ ಯುದ್ಧ ಸನ್ನದ್ಧತೆಯ ಸಂಕೇತವಾಗಿದೆ ಎಂದು ನೆರೆಯ ರಾಷ್ಟ್ರಗಳು ವಿಶ್ಲೇಷಿಸಿವೆ.

ಕಾರ್ಯಕ್ರಮದಲ್ಲಿ 1,700 ರಷ್ಟಿದ್ದ ಜನರು ಮೌನಾಚರಣೆ ಮೂಲಕ ಗೌರವ ಸಲ್ಲಿಸಿದರು. ಕೋವಿಡ್ ಪಿಡುಗಿಗೂ ಮುಂಚಿನ ದಿನಗಳಲ್ಲಿ ನಡೆದ ಕಾರ್ಯಕ್ರಮದಲ್ಲಿ 5 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುತ್ತಿದ್ದುದು ಗಮನಾರ್ಹ.


ಕಿಶಿದಾ

ಚುನಾವಣಾ ಫಲಿತಾಂಶ ಬುಡಮೇಲು ಯತ್ನ ಪ್ರಕರಣ

ಟ್ರಂಪ್ ವಿರುದ್ಧ ದೋಷಾರೋಪ ಹೊರಿಸಿದ ನ್ಯಾಯಾಲಯ

ವಾಷಿಂಗ್ಟನ್ (ಪಿಟಿಐ): 2020ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಜಾರ್ಜಿಯಾದಲ್ಲಿನ ತಮ್ಮ ಸೋಲನ್ನು ಬುಡಮೇಲು ಮಾಡಲು ಪ್ರಯತ್ನಿಸಿದ ಹಾಗೂ ವಂಚನೆಗೆ ಸಂಬಂಧಿಸಿದ ಪ್ರಕರಣದಲ್ಲಿ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿರುದ್ಧ ನ್ಯಾಯಾಲಯ ದೋಷಾರೋಪ ಹೊರಿಸಿದೆ.

ಟ್ರಂಪ್ ಜೊತೆಗೆ ಇತರ 18 ಮಂದಿ ವಿರುದ್ಧ ಫುಲ್ಟನ್ ಕೌಂಟಿ ನ್ಯಾಯಾಲಯವು ದೋಷಾರೋಪ ಹೊರಿಸಿದೆ.

‘ಚುನಾವಣಾ ಫಲಿತಾಂಶವನ್ನು ಕಾನೂನುಬಾಹಿರವಾಗಿ ಟ್ರಂಪ್ ಪರವಾಗಿರುವಂತೆ ಬದಲಾಯಿಸುವ ನಿಟ್ಟಿನಲ್ಲಿ ನಡೆದ ಪಿತೂರಿಯೊಂದಿಗೆ ಉದ್ದೇಶಪೂರ್ವಕ ಹಾಗೂ ಪ್ರಜ್ಞಾಪೂರ್ವಕವಾಗಿ ಇತರರು ಕೈಜೋಡಿಸಿದ್ದರು’ ಎಂದು ದೋಷಾರೋಪಪಟ್ಟಿಯಲ್ಲಿ ಹೇಳಲಾಗಿದೆ.

ಫುಲ್ಟನ್ ಕೌಂಟಿಯ ಜಿಲ್ಲಾ ಅಟಾರ್ನಿ ಫಾನಿ ವಿಲ್ಲಿಸ್ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

‘ಎಲ್ಲ ಆಪಾದಿತರನ್ನು ಒಟ್ಟಿಗೆ ವಿಚಾರಣೆಗೆ ಒಳಪಡಿಸಲು ಉದ್ದೇಶಿಸಿದ್ದಾಗಿ ವಿಲ್ಲಿಸ್ ಹೇಳಿದ್ದಾರೆ. ಮುಂದಿನ ಆರು ತಿಂಗಳ ಒಳಗಾಗಿ ಟ್ರಂಪ್ ವಿರುದ್ಧ ವಿಚಾರಣೆ ನಡೆಸಲಾಗುತ್ತಿದ್ದು, ಶೀಘ್ರವೇ ಈ ದಿನಾಂಕ ನಿಗದಿಪಡಿಸಲಾಗುವುದು’ ಎಂದು ತಿಳಿಸಿರುವುದಾಗಿಯೂ ವರದಿ ಮಾಡಿದೆ.

ಮುಂದಿನ ವರ್ಷ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದು ಶ್ವೇತಭವನ ವನ್ನು ಮತ್ತೊಮ್ಮೆ ಪ್ರವೇಶಿಸಬೇಕು ಎಂಬ ಪ್ರಯತ್ನದಲ್ಲಿರುವ ಟ್ರಂಪ್ ವಿರುದ್ಧ ಹೊರಿಸಲಾಗಿರುವ 4ನೇ ಕ್ರಿಮಿನಲ್ ಆರೋಪ ಇದಾಗಿದೆ.

ಟ್ರಂಪ್ ಅವರ ಮಾಜಿ ವಕೀಲ ರುಡಿ ಗಿಲಿಯಾನಿ, ಶ್ವೇತಭವನ ಸಿಬ್ಬಂದಿ ಮಾಜಿ ಮುಖ್ಯಸ್ಥ ಮಾರ್ಕ್ ಮಿಡೋವ್ಸ್, ಶ್ವೇತಭವನದ ಮಾಜಿ ವಕೀಲ ಜಾನ್ ಈಸ್ಟ್‌ಮನ್, ನ್ಯಾಯಾಂಗ ಇಲಾಖೆಯ ಮಾಜಿ ಅಧಿಕಾರಿ ಜೆಫ್ರಿ ಕ್ಲಾರ್ಕ್ ಆಪಾದಿತರ ಪೈಕಿ ಪ್ರಮುಖರು.

ಟ್ರಂಪ್ ಪ್ರತಿಕ್ರಿಯೆ: ಈ ಕುರಿತು ಪ್ರತಿಕ್ರಿಯಿಸಿರುವ ಡೊನಾಲ್ಡ್ ಟ್ರಂಪ್, ‘ತಮ್ಮ ವಿರುದ್ಧದ ದೋಷಾರೋಪಗಳು ರಾಜಕೀಯ ಪ್ರೇರಿತ’ ಎಂದಿದ್ದಾರೆ.


ಡೊನಾಲ್ಡ್ ಟ್ರಂಪ್


ಫಾನಿ ವಿಲ್ಲಿಸ್

ಆರ್ಥಿಕ ತಜ್ಞ ರಾಜ್ ಚೆಟ್ಟಿಗೆ ಹಾರ್ವರ್ಡ್ ವಿವಿ ಪ್ರಶಸ್ತಿ

ಹ್ಯೂಸ್ಟನ್ (ಪಿಟಿಐ): ಭಾರತ ಮೂಲದ ಆರ್ಥಿಕ ತಜ್ಞ ರಾಜ್ ಚೆಟ್ಟಿ ಅವರು, ಹಾರ್ವರ್ಡ್ ವಿಶ್ವವಿದ್ಯಾಲಯವು ಕೊಡಮಾಡುವ ಪ್ರತಿಷ್ಠಿತ ಜಾರ್ಜ್ ಲೆಡ್ಲಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಚೆಟ್ಟಿ ಅವರೊಟ್ಟಿಗೆ ಹಾರ್ವರ್ಡ್ ವೈದ್ಯಕೀಯ ಶಾಲೆಯ ಸಿಸ್ಟಂ ಬಯಾಲಜಿ ವಿಭಾಗದ ಪ್ರಾಧ್ಯಾಪಕ ಮೈಕೆಲ್ ಸ್ಪ್ರಿಂಗರ್ ಕೂಡ ಈ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಮೈಕಲ್, ತ್ವರಿತಗತಿಯಲ್ಲಿ ಉತ್ತಮ ಕೋವಿಡ್ ಪರೀಕ್ಷಾ ವಿಧಾನ ರೂಪಿಸಿದ ಹೆಗ್ಗಳಿಕೆ ಹೊಂದಿದ್ದಾರೆ.

ಸದ್ಯ ರಾಜ್ ಚೆಟ್ಟಿ ಅವರು ಹಾರ್ವರ್ಡ್ ವಿ.ವಿಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಅಲ್ಲದೇ, ಆರ್ಥಿಕ ಅಸಮಾನತೆಗೆ ಸಂಬಂಧಿಸಿದಂತೆ ಸಮಾಜ ವಿಜ್ಞಾನ ಹಾಗೂ ಅವಕಾಶದ ಒಳನೋಟಗಳನ್ನು ಕುರಿತು ಅಧ್ಯಯನ ನಡೆಸುವ ಸಂಸ್ಥೆಯ ನಿರ್ದೇಶಕರೂ ಆಗಿದ್ದಾರೆ. ವಿ.ವಿಯಲ್ಲಿ ಆರ್ಥಿಕ ತಜ್ಞರು ಈ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ.

ರಷ್ಯಾದಲ್ಲಿ ಸ್ಫೋಟ: 35 ಮಂದಿ ಸಾವು

ಮಾಸ್ಕೊ (ಎಪಿ): ರಷ್ಯಾದ ದಾಗಿಸ್ತಾನ್ ಗಣರಾಜ್ಯದಲ್ಲಿ ಭಾರಿ ಸ್ಫೋಟ ಸಂಭವಿಸಿ ಮೂವರು ಮಕ್ಕಳು ಸೇರಿ 35 ಜನರು ಮೃತಪಟ್ಟಿದ್ದಾರೆ ಮತ್ತು 16 ಮಕ್ಕಳು ಸೇರಿ 65 ಮಂದಿ ಗಾಯಗೊಂಡಿದ್ದಾರೆ ಎಂದು ಅಲ್ಲಿಯ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಗಣರಾಜ್ಯದ ರಾಜಧಾನಿ ಮಾಕಚ್ಕಲಾದ ಹೊರವಲಯದಲ್ಲಿಯ ಕಾರು ರಿಪೇರಿ ಮಳಿಗೆಯೊಂದರಲ್ಲಿ ಮೊದಲಿಗೆ ಬೆಂಕಿ ಕಾಣಿಸಿಕೊಂಡಿತು. ಬಳಿಕ ಹತ್ತಿರದಲ್ಲಿದ್ದ ಗ್ಯಾಸ್ ಸ್ಟೇಷನ್‌ಗೆ ಬೆಂಕಿ ಹರಡಿ ಸ್ಫೋಟ ಸಂಭವಿಸಿತು. ಅಧಿಕಾರಿಗಳು ಘಟನೆಗೆ ಸಂಬಂಧಿಸಿದಂತೆ ತನಿಖೆ ಆರಂಭಿಸಿದ್ದಾರೆ.

ಇಬ್ಬರು ಮಕ್ಕಳು ಸೇರಿ 11 ಮಂದಿ ಗಾಯಾಳುಗಳ ಪರಿಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.